
ಕಲ್ಯಾಣ ಕಿರಣ

ಫೆಬ್ರವರಿ-2009
ಬೆಲೆ-10.00



ಬಸವ ಧರ್ಮದ ಮಹಾಜಗದ್ಗುರು ಪೀಠವನ್ನಲಂಕರಿಸಿದ ಪೂಜ್ಯ

ಲಿಂಗಾಯತ ಧರ್ಮ ಧ್ವಜಕ್ಕೆ ವಂದನೆ ಸಲ್ಲಿಸುತ್ತಿರುವ ಶರಣ ಶರಣೆಯರು





"ದಾಸೋಹವೆ ದೇವಧಾಮ" ಎಂಬ ಗುರು ಬಸವಣ್ಣನವರ ವಾಣಿಯನ್ನು
ಆಚರಣೆಗೆ ತಂದ ಶರಣ ಮೇಳದ ದಾಸೋಹ ಮಂಟಪ



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-39	ಬಸವ ಶಕೆ-875	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-2	ಫೆಬ್ರವರಿ- 2009	ವಾರ್ಷಿಕ ಚಂದಾ 100/- ರೂ.

ಚನ್ನಬಸವೇಶ - ಮಂಟಪದ ಮಾಣಿಕ್ಯ

ಶ್ರೀ ಚನ್ನ ಬಸವೇಶ ಭಕ್ತರನು ಪೊರೆವೀಶ
ಜಯ ಭಜಕ ಜನ ಬಂಧು ಕಾರುಣ್ಯ ಸಿಂಧು ॥ ಪ ॥

ಪರಮ ಗುರು ಬಸವನ ಕರಕಮಲ ಜನಿತನೆ
ಶರಣ ಹೃತ್ಸರಸಿಯ ಶ್ರೀ ಪರಮಹಂಸೆಯೆ ॥ ಅ.ಪ ॥

ಕಾರ್ತೀಕ ಪ್ರತಿಪದೆಯ ದೀವಳಿಗೆಯಂದು
ಮಾತೆಯ ಗರ್ಭದಿಂ ನೀ ಬಂದೆಯಂದು।
ಅವ್ವ ನಾಗಾಂಬಿಕೆಯ ಅಕ್ಕರೆಯ ಚಿಣ್ಣನೆ
ಅಯ್ಯ ಶಿವದೇವನ ಮಮತೆಯ ತನುಜನೆ ॥ 1 ॥

ಷಟಸ್ಥಲದ ಚೌಕಟ್ಟ ವಚನ ಶಾಸ್ತ್ರಕೆ ಇತ್ತೆ
ಸಟೆಯ ಮಾಯೆಯ ಗೆಲಿದು ವಿರಾಗಿ ಎನಿಸಿದೆ।
ಉನ್ಮನಿಯ ಉಯ್ಯಾಲೆಯಲ್ಲಿ ತೂಗಿ ನಲಿದು
ಅನುಭವ ಮಂಟಪದ ಹೊಂಗಳಶವಾದೆ ॥ 2 ॥

ವಚನ ವಾಙ್ಮಯಕ್ಕಂದು ಸಂಕಷ್ಟ ಎರಗಿರಲು
ಕಾಷಾಯ ಧರಿಸಿಯೂ ಖಡ್ಗವನು ನೀ ಹಿಡಿದೆ।
ಮುನ್ನಡೆಸಿ ಶರಣರ ವಾಙ್ಮಯವ ರಕ್ಷಿಸಿದೆ
ಚನ್ನ ಹುಣ್ಣಿಮೆಯಂದು ಉಳವಿಯಲಿ ಬಯಲಾದೆ ॥ 3 ॥

ನೀ ಪಾದವಿಟ್ಟುದು ಸುಕ್ಷೇತ್ರ ತಾನಾಯ್ತು
ನೀನುಡಿದ ಮಾತೆಲ್ಲ ದಿವ್ಯ ಶಾಸ್ತ್ರವದಾಯ್ತು
ಶರಣ ಧರ್ಮದ ಉಳಿವು ನಿನ್ನಿಂದಲೇ ಆಯ್ತು
ಸಚ್ಚಿದಾನಂದನ ಮೆಚ್ಚಿಗೆಯ ಮಗನಾದೆ ॥ 4 ॥

ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯಾ ಶಿವನು;
ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ
ಚಿತ್ತದ ಪ್ರಕೃತಿಯ ಹಿಂಗಿಸಿ,
ಮುಕ್ತಿ ಪಥವ ತೋರಿದನೆಲ್ಲ ಅಸಂಖ್ಯಾತ ಗಣಂಗಳಿಗೆ.
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ
ಭಾವವೆಲ್ಲ ಮಹಾಘನದ ಬೆಳಗು
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಮ್ಯಕ್ ಜ್ಞಾನಿ ಚನ್ನಬಸವಣ್ಣನ ಶ್ರೀ ಪಾದಕ್ಕೆ ಶರಣೆಂದು,
ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ.

- ಜಗನ್ಮಾತಾ ಅಕ್ಕಮಹಾದೇವಿ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಫೆಬ್ರವರಿ - ಮಾರ್ಚ್ ತಿಂಗಳಲ್ಲಿ ಬರುವ ಹಬ್ಬ -ಹುಣ್ಣಿಮೆ - ಉತ್ಸವಗಳು

ಚನ್ನಹುಣ್ಣಿಮೆ	-	ಫೆಬ್ರವರಿ 9
ಉಳಿವೆಯಲ್ಲಿ ರಥೋತ್ಸವ	-	ಫೆಬ್ರವರಿ 9
ಕರ್ನಾಟಕ ಗಾಂಧಿ ಹರ್ಡೇಕರ್ ಮಂಜಪ್ಪನವರ ಜಯಂತಿ		ಫೆಬ್ರವರಿ 13
ಮಹಾಶಿವರಾತ್ರಿ	-	ಫೆಬ್ರವರಿ 23
ಗಣಮೇಳ	-	ಫೆಬ್ರವರಿ 23
ಸರ್ವ ಶರಣರ ದಿನಾಚರಣೆ	-	ಫೆಬ್ರವರಿ 23
ಪೂಜ್ಯ ಮಾತಾಜಿಯವರ 64ನೆಯ ವರ್ಧಂತಿ	-	ಮಾರ್ಚ್ 13
ಅಲ್ಲಮಪ್ರಭು ಜಯಂತಿ	-	ಮಾರ್ಚ್ 27
ಅಲ್ಲಮಗಿರಿಯಲ್ಲಿ ಗಣಮೇಳಾವ	-	ಮಾರ್ಚ್ 27 28, 29

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 9620058492

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||



866666



ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಳತೆ ಗ್ರಾಮದ ಬಳಿಯ ಅಲ್ಲಮ ಪ್ರಭು ಗಿರಿಯಲ್ಲಿ 2009 ಮಾರ್ಚ್ 27, 28, 29 ರಂದು ನಾಲ್ಕನೆಯ ಲಿಂಗಾಯತ ಗಣಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸ್ಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ -ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆ ಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀ ಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್)ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್,ನೀರಿನ ತೊಟ್ಟಿ, ಕಾರ್ಯಾಲಯ (Office)ಮತ್ತು ವಾಸಕ್ಕೆ 2 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಮುಂದೆ ವಿಸ್ತಾರವಾದ ಕಾರ್ಯ ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸಲಾಗುವುದು. ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು

ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು ಹೊಂದುವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ದಿನ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು."

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸಲಾಗುವುದು. ದಿ.27-3-2009 ಬೆಳಿಗ್ಗೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ), ಯುಗಾದಿ ಪಾಡ್ಯದ ದಿವಸ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ-ಅಲ್ಲಮ ಪ್ರಭು ತೊಟ್ಟಿಲು ಕಾರ್ಯಕ್ರಮ, ಸಿದರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತಿಯಿಂದ ಮೆರವಣಿಗೆ ಮೂಲಕ ಗುಡಿಗೆ ಹೋಗಲಾಗುವುದು. ದಿ.28-3-2009 ಸಂಜೆ 5-30ರಿಂದ ಅಲ್ಲಮ ಪ್ರಭು ಯೋಗ ಪೀಠಾರೋಹಣ ಪೂಜ್ಯ ಶ್ರೀ ಜಗದುರು ಬಸವ ಕುಮಾರ ಸ್ವಾಮಿಗಳಿಂದ. ದಿ. 29-3-2009ರಂದು ಬೆಳಿಗ್ಗೆ 10-30ಕ್ಕೆ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು : ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ: ಆಳತೆ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಆಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೂಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ. ಹಾತ್‌ಕಣಂಗಲೇ ಬಸ್‌ಸ್ಟಾಂಡ್ ಎದುರಿಗೆ ಉತ್ಸವ ಸಮಿತಿಯ ಕಾರ್ಯಾಲಯ ತೆರೆದಿದ್ದು ಊರಿಂದ ಬಂದವರು ಇಲ್ಲಿ ವಿಶ್ರಮಿಸಿಕೊಂಡು ಅಲ್ಲಮಗಿರಿಗೆ ಬರಬಹುದಾಗಿರುತ್ತದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತ್ತದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ. 26 ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು 27ರ ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

2009ರ ಮಾರ್ಚ್ 27, 28 ಮತ್ತು 29ರಂದು ನಡೆಯುವ ನಾಲ್ಕನೆಯ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಮಹಾಪೋಷಕರು	: 10000ರೂ ಮತ್ತು ಮೇಲೆ ಕೊಟ್ಟವರು	ಹಿತೈಷಿಗಳು	500 ರೂ
ಪೋಷಕರು	: 5000ರೂ ಮತ್ತು ಮೇಲೆ ಕೊಟ್ಟವರು	ಉತ್ಸವ ಸಮಿತಿ ಸದಸ್ಯರು	250 ರೂ
ದಾನಿಗಳು	: 1000ರೂ ಮತ್ತು ಮೇಲೆ ಕೊಟ್ಟವರು	ಪ್ರತಿನಿಧಿ ಶುಲ್ಕ	100 ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು ಅಥವಾ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಎಂದಾದರೂ ಬರೆಸಬಹುದು. ಪ್ರತಿ ವರ್ಷವೂ 1000 (ಒಂದು ಸಾವಿರ)ರೂ ಕೊಡುವ 770 ಜನ ಶರಣರ ಪಟ್ಟಿಯನ್ನು ಉತ್ಸವ ಸಮಿತಿಯವರು ಸಿದ್ಧಪಡಿಸುತ್ತಿದ್ದಾರೆ. ಸ್ವಯಂ ಪ್ರೇರಣೆಯಿಂದ ಯಾರು ಬೇಕಾದರೂ ತಮ್ಮ ಹೆಸರನ್ನು ಬರೆಸಬಹುದು.

ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು
ಲಿಂಗಾಯತ ಗಣಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ
ಆಳತೆ ಗ್ರಾಮ, ತಾ -ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ : (0)9822720714,
(0) 9850982877, (0)9420585881

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ
ಕಾರ್ಡ್ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23131476/23322790

22ನೇ ಶರಣ ಮೇಳದಲ್ಲಿ ತೆಗೆದುಕೊಂಡ ನಿರ್ಣಯಗಳು

1. ಕೂಡಲ ಸಂಗಮವು ತ್ವರಿತ ಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದು, ಯಾತ್ರಾರ್ಥಿಗಳು ಆಗಮಿಸುತ್ತಲಿದ್ದಾರೆ. ಪ್ರವಾಸಿಗರ ಅನುಕೂಲತೆಗಾಗಿ ಯಾತ್ರಿ ನಿವಾಸ ಮತ್ತು ಬಸವ ಧರ್ಮ ಪೀಠ ಟ್ರಸ್ಟಿನ ವಸತಿಗೃಹಗಳು ಇರುತ್ತವಾದರೂ ಸಂಗಮೇಶ್ವರ ದೇವಾಲಯದ ಬಳಿ ಜನಸಾಮನ್ಯರು ಉಳಿದುಕೊಳ್ಳಲು ಉಚಿತ ವ್ಯವಸ್ಥೆಯ ಧರ್ಮ ಶಾಲೆ ಮುಂತಾಗಿ ಇಲ್ಲ ಮತ್ತು ಸ್ನಾನ ಗೃಹ ಶೌಚಾಲಯಗಳ ಕೊರತೆ ಇದೆ. ಆದ್ದರಿಂದ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಗಮೇಶ್ವರ ದೇವಾಲಯದ ಬಳಿ ಧರ್ಮ ಶಾಲೆಯನ್ನು, ಶೌಚಾಲಯ -ಸ್ನಾನ ಗೃಹಗಳನ್ನು ನಿರ್ಮಿಸಲು ಮನವಿ ನೀಡಬೇಕೆಂದು ನಿರ್ಣಯಿಸಲಾಯಿತು.
2. **ಬಸವ ಕಲ್ಯಾಣದಲ್ಲಿ ಕೇಂದ್ರೀಯ ವಿಶ್ವ ವಿದ್ಯಾಲಯ:**
ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ಹಲವಾರು ರಾಜ್ಯಗಳಿಗೆ ಕೇಂದ್ರೀಯ ವಿಶ್ವವಿದ್ಯಾಲಯಗಳನ್ನು ಕೊಡಮಾಡಿದ್ದು ಕರ್ನಾಟಕಕ್ಕೂ ಒಂದು ವಿಶ್ವವಿದ್ಯಾಲಯವನ್ನು ಕೊಟ್ಟಿದೆ. ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿ ಹೊಂದಿರುವ ಹೈದರಾಬಾದ ಕರ್ನಾಟಕ್ಕೆ ಈ ವಿಶ್ವ ವಿದ್ಯಾಲಯ ಆಗಬೇಕೆಂಬುದು ಕರ್ನಾಟಕದ ಆಶಯವಾಗಿದೆ. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ವತಿಯಿಂದ ಸ್ಥಳ ವೀಕ್ಷಣೆಗೆ ಆಗಮಿಸಿ ಜಂಟಿ ಕಾರ್ಯದರ್ಶಿ ಸುನೀಲ ಕುಮಾರ ಅವರಿಗೆ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೋಕಿನ ಸುಂಟನೂರು-ಕಡಗಂಚಿ ಗ್ರಾಮಗಳ ಸಮೀಪದ ಸ್ಥಳವನ್ನು ತೋರಿಸಲಾಗಿದೆ. ಕರ್ನಾಟಕ ಸರಕಾರವು ಬೀದರ ಜಿಲ್ಲೆಯ ತಾಲ್ಲೋಕು ಸ್ಥಳವಾದ ಬಸವ ಕಲ್ಯಾಣವನ್ನು ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಆಯ್ಕೆ ಮಾಡುವುದು ಸೂಕ್ತ. ಈ ಬಗ್ಗೆ ಕರ್ನಾಟಕ ಸರಕಾರದ ಗಮನ ಸೆಳೆಯಲು ಮುಖ್ಯ ಮಂತ್ರಿಗಳನ್ನು ಉದ್ದೇಶಿಸಿ ಮನವಿ ಪತ್ರವನ್ನು ಜಿಲ್ಲಾಧಿಕಾರಿ, ಸಹಾಯಕ ಆಯುಕ್ತರು, ತಹಸೀಲ್ದಾರ, ಆಯಾ ಕ್ಷೇತ್ರದ ಶಾಸಕರಿಗೆ ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು. ಹಾಗೆಯೇ ಕೇಂದ್ರದ ಮಾನವ ಸಂಪನ್ಮೂಲ ಇಲಾಖೆಗೂ ಪತ್ರ ಬರೆಯಬೇಕೆಂದು ನಿರ್ಣಯಿಸಲಾಯಿತು.
3. ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಲ್ಲಮಗಿರಿಯಲ್ಲಿ 2009ನೇ ಇಸವಿಯ ಮಾರ್ಚ್ 27, 28, ಮತ್ತು 29ರಂದು ಲಿಂಗಾಯತ ಗಣಮೇಳವನ್ನು ಮಾಡಲು ನಿರ್ಣಯಿಸಲಾಯಿತು.
4. ತಮಿಳು ನಾಡಿನ ರಾಜಧಾನಿ ಚೆನ್ನೈ ಪಟ್ಟಣದಲ್ಲಿ ಎಪ್ರಿಲ್ 25, 26 ಮತ್ತು 27ರಂದು ಒಂಬತ್ತನೆಯ ಬಸವಧರ್ಮ ಸಮ್ಮೇಳನವನ್ನು ನಡೆಸಲು ನಿರ್ಣಯಿಸಲಾಯಿತು. 27ರಂದು ಬಸವ ಜಯಂತಿ ಬಂದಿರುವ ಕಾರಣ ಈ ದಿನಾಂಕಗಳಲ್ಲಿ ಬದಲಾವಣೆಯನ್ನು ತಂದು ಮೇ ತಿಂಗಳ **2, 3 ಮತ್ತು 4ರಂದು ಈ ಸಮ್ಮೇಳನವನ್ನು ನಡೆಸಲಾಗುತ್ತದೆ.**
5. ಲಿಂಗಾಯತರ ಜಾತಿ ಪ್ರಮಾಣ ಪತ್ರ ಕೇಳಿದಾಗ ತಹಸೀಲ್ದಾರ ಕಛೇರಿಯಿಂದ ವೀರಶೈವ ಲಿಂಗಾಯತ ಎಂದು ಪ್ರಮಾಣ ಪತ್ರ ಕೊಡುತ್ತಿರುವುದು ತಿಳಿದು ಬಂದಿದೆ. ವೀರಶೈವ ಲಿಂಗಾಯತವು ಲಿಂಗಾಯತ ಸಮಾಜದೊಳಗಣ ಒಂದು ಪಂಗಡ. ಇದನ್ನು ಇಡೀ ಸಮಾಜಕ್ಕೆ ಅನ್ವಯಿಸುವುದು ಸೂಕ್ತವಲ್ಲ. ಆದ್ದರಿಂದ ಇದನ್ನು ತಿದ್ದುಪಡಿ ಮಾಡಲು ಸರಕಾರವನ್ನು ಒತ್ತಾಯಿಸಬೇಕೆಂದು ನಿರ್ಣಯಿಸಲಾಯಿತು.
6. ಹಿಂದುಳಿದ ವರ್ಗದ ಆಯೋಗದಿಂದ ಇದೇ ವರ್ಷದ ಎಪ್ರಿಲ್ ತಿಂಗಳಿನಲ್ಲಿ ಜಾತಿವಾರು ಜನಗಣತಿ ನಡೆಯಲಿದೆ. ಆಗ ಲಿಂಗಾಯತ ಧರ್ಮಾನುಯಾಯಿಗಳು ಧರ್ಮ ಅಂಕಣ ಮತ್ತು ಜಾತಿ ಅಂಕಣ ಎರಡೂ ಕಡೆಯಲ್ಲಿ ಲಿಂಗಾಯತ ಎಂದೇ ಬರೆಯಿಸಬೇಕೇ ವಿನಾ ಉಪಜಾತಿ, ಜಾತಿಗಳ ಹೆಸರನ್ನು ಬರೆಸಬಾರದೆಂದು ನಿರ್ಣಯಿಸಲಾಯಿತು.
7. 2001ನೆಯ ಇಸವಿಯಲ್ಲಿ ನಡೆದ ಜನಗಣತಿಯಲ್ಲಿ ಲಿಂಗಾಯತ ಸಮಾಜದ ಸಂಖ್ಯೆ 5519622(ಐವತ್ತೈದು ಲಕ್ಷ ಹತ್ತೊಂಬತ್ತು ಸಾವಿರದ ಆರುನೂರಾ ಇಪ್ಪತ್ತೆರಡು) ಎಂದು ದಾಖಲಿಸಲ್ಪಟ್ಟಿದೆ. ಇದು ನಿಖರವಾದ ಸಂಖ್ಯೆಯಲ್ಲ. ಈ ಲೋಪಕ್ಕೆ

ಕಾರಣವೆಂದರೆ ಲಿಂಗಾಯತ ಸಮಾಜಕ್ಕೆ ಜನಗಣತಿಯ ಪರಿಪತ್ರದಲ್ಲಿ ಪ್ರತ್ಯೇಕ ಕಾಲಮ್(ಅಂಕಣ) ಇಲ್ಲದಿರುವುದು. ಹಿಂದಿನ ಜನಗಣತಿಯಲ್ಲಿ ಆದ ಇನ್ನೊಂದು ಪ್ರಮಾದವೆಂದರೆ ಲಿಂಗಾಯತರು ಮತ್ತು ವೀರಶೈವರ ಗಣತಿಯನ್ನು ಸೇರಿಸಿ ಮಾಡಿರುವುದು. 12ನೆಯ ಶತಮಾನದಲ್ಲಿ ಗುರು ಬಸವಣ್ಣನವರು ಕೊಟ್ಟ ಸ್ವತಂತ್ರ ಧರ್ಮವಾದ ಲಿಂಗಾಯತ ಧರ್ಮದ ಅನುಯಾಯಿಗಳು ಲಿಂಗಾಯತರು. ಬಸವ ಪೂರ್ವದಲ್ಲಿ ಶೈವದೊಳಗಣ ಒಂದು ಪಂಥವಾಗಿದ್ದ ವೀರಶೈವದ ಅನುಯಾಯಿಗಳು ವೀರಶೈವರು. ಸೈದ್ಧಾಂತಿಕವಾಗಿ ಎರಡೂ ಬೇರೆ ಬೇರೆ. ಆದ್ದರಿಂದ ಮುಂಬರುವ 2011ನೆಯ ಇಸವಿಯ ಜನಗಣತಿಯಲ್ಲಿ ಈ ಎರಡೂ ಲೋಪಗಳು ಮರುಕಳಿಸದಂತೆ ಮಾಡಲು, ಜನಗಣತಿ ಪರಿಪತ್ರದಲ್ಲಿ ಲಿಂಗಾಯತರಿಗೆ ಪ್ರತ್ಯೇಕ ಅಂಕಣ ಕೊಡಲು ಮತ್ತು ವೀರಶೈವರೊಡನೆ ಸೇರಿಸಿ ಲಿಂಗಾಯತರ ಜನಗಣತಿ ಮಾಡಬಾರದೆಂದು ಜನಗಣತಿಯ ರಿಜಿಸ್ಟ್ರಾರ ಜನರಲ್ ಅವರಿಗೆ ಪತ್ರಗಳನ್ನು ಬರೆಯಬೇಕೆಂದು ನಿರ್ಣಯಿಸಲಾಯಿತು ಮತ್ತು ಪತ್ರದ ಮಾದರಿಯನ್ನು ವಿತರಿಸಲಾಯಿತು.

8. ಭಾರತದ ಲೋಕಸಭಾ ಚುನಾವಣೆಯು ಬರುತ್ತಲಿದೆ. ವಿವಿಧ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸುತ್ತವೆ. ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವಾಗಿದ್ದು ಇದು ಹುಟ್ಟಿ ಒಂಬತ್ತು ನೂರು ವರ್ಷಗಳಾಗಿವೆ. ನಂತರ ಹುಟ್ಟಿದ ಸಿಖ್ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ದೊರೆತಿದೆ. ಆದರೆ ಲಿಂಗಾಯತ ಧರ್ಮಕ್ಕೆ ಇನ್ನು ಮಾನ್ಯತೆ ದೊರೆತಿಲ್ಲ ಆದ್ದರಿಂದ ಯಾವ ರಾಜಕೀಯ ಪಕ್ಷವು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡಿ, ಜನಗಣತಿಯಲ್ಲಿ ಪ್ರತ್ಯೇಕ ಕಾಲಮ್ ಕೊಡುವ ಭರವಸೆಯನ್ನು ತನ್ನ ಪಕ್ಷದ ಪ್ರಣಾಳಿಕೆಯಲ್ಲಿ ಪ್ರಕಟಿಸುವುದೋ ಆ ಪಕ್ಷಕ್ಕೆ ಮಾತ್ರ ಲಿಂಗಾಯತರು ಮತವನ್ನು ನೀಡಬೇಕೆಂದು ನಿರ್ಣಯಿಸಲಾಯಿತು.

9. **ಬಸವ ಜಯಂತಿಯ ವೈಭವಪೂರ್ಣ ಆಚರಣೆ**

ವಿಶ್ವ ಗುರು ಬಸವಣ್ಣನವರು ಅವತರಿಸಿದ್ದು ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ. ಕ್ರೈಸ್ತರು, ಭಕ್ತಿ ವೈಭವಗಳಿಂದ ಏಸುಕ್ರಿಸ್ತನ ಜಯಂತಿಯನ್ನು ಆಚರಿಸುವಂತೆ ಬಸವ ಭಕ್ತರು ಭಕ್ತಿ ಶ್ರದ್ಧೆಗಳಿಂದ ಖಾಸಗಿಯಾಗಿ ಮತ್ತು ಸಾರ್ವಜನಿಕವಾಗಿ ಆಚರಿಸಬೇಕು. ಅಂದು ಕಡ್ಡಾಯವಾಗಿ ಹೊಸ ಬಟ್ಟೆಗಳನ್ನು ಉಡಬೇಕು. ತಾವಷ್ಟೇ ಉಡುವುದಲ್ಲದೆ ಕೆಲವು ಬಡವರಿಗೆ ತಮ್ಮ ಶಕ್ತ್ಯಾನುಸಾರ ಹೊಸ ಬಟ್ಟೆಗಳನ್ನು ದಾಸೋಹ ಮಾಡಬೇಕು. ಮತ್ತು ಅಂದು ಉಡುವ ಬಟ್ಟೆ ಬಿಳಿಯ ಬಣ್ಣದ್ದೇ ಆಗಿರಬೇಕು. ಬಸವ ಜಯಂತಿಯಂದು ಮನೆಯ ಮೇಲೆ ಷಟ್ಕೋನ ಧ್ವಜವನ್ನು ಹಾರಿಸಬೇಕು. ಸಂಜೆಯ ವೇಳೆ ಮನೆಯ ಮುಂಬಾಗಿಲ ಹೊರಗೆ ಆರು ದಿವಸಗಳ ಕಾಲ ದೀಪವನ್ನು ಹಚ್ಚಿಡಬೇಕು. ಮೆರವಣಿಗೆಯನ್ನು ಭಕ್ತಿ ಪೂರ್ಣವಾಗಿ ಮಾಡಬೇಕು. ಮದ್ಯಪಾನ ಮಾಡಿ ಕುಣಿಯಬಾರದು ಮತ್ತು ಪಟಾಕಿಯನ್ನು ಸುಡುವುದರಿಂದ ಪರಿಸರ ಮಾಲಿನ್ಯ ಉಂಟಾಗುವ ಕಾರಣ ಬಸವ ಭಕ್ತರು ಯಾವುದೇ ಮೆರವಣಿಗೆಯಲ್ಲೂ ಪಟಾಕಿ ಸುಡಬಾರದೆಂದೂ ನಿರ್ಣಯಿಸಲಾಯಿತು.

10. **ಅಮೃತ ಮಹಲ ಕಾವಲುಗಳ ಸಂರಕ್ಷಣೆ**

ಅಮೃತ ಮಹಲ ಗೋ ತಳಿಯು ಕರ್ನಾಟಕದ ವಿಶೇಷ ಕೊಡುಗೆ. ರಾಜ್ಯದಾದ್ಯಂತ 59 ಅಮೃತ ಮಹಲ್ ಕಾವಲುಗಳಿದ್ದು ಇವು ಸರಕಾರದ ಸ್ವಾಮ್ಯಕ್ಕೆ ಸೇರಿವೆ. ಈಗಾಗಲೇ ಅದಕ್ಕಾಗಿ ಮೀಸಲಿಟ್ಟ ಜಮೀನು ಖಾಸಗಿಯವರಿಂದ ಒತ್ತುವರಿಯಾಗಿದೆ. ಒತ್ತುವರಿಯಾಗಿರುವುದನ್ನು ಖಾಸಗಿಯವರಿಂದ ಪಡೆದುಕೊಂಡು ಸ್ವತಃ ಸರಕಾರವೇ ಅಮೃತ ಮಹಲ್ ಗೋ ತಳಿಯ ಅಭಿವೃದ್ಧಿ ಮಾಡಲು ಒತ್ತಾಯಿಸಬೇಕೆಂದು ನಿರ್ಣಯಿಸಲಾಯಿತು.

11. ಬಸವ ಮಂಟಪಗಳ ಮುಂದಿನ ರಸ್ತೆಗಳಿಗೆ ಬಸವ ಮಂಟಪ ರಸ್ತೆ ಎಂದು ನಾಮಕರಣ ಮಾಡಬೇಕೆಂದು ನಿರ್ಣಯಿಸಲಾಯಿತು.

ಬಸವ ವಚನಾಮೃತ

109. ಶಕುನಗಳ ಅವಾಂತರ

ಹಾವಾಡಿಗನು ಮೂಕೊರತಿಯು ತನ್ನ ಕೈಯಲ್ಲಿ ಹಾವು-
ಮಗನ ಮದುವೆಗೆ ಶಕುನವ ನೋಡಹೋದಾಗ,
ಇದಿರಲ್ಲೊಬ್ಬ ಮೂಕೊರತಿಯ, ಹಾವಾಡಿಗನ ಕಂಡು
ಶಕುನ ಹೊಲ್ಲೆಂಬ ಚದುರನ ನೋಡಾ !
ತನ್ನ ಸತಿ ಮೂಕೊರತಿ - ತನ್ನ ಕೈಯಲ್ಲಿ ಹಾವು !
ತಾ ಮೂಕೊರೆಯ! ತನ್ನ ಭಿನ್ನವನರಿಯದೆ ಅನ್ಯರನೆಂಬ
ಕುನ್ನಿಯನೇನೆಂಬೆ ಲಿಂಗದೇವಾ? - ಬ.ವ.ದೀ.107

ಹಿಂದಿನ ಕಾಲದಲ್ಲಿ ಪರಪುರುಷನ ಸ್ನೇಹ ಮಾಡಿ ವ್ಯಭಿಚಾರಿಣಿಯಾದ ಮಹಿಳೆಯ ಮೂಗನ್ನು ಕತ್ತರಿಸುವ ಪದ್ಧತಿ ಇತ್ತು. ಒಬ್ಬ ಹಾವಾಡಿಗ. ಅವನ ಹೆಂಡತಿ ಮೂಗು ಕತ್ತರಿಸಲ್ಪಟ್ಟವಳು, ಅವನ ಕೈಯಲ್ಲಿ ಹಾವು. ಈ ದಂಪತಿಗಳು ಅವರ ಮಗನ ಮದುವೆಗೆ ಮುಹೂರ್ತವನ್ನು ಹುಡುಕಲು ಜ್ಯೋತಿಷಿಯ ಬಳಿ ಹೊರಟಿದ್ದಾರೆ. ಆಗ ಎದುರುಗಡೆಯಿಂದ ಇನ್ನೊಬ್ಬ ಹಾವಾಡಿಗ, ಅವನ ಮೂಗಿಲ್ಲದ ಹೆಂಡತಿ ಬರುವರು. ಅವರನ್ನು ನೋಡಿ "ಅಯ್ಯೋ, ಶಕುನವೇ ಸರಿಯಾಗಲಿಲ್ಲ; ಹಾವು ಬಂದು ಬಿಡ್ತು, ಹಾವಾಡಿಗ ಬಂದು ಬಿಟ್ಟ, ಅವನ ಹೆಂಡತಿಯೂ ಮೂಗು ಕತ್ತರಿಸಲ್ಪಟ್ಟವಳು" ಎಂದು ವಿಷಾದಿಸಿದರೆ ಅದು ಎಷ್ಟು ಹಾಸ್ಯಾಸ್ಪದ! ತನ್ನಲ್ಲಿರುವ ದೋಷಗಳನ್ನು ಗಮನಿಸದೆ ಇನ್ನೊಬ್ಬರ ಕೊರತೆಗಳನ್ನು ಇವನು ಹುಡುಕಲು ಹೊರಟುದು ಎಷ್ಟು ಅವಿವೇಕತನದ್ದು! ವ್ಯಕ್ತಿ ಮೊದಲು ತನ್ನ ಅಂತರಂಗದ ದೋಷ, ದೌರ್ಬಲ್ಯ, ಕೊರತೆಗಳನ್ನು ಅವಲೋಕನ ಮಾಡಿಕೊಳ್ಳಬೇಕು.

110. ತನು ಭಕ್ತ ಮನ ಭವಿ

ಅಂಗದಿಚ್ಛೆಗೆ ಮದ್ಯ ಮಾಂಸವ ತಿಂಬರು
ಕಂಗಳಿಚ್ಛೆಗೆ ಪರವಧುವ ನೆರೆವರು;
ಲಿಂಗಲಾಂಛನಧಾರಿಯಾದಲ್ಲಿ ಫಲವೇನು?
ಲಿಂಗಪಥವ ತಪ್ಪಿ ನಡೆವವರು?
ಜಂಗಮ ಮುಖದಿಂದ ನಿಂದೆ ಬಂದಡೆ
ಕೊಂಡ ಮಾರಿಂಗೆ ಹೋಹುದು ತಪ್ಪದು, ಲಿಂಗದೇವಾ! -ಬ.ವ.ದೀ.108

ದೇವರು ಜೀವಿಸಲು ಅಗತ್ಯವಾದ ದವಸ - ಧಾನ್ಯ, ಹಣ್ಣು-ಹಂಪಲು, ತರಕಾರಿ ಇತ್ಯಾದಿ ಎಲ್ಲ ಕೊಟ್ಟಿದ್ದರೂ ಮನುಷ್ಯ ನಾಲಿಗೆಯ ಚಪಲಕ್ಕಾಗಿ ಮದ್ಯ-ಮಾಂಸಗಳನ್ನು ರೂಢಿಸಿಕೊಂಡ. ಪರವಧುವಿನತ್ತ ಕಣ್ಣು ಆಕರ್ಷಿತವಾಗಿ, ಮನಸು ದುರ್ಬಲವಾಗಿ ಅತ್ತಲೇ ಹರಿದಾಡುವುದು. ಇಂಥ ಮನೋ ದೌರ್ಬಲ್ಯ ಉಳ್ಳ ಚಪಲರು ಇಷ್ಟಲಿಂಗವನ್ನು ಧರಿಸಿಯೂ ಫಲವೇನು ? ಅವರು ಲಿಂಗಪಥದಲ್ಲಿ ನಡೆಯದೆ ಇರುವವರು. ವ್ಯಕ್ತಿಯ ಬಗೆಗೆ ಜಂಗಮ ಮುಖದಿಂದ ನಿಂದೆ ಬಂದರೆ ಅದು ತಾನಾಗಿಯೇ ಮಾರಿಯ (ವಿನಾಶದ) ಬಾಯಿಗೆ ತುತ್ತಾದಂತೆ.

ಹಿಂದಿನ ಕಾಲದಲ್ಲಿ ವ್ಯಕ್ತಿಯಿಂದಾಗಲೀ, ಸಮುದಾಯದಿಂದಾಗಲೀ ತಪ್ಪುಗಳು ಘಟಿಸಿದಾಗ ಸಮಾಜದವರು ವಿಚಾರಣೆ ಏರ್ಪಡಿಸುತ್ತಿದ್ದರು. ವ್ಯಕ್ತಿಯು ತಪ್ಪಿತಸ್ಥನೆಂದು ನಿರ್ಧಾರವಾದರೆ ಅವನಿಗೆ ದಂಡ ವಿಧಿಸಲಾಗುತ್ತಿತ್ತು. ಅಂಥ ಸಭೆಯು ಜಂಗಮರ ದಿವ್ಯ ಸನ್ನಿಧಿಯಲ್ಲಿ ನಡೆಯುತ್ತಿತ್ತು. ಜಂಗಮ ಮುಖದಿಂದ "ಈತ ತಪ್ಪಿತಸ್ಥ" ಎಂದು ನಿಂದೆ ಬಂದರೆ ಅದು ಮಾರಿಯನ್ನು ಅರ್ಥಾತ್ ವಿನಾಶವನ್ನೇ ಎದುರು ಹಾಕಿಕೊಂಡಂತೆ.

ಗುರು ಬಸವಣ್ಣನವರು ಗಣಾಚಾರ ತತ್ತ್ವವನ್ನು ಬಳಕೆಗೆ ತಂದರು. ವ್ಯಕ್ತಿಯನ್ನು ತಿದ್ದಲಿಕ್ಕೆ ನಿಸ್ವಾರ್ಥ ಸಮಾಜ ಸೇವಕರಾದ ಗಣಾಚಾರಿಗಳು ಪ್ರಯತ್ನಿಸುತ್ತಿದ್ದರು. ದುರ್ವ್ಯಸನಕ್ಕೆ ಅನೀತಿಗೆ, ಮದ್ಯ - ಮಾಂಸ ಸೇವನೆಗೆ ಬಲಿಯಾದ ವ್ಯಕ್ತಿಗಳನ್ನು ತಿದ್ದಲು ಮುಳ್ಳಾವಿಗೆ ಕಾಯಕ, ಕಲ್ಬಾರ ಕಾಯಕ, ಕಂಬದ ತಕ್ಕೆ ಕಾಯಕ ಮುಂತಾದ ಗಣಾಚಾರಗಳನ್ನು ಪ್ರದರ್ಶಿಸುತ್ತಿದ್ದರು. ಯಾಗ -ಯಜ್ಞ, ಪಶುವಧೆಯ ವಿರುದ್ಧ ಸಹ ಸಾಮೂಹಿಕ ಗಣಾಚಾರವನ್ನು ಪ್ರದರ್ಶಿಸುತ್ತಿದ್ದರು. ವ್ಯಸನಿಗಳಿಗಾಗಿ ಗಣಾಚಾರಿಗಳು ಉಪವಾಸ ಮಾಡುತ್ತ ಮುಳ್ಳಾವಿಗೆ ಮೇಲೆ ನಿಂತರೆ, ಕುಳಿತರೆ, ಅವನು ತಿದ್ದಿಕೊಳ್ಳಲು ಯತ್ನಿಸುತ್ತಿದ್ದ.

111. ಡಾಂಭಿಕ ಭಕ್ತ

ಶಿವ ಜನ್ಮದಲ್ಲಿ ಹುಟ್ಟಿ, ಲಿಂಗೈಕ್ಯರಾಗಿ
ತಮ್ಮಂಗದ ಮೇಲೆ ಲಿಂಗವಿರುತಿರಲು
ಅನ್ಯರನೆ ಹಾಡಿ, ಅನ್ಯರನೆ ಹೊಗಳಿ.
ಅನ್ಯರ ವಚನವ ಕೊಂಡಾಡಲು, ಕರ್ಮ ಬಿಡದು; ಭವಬಂಧನ!
ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು!
ಇದು ಕಾರಣ, ಲಿಂಗದೇವಾ,
ನಿಮ್ಮ ನಂಬಿಯೂ ನಂಬದ ಡಂಭಕರಿಗೆ
ಮಳಲ ಗೋಡೆಯನಿಕ್ಕಿ, ನೀರಲ್ಲಿ ತೊಳೆದಂತಾಯಿತ್ತಯ್ಯಾ! ಬ.ವ.ದೀ.109

ಲಿಂಗಾಯತನು ಶಿವಜನ್ಮದಲ್ಲಿ ಹುಟ್ಟುವನು ಭವಿ ಜನ್ಮದಲ್ಲಲ್ಲ. ಏಕೆಂದರೆ ತಾಯಿಯು ಗರ್ಭವತಿ ಇರುವಾಗ 7 ತಿಂಗಳು ತುಂಬುತ್ತಿದ್ದಂತೆಯೇ ಗರ್ಭಲಿಂಗ ಧಾರಣ ಸಂಸ್ಕಾರ ನೀಡಲಾಗುವುದು. ಇದರ ಉದ್ದೇಶ ಬಹಳ ಘನವಾದುದು. ತಾಯಿಯ ಗರ್ಭದಲ್ಲಿ ಇರುವಾಗ ಮಗುವು ತಾಯಿಯ ಮೂಲಕ ಆಹಾರ ಪಡೆಯುವುದು, ತಾಯಿಯ ಮೂಲಕ ಉಸಿರಾಡುವುದು. ಅದೇ ರೀತಿ ತಾಯಿಯ ಮೂಲಕವಾಗಿಯೇ ಧರ್ಮವನ್ನು ಪಡೆಯಬೇಕು ಎಂಬುದೇ ಈ ಸಂಸ್ಕಾರದ ಉದ್ದೇಶ. ವ್ಯಕ್ತಿಯ ವ್ಯಕ್ತಿತ್ವ, ಸ್ವಭಾವ ಈ ಎಲ್ಲ ನಿರ್ಧಾರವಾಗುವುದು. ತಾಯಿಯ ಗರ್ಭದಲ್ಲಿ ಇರುವಾಗಲೇ! ಶಿಶುವು ಗರ್ಭದಲ್ಲಿರುವಾಗಲೇ ತಾಯಿಗೆ ಇಷ್ಟಲಿಂಗವನ್ನು ನೀಡಿ ಮಂತ್ರೋಪದೇಶ ಪಡೆದುಕೊಂಡ ಮಗು ಶಿವ ಜನ್ಮದಲ್ಲಿ ಹುಟ್ಟುವುದು. ಹುಟ್ಟಿದಾನಂತರ ಗರ್ಭವತಿಗೆ ಕೊಟ್ಟಿದ್ದ ಇಷ್ಟಲಿಂಗಧಾರಣೆ ಮಾಡಲಾಗುವುದು. ತಮ್ಮ ಶರೀರದ ಮೇಲೆ ಇಷ್ಟಲಿಂಗವನ್ನು ವ್ಯಕ್ತಿಯು ಧರಿಸಿಕೊಂಡು ಲಿಂಗಾಯತನಾಗಿರುವನು. ಹೀಗಾಗಿ ಅವನು ಒಂದು ನಿಯಮಕ್ಕೆ ಬದ್ಧನಾಗಿರುವನು. ಅದೆಂದರೆ ಈ ಶರಣ ಮಾರ್ಗದಲ್ಲಿ ಇರದವರನ್ನು ಕುರಿತು ಹೊಗಳುವುದು, ಗುಣಗಾನ ಮಾಡುವುದನ್ನು ಮಾಡಬಾರದು. ಹೇಗೆಂದರೆ ಸಿರಿಯಾಳನ ಭಕ್ತಿಯನ್ನು, ಸಿಂಧು ಬಲ್ಲಾಳನ ನಡೆಯನ್ನು ಕೊಂಡಾಡಬಾರದು. ಸಿರಿಯಾಳ ಶೆಟ್ಟಿಯು ಓರ್ವ (ಕಾಪಾಲಿಕ ಜೋಗಿ) ಶಿವ ವೇಷಧಾರಿ ಬಂದು ನರಮಾಂಸಬೇಕು ಎಂದಾಗ ತನ್ನ ಮಗ ಚೀಲಾಳನನ್ನೇ ಕಡಿದು ಅಡಿಗೆ ಮಾಡಿ ಇಟ್ಟ. ಇದು ಅನುಕರಣೀಯ ಭಕ್ತಿಯಲ್ಲ. ಓರ್ವ ಡಾಂಭಿಕ ವೇಷಧಾರಿ ಬಂದು ತನಗೆ ಸ್ತ್ರೀ ಸೌಖ್ಯ ಬೇಕು ಎಂದಾಗ ಸಿಂಧು ಬಲ್ಲಾಳನು ತನ್ನ ಹೆಂಡತಿಯನ್ನೇ ಆ ಡಾಂಭಿಕನಿಗೆ ಕೊಟ್ಟ. ಇವೆಲ್ಲ ಅನುಕರಣೀಯ ನಡೆಗಳಲ್ಲ.

ಇಲ್ಲಿ ಕೆಲವರು ಒಂದು ಸಂದೇಹ ಎತ್ತಬಹುದು. ಸ್ವತಃ ಬಸವಣ್ಣನವರೇ ಸಿರಿಯಾಳ, ಸಿಂಧು ಬಲ್ಲಾಳರ ಭಕ್ತಿ ತ್ಯಾಗದ ಬಗೆ ಹೊಗಳಿದ್ದಾರಲ್ಲ. ಉದಾ:

ಭಕ್ತಿ ಎಂತಹದಯ್ಯಾ? ದಾಸಯ್ಯ ಮಾಡಿದಂತಹುದಯ್ಯಾ
ಭಕ್ತಿ ಎಂತಹದಯ್ಯಾ? ಸಿರಿಯಾಳ ಮಾಡಿದಂತಹುದಯ್ಯಾ
ಭಕ್ತಿ ಎಂತಹದಯ್ಯಾ? ಕೂಡಲಸಂಗಮದೇವಾ
ನೀಬಾಣನ ಬಾಗಿಲ ಕಾಯ್ದಂತಹುದಯ್ಯಾ. ಬ.ವ.ದೀ.148

ದಾಸಯ್ಯ ಸೀರೆ ಕೊಟ್ಟುದು, ಸಿರಿಯಾಳ ಮಗನ ಕೊಂದು ಉಣಬಡಿಸಿದುದು, ಸಿಂಧು ಬಲ್ಲಾಳನು ತನ್ನ ಹೆಂಡತಿಯನ್ನೇ ಕೊಟ್ಟುದು, ಬಾಣನ ಬಾಗಿಲನ್ನೇ ಶಿವನು ಕಾಯುವಂತೆ ಮಾಡಿದುದು ಅಪ್ರತಿಮವಾದ ಭಕ್ತಿ ಎಂದು ಬಸವಣ್ಣನವರು ಇಲ್ಲಿ ಕೊಂಡಾಡಿದ್ದಾರೆ. ಇದು ಅವರಿನ್ನೂ ಬಾಲ್ಯಾವಸ್ಥೆಯಲ್ಲಿ ಬಾಲಿಶ ಮತ್ತು ಭಾವುಕ ಭಕ್ತಿಯನ್ನು ಮಾಡುವಾಗ ಬರೆದ ವಚನ. ಹಿಂದಿನ ಭಕ್ತರು ಮಾಡಿದುದೆಲ್ಲ ಅನುಕರಣೀಯ ನಡೆ ಎಂಬ ಭಾವುಕ ನಂಬಿಕೆ ಅವರಲ್ಲಿದ್ದು, ಆದರೆ ಬುದ್ಧಿ ಪಕ್ವವಾದಂತೆಲ್ಲ ಅವರಿಗೆ ಇದು ಅನುಕರಣೀಯ ನಡೆಯಲ್ಲ ಅನಿಸಿತು. ಆಗ ಧರ್ಮಪಿತ ಬಸವಣ್ಣನವರು ತಮ್ಮ ನಂಬಿಕೆಯನ್ನು ತಿದ್ದಿಕೊಂಡು, 'ಅವರುಗಳು ನಡೆದ ದಾರಿ ಭಯ ಕಾಣೆರಣ್ಣಾ, ಅವರು ಮಾಡಿದ ಭಕ್ತಿ ಅನುಕರಣೀಯವಲ್ಲ,' ಎಂದರು.

ಮುನ್ನಿನವರು ಹೋದ ದಾರಿ ಭಯ ಕಾಣೆರಣ್ಣಾ!
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ
ಭಯ ಕಾಣೆರಣ್ಣಾ!

ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣೆರಣ್ಣಾ!
ದಾಸನ ವಸ್ತ್ರ ಸೀಳಿದಂದಿಂದ ಭಯ ಕಾಣೆರಣ್ಣಾ!
ಅಘಟಿತಘಟಿತರು ವಿಪರೀತ ಚರಿತರು
ಕೂಡಲ ಸಂಗನ ಶರಣರು ನಡೆದ ದಾರಿ ಭಯ ಕಾಣೆರಣ್ಣಾ. -ಬ.ವ.ದೀ.149

ಶರಣರ ಮಾರ್ಗಕ್ಕೆ ಸಲ್ಲದ ಆಚರಣೆ ಮಾಡಿದ ಕೆಲವು ಭಕ್ತರ ಕಥೆಗಳನ್ನು ಪುರಾಣಕಾರರು, ಕೀರ್ತನಕಾರರು ರಂಜನೀಯವಾಗಿ ಹೇಳುವುದುಂಟು. ಇಂಥ ಕಥೆಗಳನ್ನು ಕೇಳಿ ಮುಗ್ಧ ಭಕ್ತರು ಭಾವುಕರಾಗಿ ವರ್ತಿಸಲು ಸಾಧ್ಯವಿದೆ. ಜನರನ್ನು ವೈಚಾರಿಕ ಭಕ್ತಿಪಥದಲ್ಲಿ ಕೊಂಡೊಯ್ಯುವ ವಚನ ವಾಙ್ಮಯಕ್ಕೆ ಹೊರತಾದ ಭಕ್ತಿಯನ್ನು ಮಾಡುವವರನ್ನು ಹಾಡಿ, ಹೊಗಳಬಾರದು.

ಅದೇ ರೀತಿ, ವಚನ ಧರ್ಮದ ಸಿದ್ಧಾಂತಕ್ಕೆ ಹೊರತಾದ ಶಾಸ್ತ್ರಗಳನ್ನೂ ಬೋಧಿಸಬಾರದು. ಉದಾಹರಣೆಗೆ ಮಹಾಭಾರತ, ರಾಮಾಯಣ, ಭಾಗವತ, ಭಗವದ್ಗೀತೆ, ದೇವಿ ಪುರಾಣ ಇನ್ನಿತರ ಪುರಾಣಗಳು. ಇನ್ನೂ ಮುಂದುವರಿದು ಹೇಳುವುದಾದರೆ ಪೌರಾಣಿಕ ಶೈಲಿಯಲ್ಲಿ ಬರೆದ ಬಸವ ಪುರಾಣಗಳು, ಪ್ರಭುಲಿಂಗಲೀಲೆ ಇತ್ಯಾದಿ. ಕೆಲವೊಂದು ಐತಿಹಾಸಿಕ ಮಾಹಿತಿಯನ್ನು ಹರಿಹರನ ಬಸವರಾಜ ರಗಳೆ, ಬಸವ ಪುರಾಣ, ಪ್ರಭುಲಿಂಗ ಲೀಲೆ ಮುಂತಾದವು ನೀಡುತ್ತವೆ. ಪ್ರೌಢರು ಆ ಐತಿಹಾಸಿಕ ಅಂಶಗಳನ್ನು ದಾಖಲೆಯಾಗಿ ತೆಗೆದುಕೊಳ್ಳಬೇಕು. ಆದರೆ ಈ ಎಲ್ಲ ಕೃತಿಗಳು ವಚನ ವಾಙ್ಮಯಕ್ಕೆ ವಿರುದ್ಧವಾದ ಕೈಲಾಸ, ಶಿವ -ಪಾರ್ವತಿ, ನಂದಿಯ ಅವತಾರ, ಶಾಪ ಮುಂತಾದ ಸಂಗತಿಗಳನ್ನೇ ಬಿಂಬಿಸುತ್ತವೆ. ಇವುಗಳ ಪರಿಣಾಮದಿಂದಲೇ ಕ್ರಾಂತಿಪುರುಷ ಕಲ್ಯಾಣ ಬಸವಣ್ಣನವರು ಎತ್ತಾಗಿ ಬಸವಣ್ಣದೇವರ ಗುಡಿಗಳಲ್ಲಿ ಜಡಗಟ್ಟಿ ಕುಳಿತಿರುವುದು. ಮಹಾಭಾರತ, ರಾಮಾಯಣಗಳಲ್ಲಿ ವ್ಯಕ್ತಿ ಪೂಜೆಯನ್ನು ವೈಭವೀಕರಿಸಲಾಗಿದೆ, ವರ್ಣ (ಜಾತಿ) ವ್ಯವಸ್ಥೆಯನ್ನು ಪುಷ್ಟೀಕರಿಸಲಾಗಿದೆ, ಭಾಗವತದಲ್ಲಿಯೂ ಅಷ್ಟೆ. ಭಗವದ್ಗೀತೆಯಲ್ಲಿ ಸಹ ವರ್ಣವ್ಯವಸ್ಥೆಯನ್ನು ಪುಷ್ಟೀಕರಿಸಲಾಗಿದೆ. ಏಕದೇವೋಪಾಸನೆಗೆ ಹೊರತಾದ ಬಹುದೇವತೋಪಾಸನೆಯನ್ನು ಬೋಧಿಸಲಾಗಿದೆ. ಆದ್ದರಿಂದ ಇಂಥವನ್ನು ಬೋಧಿಸುವುದರಿಂದ ಕೇಳುವುದರಿಂದ ಕರ್ಮ ಬಂಧನವು ಸುತ್ತುವರಿಯುವುದು; ಮುಂದೆ ಹೀನ ಜನ್ಮ ಪ್ರಾಪ್ತವಾಗುವುದು.

ಯಾವುದೊಂದನ್ನೂ ಸ್ಥಿರವಾಗಿ ನಂಬದ ತೋರಿಕೆಯ ಭಕ್ತರ ಭಕ್ತಿ ಮಣ್ಣಿನ ಗೋಡೆಯನ್ನು ನೀರಿನಿಂದ ತೊಳೆದಂತೆ, ದಿನದಿನಕ್ಕೆ ಗಟ್ಟಿಗೊಳ್ಳದು; ತೊಳೆದಂತೆಲ್ಲ ದುರ್ಬಲಗೊಳ್ಳುವುದು.

112. ಅಜ್ಞಾನಿಯ ಕೈಯೊಳಗಿನ ಲಿಂಗದರ್ಪಣ

ವಿತ್ತ ಬಹುವಾಗಿಯಿದ್ದಲ್ಲಿ ಫಲವೇನು, ಆಯುಷ್ಯವಿಲ್ಲದನ್ನಕ್ಕ?
ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?
ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?
ನಮ್ಮ ಲಿಂಗದೇವಯ್ಯನ ಅರಿಯದವರ ಕೈಯಲ್ಲಿ
ಲಿಂಗವಿದ್ದು ಫಲವೇನು? -ಬ.ವ.ದೀ.110

ಎಲ್ಲ ಪ್ರಕಾಶನಗಳಲ್ಲಿಯೂ ಅರ್ಥರೇಖೆಯಿದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕ? ಎಂದು ಈ ವಚನವು ಆರಂಭವಾಗುತ್ತದೆ. ಇದರಿಂದ ಗುರು ಬಸವಣ್ಣನವರು ಹಸ್ತ ಸಾಮುದ್ರಿಕೆ (ಅಂಗೈ ರೇಖೆ ನೋಡಿ ಭವಿಷ್ಯ ಹೇಳುವ ಶಾಸ್ತ್ರ)ಯನ್ನು ನಂಬುತ್ತಿದ್ದರೆಂಬ ತಪ್ಪು ಕಲ್ಪನೆ ಉಂಟಾಗಬಹುದು. ಬೇರೆ ಪಾಠಾಂತರ ಸಿಗುವುದೇ ಎಂದು ಕರ್ನಾಟಕ ವಿಶ್ವವಿದ್ಯಾಲಯದ 1969ರ ಪ್ರಕಟಣೆ ನೋಡಿದೆ. ಅಡಿ ಟಿಪ್ಪಣಿಯಲ್ಲಿ ಕೆಲವು ಪಾಠಾಂತರ ಸಿಕ್ಕವು. ಅದರಲ್ಲಿ ಒಂದು "ವಿತ್ತ ಬಹುವಾಗಿಯಿದ್ದಲ್ಲಿ ಫಲವೇನು ಆಯುಷ್ಯವಿಲ್ಲದನ್ನಕ್ಕ" ಎಂಬುದು ಸಿಕ್ಕಿತು. "ಅರ್ಥ ರೇಖೆ ಇದ್ದಲ್ಲಿ ಫಲವೇನು ಆಯುಷ್ಯರೇಖೆ ಇಲ್ಲದನ್ನಕ್ಕ?" ಎಂಬುದರ ಅಂತರಾರ್ಥವೂ ಅದೇ ಇದ್ದರೂ ರೇಖೆ ಎನ್ನುವ ಪದ ಗೊಂದಲವನ್ನುಂಟು ಮಾಡುತ್ತದೆ.

ಎಷ್ಟು ಸಂಪತ್ತಿದ್ದರೆ ಪ್ರಯೋಜನವೇನು? ಆಯುಷ್ಯವೇ ಇಲ್ಲದಿದ್ದರೆ ಎಂಬುದು ಸತ್ಯ ಸಂಗತಿ. ಹೇಡಿಯ ಕೈಯಲ್ಲಿ ಅತ್ಯಂತ ಶಕ್ತಿಶಾಲಿ ಆಯುಧವಾದ ಚಂದ್ರಾಯುಧವಿದ್ದರೂ ಪ್ರಯೋಜನವೇನು?

ಆರ್.ಎಸ್.ಎಸ್. ಒಂದು ಶಕ್ತಿಶಾಲಿ ಸಂಘಟನೆ. ಆದರೆ ಅದರ ಕೈಯಲ್ಲಿ ಇರುವುದು ವೈದಿಕ ಧರ್ಮದ ದುರ್ಬಲ ಆಯುಧ. ಲಿಂಗಾಯತ ಸಮಾಜ ಅತ್ಯಂತ ದುರ್ಬಲ ಸಮಾಜ, ಆದರೆ ಅದರ ಕೈಯಲ್ಲಿರುವುದು ಶಕ್ತಿಶಾಲಿ ಆಯುಧವಾದ ಲಿಂಗಾಯತ ಧರ್ಮ. ಹೀಗಾಗಿ ಇದು ಹಂದೆಯ (ಹೇಡಿಯ) ಕೈಯ ಚಂದ್ರಾಯುಧದಂತೆ ವ್ಯರ್ಥವಾಗುತ್ತಿದೆ. ಕುರುಡನ ಕೈಯಲ್ಲಿನ ದರ್ಪಣ ಹೇಗೆ ಉಪಯುಕ್ತವಲ್ಲವೋ, ಅದರ ಲಾಭವನ್ನು ಪಡೆದು ಅವನು ಹೇಗೆ ತನ್ನ ಮುಖವನ್ನು ಅಂದಗೊಳಿಸಿಕೊಳ್ಳಲಾರನೋ ಹಾಗೆ ಅಜ್ಞಾನಿಗಳ ಕೈಯಲ್ಲಿನ ಇಷ್ಟಲಿಂಗ. ಚಂಚಲ ಸ್ವಭಾವದ ಒಂದು ಕೋತಿಯ ಕೈಯಲ್ಲಿ ಬೆಲೆ ಬಾಳುವ ಮಾಣಿಕ್ಯವನ್ನು ಕೊಟ್ಟರೆ ಅದನ್ನು ಕಡಿದು ನೋಡಿ ತನಗೆ ಉಪಯುಕ್ತವಾಗುವ ಹಣ್ಣಲ್ಲ ಎಂದು ತಿಳಿದು ಮಾಣಿಕ್ಯವನ್ನು ಮಂಗ ಬಿಸಾಡುತ್ತದೆ. ಹಾಗೆಯೇ ಸೃಷ್ಟಿಕರ್ತ ಲಿಂಗದೇವನ ಸ್ವರೂಪವನ್ನು ಅರಿಯದವರ ಕೈಯಲ್ಲಿ ಅವನ ಕುರುಹಾದ ಇಷ್ಟಲಿಂಗವಿದ್ದರೆ ಅದರ ಸದುಪಯೋಗವನ್ನು ಪಡೆದುಕೊಳ್ಳಲಾರರು.

ಈ ವಚನವು ಇಂದಿನ ಲಿಂಗಾಯತ ಸಮಾಜಕ್ಕೆ ಬಹಳ ಚೆನ್ನಾಗಿ ಅನ್ವಯವಾಗುತ್ತದೆ. ದೇವರ ಸ್ವರೂಪವನ್ನೇ ಅರಿಯದ ಈ ಜನರು ನಿರಾಕಾರ ದೇವನ ಸಾಕಾರ ಕುರುಹಾದ ಇಷ್ಟಲಿಂಗದ ಮಹತಿಯನ್ನಾಗಲೀ, ಅದರ ಸದ್ಬಳಕೆಯನ್ನಾಗಲೀ ಅರಿಯರು. ದೇವನ ಸಾಕ್ಷಾತ್ಕಾರಕ್ಕೆ ಸಾಧನ, ಸ್ವಸ್ವರೂಪ ದರ್ಶನಕ್ಕೆ ಇಷ್ಟಲಿಂಗವು ಕನ್ನಡಿ ಎಂಬುದನ್ನು ಅರಿಯರು.

113. ಇಷ್ಟಲಿಂಗ ನಿಷ್ಠೆ ಇಲ್ಲದ ಭಕ್ತ

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
ಇದ್ದಡೇನೊ, ಶಿವ ಶಿವಾ ಹೋದಡೇನೋ? ಲಿಂಗದೇವಯ್ಯಾ,
ಹಡೆದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ. ಬ.ವ.ದೀ-111

ಗಂಡನು ವಿಶ್ವಾಸಿಕ, ಉತ್ತಮ. ಆದರೂ ವಿವಾಹವಾದ ಗಂಡನ ಮೇಲೆ ಪ್ರೀತಿ ಇಲ್ಲದ ಹೆಂಡತಿ ಅವನಿಗೆ. ಅದೇ ರೀತಿ ತಾನು ಧರಿಸಿರುವ ಇಷ್ಟಲಿಂಗದ ಮೇಲೆ ನಿಷ್ಠೆಯಿಲ್ಲದಿರುವ ಭಕ್ತನಾಗಿದ್ದಾನೆ ಒಬ್ಬ. ಇಂಥವರು ಬದುಕಿದ್ದರೇನು ಬಿಟ್ಟರೇನು? ಆ ಹೆಂಡತಿಯ, ಈ ಭಕ್ತನ ಮನ ಸ್ಥಿತಿ ಹೇಗೆಂದರೆ ಹಡೆದ ಆಕಳಿಗೆ ಉಣ್ಣದ ಕರುವ ಬಿಟ್ಟಂತೆ!

ಈವರೆಗೆ ಪ್ರಕಾಶನಗೊಂಡಿರುವ ಎಲ್ಲ ಪುಸ್ತಕಗಳಲ್ಲಿಯೂ ``ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ'' ಎಂದೇ ಪ್ರಕಟಗೊಂಡಿದೆ. ಊಡದ ಆವು ಉಣ್ಣದ ಕರು ಎಂಬುದು ಪ್ರಾಸಕ್ಕೆ ಚೆನ್ನಾಗಿ ಕಾಣಬಹುದೇ ವಿನಾ ಸೈದ್ಧಾಂತಿಕವಾಗಿ ಅಲ್ಲ. ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ ಎಂಬ ವಾಕ್ಯದಲ್ಲಿ ದೋಷವಿರುವುದು ಪತಿಯನ್ನು ಪ್ರೀತಿಸದಿರುವ ಸತಿಯಲ್ಲಿಯೇ ವಿನಾ ಪತಿಯಲ್ಲಲ್ಲ ಎಂಬುದು ಅತ್ಯಂತ ಸ್ಪಷ್ಟವಿದೆ. ಅದೇ ರೀತಿ ಲಿಂಗದೇವನು ಕಾರುಣ್ಯನಿಧಿ, ಮಮತಾಮಯಿ. ಅವನು ತನ್ನ ಕರುಣೆ, ಪ್ರೀತಿಯನ್ನು ಹರಿಸಲು ಸದಾ ಸಿದ್ಧನು. ಆದರೆ ಭಕ್ತನಲ್ಲಿ ಆ ನಿಷ್ಠೆಯಿಲ್ಲ. ಅವನು ದೇವನ ಪ್ರೀತಿಯನ್ನು ಅರಿಯಲು ಅಸಮರ್ಥನಾಗಿದ್ದಾನೆ? `ಊಡದ ಆವು' ಎಂದು ಬಳಸಿದರೆ ಆಗ ದೇವನ ಮೇಲೆ ದೋಷಾರೋಪಣೆ ಮಾಡಿ, ದೇವನು ಅನುಗ್ರಹ ನೀಡಲು ಉತ್ಸುಕನಲ್ಲದವನು ಎಂದಾಗುತ್ತದೆ. ಇದನ್ನು ಚಿಂತಿಸುತ್ತ ಪಾಠಾಂತರ (ಪುಟ 52ರ ಅಡಿ ಟಿಪ್ಪಣಿ) ಲಭ್ಯವಾಯಿತು.

ಕರು ಹಾಕಿದ ಹಸುವು ಹಾಲನ್ನು ಕುಡಿಸಲು ಉತ್ಕಟವಾಗಿ ಹಂಬಲಿಸುತ್ತದೆ. ಕರುವು ಕುಡಿಯಲು ಮನಸ್ಸಿಲ್ಲದೆ, ಕುಡಿಯುವ ಕಲೆ ಗೊತ್ತಿಲ್ಲದೆ ಮುದುಡಿ ಮಲಗಿದ್ದರೆ ತಾಯ ಹಸುವು ಹಗ್ಗ ಜಗುತ್ತ ಹಾಲು ಕುಡಿಸಲು ಚಟಪಟಿಸುತ್ತದೆ. ಅದೇ ರೀತಿ ಲಿಂಗದೇವನು ತನ್ನ ಕಾರುಣ್ಯದ ಹಾಲು ಕುಡಿಸಲು ಚಟಪಡಿಸುತ್ತಿದ್ದರೆ, ನಿಷ್ಠೆಯಿಲ್ಲದ ಅಜ್ಞಾನಿ ಭಕ್ತ ಗಂಡನನ್ನು ಪ್ರೀತಿಸದ ಹೆಂಡತಿಯಂತೆ ದೇವನಿಗೆ ವಿಮುಖನಾಗಿರುವನು.

114. ಮಾನಿಸಗಳ್ಳಿಯ ಚಂಚಲ ಪ್ರೀತಿ

ಅವಳ ವಚನ ಬೆಲ್ಲದಂತೆ, ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ!
ಕಂಗಳಲೊಬ್ಬನ ಕರೆವಳು; ಮನದಲೊಬ್ಬನ ನೆನೆವಳು!
ಲಿಂಗದೇವ ಕೇಳಯ್ಯಾ,
ಮಾನಸಗಳ್ಳಿಯ ನಂಬದಿರಯ್ಯಾ! ಬ.ವ.ದಿ -112

ಮಹಿಳೆಯರಲ್ಲಿ ಅನೇಕ ಬಗೆಯ ಜನರಿರುತ್ತಾರೆ. ಕೆಲವರು ಮಿಂಚಿನಂತೆ ಸುಳಿಯುತ್ತ

ಗಂಡಸರನ್ನು ಚಂಚಲಗೊಳಿಸುತ್ತಾರೆ. ಸರ್ವಜ್ಞ ಕವಿ ವರ್ಗೀಕರಿಸಿ ಅವರ ಸ್ವಭಾವಗಳನ್ನು ಚಿತ್ರಿಸುತ್ತಾನೆ. ಚಪಲಚಿತ್ತರಾದ ಹೆಂಗಳೆಯರು ಮೃದುವಾದ ನಾಟಕೀಯ ಮಾತುಗಳನ್ನಾಡಿ ಪುರುಷರನ್ನು ಆಕರ್ಷಿಸುತ್ತಾರೆ. ಮಾತು ಬೆಲ್ಲದಂತೆ ಸವಿಯಾಗಿರುತ್ತದೆ. ಆದರೆ ಹೃದಯದಲ್ಲಿ ಪ್ರೀತಿಯ ಸಿಹಿ ಇರದೆ ಸ್ವಾರ್ಥದ ನಂಜು ಇರುತ್ತದೆ. ಹಣ - ಆಸ್ತಿಪಾಸ್ತಿಯ ಮೇಲೆ ಕಣ್ಣಿಟ್ಟು ಅದನ್ನು ಸೆಳೆಯಬೇಕು ಎಂಬ ಧೂರ್ತಾಲೋಚನೆ ಕೆಲವರದು. ಗಂಡ ಹೆಂಡತಿ ಅಚ್ಚುಕಟ್ಟಾಗಿ ಸಂಸಾರ ಮಾಡುತ್ತಿದ್ದರೆ ಅದನ್ನು ಒಡೆಯಬೇಕು ಎಂಬ ಸಂಚು ಇನ್ನು ಕೆಲವರದು. ಚಂಚಲ ಚಿತ್ತೆಯರಾದ ಇಂಥವರು ಒಬ್ಬನನ್ನೇ ನಂಬಿ ಕೊಂಡು ಇರುವುದಿಲ್ಲ. ಕಣ್ಣಿನ ನೋಟದಿಂದ ಒಬ್ಬನನ್ನು ಆಹ್ವಾನಿಸುತ್ತಲೇ ಮನಸ್ಸಿನಲ್ಲಿ ಮತ್ತೊಬ್ಬನ ಮೇಲೆ ಕಣ್ಣಿಟ್ಟಿರುವಳು. ಇವಳು ಮಾನಸಗಳ್ಳೆ, ವಂಚಕಿ. ಸ್ತ್ರೀಯರಲ್ಲಿ ಇಂಥವರು ಇರುವಂತೆ ಪುರುಷರಲ್ಲೂ ಇಂಥ ಚಪಲ ಚೆನ್ನಿಗರಾಯರು ಇರುತ್ತಾರೆ.

ಬಹುದೇವತೋಪಾಸಕನ ಭಕ್ತಿಯನ್ನೂ ಇಂಥ ಚಂಚಲ ವೃತ್ತಿಗೆ ಹೋಲಿಸಬಹುದು. ಪತಿವ್ರತೆ ಒಬ್ಬ ಪತಿಯನ್ನು ನಿಷ್ಠೆಯಿಂದ ಸುಖ - ದುಃಖಗಳೆರಡರಲ್ಲೂ ನಂಬುವಂತೆ ಭಕ್ತನು ಸೃಷ್ಟಿಕರ್ತನನ್ನು ಏಕನಿಷ್ಠೆಯಿಂದ ನಂಬಬೇಕು. ಹಾಗೆ ಮಾಡದೆ ವಿಧ್ಯುಕ್ತವಾಗಿ ಕಟ್ಟಿಕೊಂಡ ಲಿಂಗಪತಿಯನ್ನು ಬಿಟ್ಟು, ದುಡ್ಡಿಗಾಗಿ ಒಬ್ಬ ದೇವತೆಯನ್ನು, ವಿಘ್ನನಿವಾರಣೆಗಾಗಿ ಇನ್ನೊಬ್ಬ ದೇವತೆಯನ್ನು - ಹೀಗೆಲ್ಲ ಪೂಜಿಸ ಹೋಗುವವನು ಮಾನಿಸಗಳ್ಳನೇ ಸರಿ.

115. ಪತಿವ್ರತಾ ಭಕ್ತಿ

ಹಾದರಕ್ಕೆ ಹೋದಡೆ, ಕಳ್ಳದಮ್ಮವಾಯಿತ್ತು;
ಹಾಳು ಗೋಡೆಗೆ ಹೋದಡೆ, ಚೇಳೂರಿತ್ತು;
ಅಬ್ಬರವ ಕೇಳಿ ತಳವಾರ ಉಟ್ಟ ಸೀರೆಯ ಸುಲಿದ;
ನಾಚಿ ಹೋದಡೆ ಮನೆಯ ಗಂಡ ಬೆನ್ನ ಬಾರನೆತ್ತಿದ;
ಅರಸು ಲಿಂಗದೇವ ದಂಡವ ಕೊಂಡ! -ಬ.ವ.ದೀ.113

ಓರ್ವ ಮಹಿಳೆ ಗಂಡನ ಕಣ್ಣು ತಪ್ಪಿಸಿ ರಾತ್ರಿ ವೇಳೆ ಅವನು ನಿದ್ದೆ ಮಾಡುತ್ತಿದ್ದಾನೆಂದು ಭಾವಿಸಿ ಪರಪುರುಷನ ಸಂಗ ಮಾಡಲಿಕ್ಕೆ ಹೋಗಿದ್ದಾಳೆ. ಆಗ ಓರ್ವ ಕಳ್ಳನ ಕೈಗೆ ಸಿಕ್ಕಿ ಧರಿಸಿದ ಆಭರಣಗಳನ್ನು ಕಳೆದುಕೊಳ್ಳುತ್ತಾಳೆ. ಹೆಚ್ಚಿನ ಅನಾಹುತ ತಪ್ಪಿಸಿಕೊಳ್ಳಲಿಕ್ಕೆ ಹಾಳು ಗೋಡೆಯ ಮರೆಗೆ ನಿಂತುಕೊಳ್ಳುತ್ತಾಳೆ. ಆಗ ಒಂದು ಭಯಂಕರವಾದ ಚೇಳು ಕುಟುಕುತ್ತದೆ. ಆ ನೋವು ತಡೆಯಲಾರದೆ ಚೀರಿಕೊಳ್ಳುತ್ತಾಳೆ. ರಾತ್ರಿ ಕಾವಲು ಕಾಯುವ ತಳವಾರ ಚೀರುವಿಕೆಯ ಶಬ್ದ ಕೇಳಿ, ಗಮನಿಸಿ ಆಕೆ ಕಳ್ಳಿಯೋ, ವ್ಯಭಿಚಾರಿಣಿಯೋ ಇರಬೇಕೆಂದು ಉಟ್ಟ ಸೀರೆಯನ್ನೇ ಕಳಚಿ ಹಾಕಿದ. ನಾಚಿ, ನೀರಾದ ಆಕೆ ಬೇಗನೆ ಮನೆ ಸೇರಬೇಕೆಂದು ಹೋದರೆ ಎಚ್ಚರಗೊಂಡಿದ್ದ ಗಂಡ ಚಾಟಿ ತೆಗೆದುಕೊಂಡು ಬೆನ್ನ ಮೇಲೆ ಬಾಸುಂಡೆ ಮೂಡುವಂತೆ ಹೊಡೆದ. ಇದು ಊರೆಲ್ಲ ಸುದ್ದಿಯಾಗಿ ರಾಜನು ಹಾದರ ಮಾಡಿದಕ್ಕಾಗಿ ಆಕೆಗೆ ಹೆಚ್ಚಿನ ದಂಡವನ್ನು ಹಾಕಿದ!

ಇದು ಒಬ್ಬ ಅನೀತಿವಂತ ಮಹಿಳೆಯ ಪಾಡು ಎಂಬ ಚಿತ್ರಣ ಪ್ರಸ್ತುತ ವಚನದಿಂದ ಮೂಡುತ್ತದೆ. ಆದರಿದನ್ನು ದ್ವಂದ್ವಾರ್ಥದ ಬೆಡಗಿನ ವಚನ ಎಂಬುದಾಗಿಯೂ ತಿಳಿಯಬಹುದು. ಲಿಂಗನಿಷ್ಠೆಯಿರದ ಭಕ್ತನ ಭಕ್ತಿಯನ್ನು ಅಧ್ಯಾತ್ಮಿಕ ಹಾದರಕ್ಕೆ ಹೋಲಿಸಿ, ``ಪರಮ ಪತಿವ್ರತೆಗೆ ಗಂಡನೊಬ್ಬ, ಅನ್ಯ ದೈವವೆಂಬುದು ಹಾದರ ಕಾಣಿರೊ'' ಎಂದು ಬೇರೆ ವಚನದಲ್ಲಿ ಹೇಳಿರುವುದನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಬಹುದು. ಗುರು ಎಂಬ ಪುರೋಹಿತ ಜಂಗಮನ ಸನ್ನಿಧಿಯಲ್ಲಿ ಶರಣ ಸತಿಯ ವಿವಾಹವನ್ನು ಇಷ್ಟಲಿಂಗ ಪತಿಯೊಡನೆ ಮಾಡಿ, ವಿವಾಹದ ಕುರುಹಾಗಿ ಇಷ್ಟಲಿಂಗವನ್ನು ಧರಿಸುವನು. ಭಕ್ತನು ಅದರ ಹೊರತು ಬೇರೊಂದನ್ನು ಆರಾಧಿಸಬಾರದು. ಆದರೆ ಇಷ್ಟಲಿಂಗದ ಮಹತಿಯನ್ನರಿಯದ ಅಜ್ಞಾನಿ ಲಿಂಗಾಯತರು ಹಲವು ದೈವಗಳ ಆರಾಧನೆಗೆ ಎಳಸುವರು. ಪತಿಯಲ್ಲಿ ಏಕನಿಷ್ಠೆ ಹೊಂದಿರುವ ಗೃಹಿಣಿಯು ನೆಮ್ಮದಿಯಿಂದ ಬಾಳ್ವೆ ಮಾಡುವಂತೆ ಏಕದೇವೋಪಾಸಕ ದೃಢ ಚಿತ್ತದಿಂದ ಸಾಧನೆಯಲ್ಲಿ ತೊಡಗಿದರೆ ಪರದೈವದ ಬೆನ್ನು ಹತ್ತುವ ಅಜ್ಞಾನಿ ಭಕ್ತ ಮೊದಲು ಪುರೋಹಿತನಿಂದ ಶೋಷಣೆಗೊಳಗಾಗಿ ತನ್ನ ಸಂಪತ್ತನ್ನು ಕಳೆದುಕೊಳ್ಳುತ್ತಾನೆ. ಮೂಢ ನಂಬಿಕೆಯ ಚೇಳನ್ನು ಕುಟುಕಿಸಿಕೊಂಡು ಭಯಗ್ರಸ್ತನಾಗುತ್ತಾನೆ. ಸ್ವಧರ್ಮಪಾಲನೆ ಬಿಟ್ಟು ಪರದೈವ ಉಪಾಸನೆಯ ಬೆನ್ನುಹತ್ತಿದ್ದು ನೋಡಿ ಸದ್ಗುರುವು ನೊಂದು, ಬೇಸರಿಸುತ್ತಾನೆ. ಲಿಂಗಾಯತನಾಗಿ ಹುಟ್ಟಿದ್ದೇನೆಂಬ ನಂಬಿಕೆಯಿಂದ

ಯಾಂತ್ರಿಕವಾಗಿ ಪೂಜೆ ಮಾಡಿದರೂ ಇಷ್ಟಲಿಂಗವು ಫಲಕೊಡದು. ಅಂತಿಮವಾಗಿ ಸೃಷ್ಟಿಕರ್ತ ಲಿಂಗದೇವನು ತನ್ನನ್ನು ಬಿಟ್ಟು ಅನ್ಯವನ್ನು ಆರಾಧಿಸಿದ್ದಕ್ಕೆ ಶಿಕ್ಷೆಯನ್ನು ನೀಡುವನು.

116. ಬಾಯಿಶೂರತನ ಸಲ್ಲದು.

ಗರಿ ತೋರೆ ಗಂಡರೆಂಬವರ ಕಾಣೆ;
ನಿರಿ ಸೋಂಕಲು ಮುನಿಯಿಲ್ಲ ನೋಡಯ್ಯಾ -
ನಂಟುತನವೇನವನ ? ಬಂಟತನವೇನವನ ?
ಹುಲ್ಲು ಕಿಚ್ಚು - ಹೊಲೆಯನ ಮೇಳಾಪ !
ಅಲ್ಲಿ ಹುರುಳಿಲ್ಲ, ಲಿಂಗದೇವಾ. - ಬ.ವ.ದೀ.114

ಬಾಣಗಳ ಹಿಂದಿನ ತುದಿಯಲ್ಲಿ ಗರಿಯಂತೆ ಕಾಣುವ ಭಾಗವಿರುತ್ತದೆ. ಅದರ ಮೇಲೆ ಅದು ಯಾವ ಅಸ್ತ್ರ ಎಂಬುದು ತಿಳಿದುಬರುತ್ತದೆ. ಅನೇಕರು ಶೂರರು ಎಂದು ತಮ್ಮನ್ನು ತಾವೇ ಕೊಚ್ಚಿಕೊಳ್ಳುವರು. ಆದರೆ ಎದುರಾಳಿಯ ಬಾಣದ ಗರಿಯನ್ನು ನೋಡುತ್ತಲೇ ಅವರ ಗಂಡೆದೆ ಕರಗಿ ನೀರಾಗುತ್ತದೆ. ಸೀರೆಯ ನೆರಿಗೆ ಸೋಂಕುತ್ತಲೇ ಗಂಡನ ಮುನಿಸು ಕರಗಿಯೇ ಹೋಗುತ್ತದೆ. (ಮಹಿಳೆಯ ಸೀರೆಯ ನೆರಿಗೆ ಸೋಂಕುತ್ತಲೇ ಎಂಥಾ ತಪಸ್ವಿಯೂ (ವಿಶ್ವಾಮಿತ್ರ ಮುನಿಯಂತೆ) ತನ್ನ ದೃಢ ಚಿತ್ತತೆಯನ್ನು ಕಳೆದುಕೊಳ್ಳುತ್ತಾನೆ ಎಂದೂ ಅರ್ಥಮಾಡಬಹುದು.)

ನಂಟುತನವೇನವನ ? ಕೆಲವರು ತಮ್ಮಲ್ಲಿ ಅಂಥ ಸಂಪತ್ತಿದೆ ಇಂಥ ಸಂಪತ್ತಿದೆ ಎಂದು ವಿವಾಹ ಸಂಬಂಧ ನಿಶ್ಚಯಿಸುವಾಗ ಹೇಳಿಕೊಳ್ಳುತ್ತಾರೆ. ನಿಜವಾದ ನಂಟುತನವೇನು, ಹೇಗೆ ಬೀಗರನ್ನು ಆದರಿಸುತ್ತಾರೆ ಎಂಬುದು ಮದುವೆಯಾದ ನಂತರವೇ ತಿಳಿದುಬರುವುದು. ಆಪತ್ತಿಗೆ ಆದವನೆ ನಂಟ ಎಂಬಂತೆ ಕಷ್ಟಕಾಲದಲ್ಲಿ ಸಹಾಯಕ್ಕೆ ಬಾರದ ನಂಟುತನದಿಂದ ಪ್ರಯೋಜನವೇನು? ಯುದ್ಧ ಕಾಲದಲ್ಲಿ ಉಪಯೋಗವಾಗದೆ ಬಂಟತನ ಯಾವ ಪುರುಷಾರ್ಥಕ್ಕೆ ? ಬಂಟ ಎಂದರೆ ಸೈನಿಕ ಎಂದಷ್ಟೇ ಅಲ್ಲ ಸೇವಕ ಎಂದೂ ಅರ್ಥವಿದೆ. ಆಪತ್ಕಾಲದಲ್ಲಿ ಸೇವೆ ಮಾಡದ ಬಂಟನಿದ್ದೂ ಉಪಯೋಗವೇನು ? ಹುಲ್ಲಿನ ಕಿಚ್ಚು ಶಾಶ್ವತವಲ್ಲ ಧಗ್ಗನೆ ಉರಿದು ಆರಿಬಿಡುವುದು. ಅದೇ ರೀತಿ ಹೊಲೆಯನ ಮೇಳಾಪ ರಾತ್ರಿ ವೇಳೆಯಲ್ಲಿ ಎಲ್ಲರೂ ಸೇರಿ ಸಾರಾಯಿ ಕುಡಿದು ಮನಸ್ಸಿಗೆ ಬಂದಂತೆ ಮಾತನಾಡುತ್ತ ಅವಾಸ್ತವಿಕವಾದ ಕನಸನ್ನು ಹೆಣೆಯುವರು. ಅವ್ಯಾವೂ ನನಸಾಗುವುದಿಲ್ಲ. ಮರುದಿನವು ಬಡತನ, ಅಸ್ಪೃಶ್ಯತೆ, ಮೂದಲಿಕೆ, ತಿರಸ್ಕಾರಗಳೆಂಬ ನಿತ್ಯ ಯಾತನೆಯಿಂದಲೇ ಆರಂಭವಾಗಿ ಅಂತ್ಯಗೊಳ್ಳುವುದು. ಆ ಮೇಳಾಪದಲ್ಲಿ ಹುರುಳಿಲ್ಲ.

ಈ ವಚನದ ಸಾರಾಂಶ ಬರಿ ಬಾಯಿ ಬಡಾಯಿ ಕೊಚ್ಚುವವರ ಕಾರ್ಯಸಾಧನೆಯಲ್ಲಿ ಏನೂ ಹುರುಳಿರದು. ಮಾತಿನಲ್ಲಿ ಮನೆ ಕಟ್ಟಿದರೆ ಸಾಲದು, ಕೃತಿ ಮುಖ್ಯ ಎಂಬುದೇ ಆಗಿದೆ.

117. ವ್ಯರ್ಥ ಪರಿಶ್ರಮ

ಅಳೆವುತ್ತ ಅಳೆವುತ್ತ ಬಳಲುವರಲ್ಲದೆ, ಕೊಳಗ ಬಳಲುವುದೆ ?
ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ ?
ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವುದೆ
?
ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೆ ?
ಲಿಂಗದೇವಾ, ಅರಸರಿಯದ ಬಟ್ಟಯೋ -ಬ.ವ.ದೀ.115

ಧಾನ್ಯದ ರಾಶಿಯನ್ನು ಅಳೆಯಲು ವ್ಯಕ್ತಿಗಳು ಕೊಳಗ (ಒಂದು ವಿಶಿಷ್ಟ ಅಳತೆಯ ಮಾಪು) ಹಿಡಿದು ಕೂರುವರು. ಅಳೆದು ಅಳೆದು ಚೀಲಕ್ಕೆ ಹಾಕುವರು. ಅಳೆಯುವ ಕೆಲಸ ಮಾಡ್ತಾ ಮಾಡ್ತಾ ಅಳೆಯುವವರು ದಣಿಯುತ್ತಾರಲ್ಲದೆ ಅಳೆಯುವ ಮಾಪನಕ್ಕೆ ದಣಿವಾಗದು. ಅದೇ ರೀತಿ ದಾರಿಯಲ್ಲಿ ನಡೆಯುವ ಪ್ರಯಾಣಿಕ ಬಳಲುವನೇ ವಿನಾ ಜಡವಾಗಿ ಹೆಬ್ಬಾವಿನಂತೆ ಮಲಗಿರುವ ದಾರಿ ಬಳಲುವುದಿಲ್ಲ. ಯುದ್ಧ ಮಾಡುತ್ತ - ಮಾಡುತ್ತ ಯೋಧ ಬಳಲುವನಲ್ಲದೆ ಅವನ ಕೈಯೊಳಗಣ ಆಯುಧ ದಣಿಯುವುದಿಲ್ಲ. ಅದೇ ರೀತಿ ಸೃಷ್ಟಿಕರ್ತನಾದ ಲಿಂಗದೇವನ ಸ್ವರೂಪಜ್ಞಾನ, ಅಂಗೈಯೊಳಗಣ ಕುರುಹು ಇಷ್ಟಲಿಂಗದ ಮಹತ್ವ ತಿಳಿಯದ ಯಾಂತ್ರಿಕ ಭಕ್ತನು ತಾನು ವ್ಯರ್ಥ

ಪರಿಶ್ರಮದಿಂದ ಬಳಲುವನೇ ವಿನಾ ಇಷ್ಟಲಿಂಗವು ಬಳಲುವುದಿಲ್ಲ.

118. ಬಹಿರಾಡಂಬರ

ಒಲೆಯ ಬೂದಿಯ ಬಲಿಯಲು ಬೇಡ;
ಒಲಿದಂತೆ ಹೂಸಿಕೊಂಡಿಪ್ಪುದು.
ಹೂಸಿ ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ?
ಒಂದನಾಡಹೋಗಿ ಒಂಬತ್ತನಾಡುವ ಡಂಭಕರ ಮೆಚ್ಚ
ನಮ್ಮ ಲಿಂಗದೇವಾ -ಬ.ವ.ದೀ.116

ಒಲೆಯ ತುಂಬಾ ಬೂದಿ ಬಳಿಯಲ್ಪಟ್ಟಿರುತ್ತದೆ. ಆದರೆ ಅದನ್ನು ತ್ರಿಪುಂಡ್ರ ಭಸ್ಮಧಾರಿ ಎಂದು ಬೆಲೆಕೊಡಲಾಗುವುದೆ? ಏಕೆಂದರೆ ಅದು ಭಸ್ಮದ ಅಂತರಾರ್ಥ ತಿಳಿದು ಧರಿಸಿಕೊಂಡಿರುವುದಿಲ್ಲ, ಮನ ಬಂದಂತೆ ಪೂಸಿಕೊಂಡಿರುವುದು. ಭಸ್ಮವನ್ನು ಧರಿಸಿ ಏನು ಫಲ ? ಮನಸ್ಸಿನಲ್ಲಿ ಹದುಳಿಗ ಭಾವ; ಎಲ್ಲರಿಗೂ ಲೇಸನ್ನು - ಒಳ್ಳಿತನ್ನು ಬಯಸುವ ಹೃದಯವಂತಿಕೆ ಇರಬೇಕು. ಕೆಲವರು ಧರ್ಮದ ಬಗ್ಗೆ ಆಚಾರದ ಬಗ್ಗೆ ಗಂಟೆಗಟ್ಟಳೆ ಮಾತನಾಡುವರು. ತಾವೇ ಅದನ್ನು ಅಳವಡಿಸಿಕೊಂಡಿರುವುದಿಲ್ಲ. ಇಂಥ ಡಂಭಕರನ್ನು ಲಿಂಗದೇವನು ಮೆಚ್ಚನು.

119. ದೇವನೊಬ್ಬ ನ್ಯಾಯಾಧೀಶ

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವ ಶೆಟ್ಟಿ,
ಒಮ್ಮನವಾದಡೆ ಒಡನೆ ನುಡಿವನು;
ಇಮ್ಮನವಾದಡೆ ನುಡಿಯನು,
ಕಾಣಿಯ ಸೋಲ, ಅರ್ಧಕಾಣಿಯ ಗೆಲ್ಲ,
ಜಾಣ ನೋಡವ್ವಾ ನಮ್ಮ ಲಿಂಗದೇವ ! -ಬ.ವ.ದೀ.117

ವಿಶ್ವಗುರು ಬಸವಣ್ಣನವರ ಸುಪ್ರಸಿದ್ಧ, ಜನಪ್ರಿಯ ವಚನಗಳಲ್ಲಿ ಇದೂ ಒಂದು. ಇದರಲ್ಲಿ ಬಂದಿರುವ ಲಿಂಗದೇವನ ಚಿತ್ರಣ ಅತ್ಯಂತ ಅರ್ಥಗರ್ಭಿತ. ಒಂದು ಭವ್ಯವಾದ, ಬಗೆ ಬಗೆಯ ವಸ್ತು -ಗಳಿಂದ ತುಂಬಿದ ಅಂಗಡಿ ಇದೆ. ಮಾಲಿಕನು ತಕ್ಕಡಿ ಹಿಡಿದು ಕುಳಿತಿದ್ದಾನೆ. ಅವನದು ಬಲು ಚೊಕ್ಕ ವ್ಯವಹಾರ. ಒಂದು ಕಾಣಿ, ಅರ್ಧ ಕಾಣಿಯಷ್ಟೂ ಮೋಸ ಮಾಡಲು ಸಿದ್ಧನಿಲ್ಲ. ಕೊಟ್ಟ ಹಣಕ್ಕೆ ತಕ್ಕಂತೆ ಸಾಮಾನು ಕೊಡುವುದಲ್ಲದೆ ಸೌಜನ್ಯದಿಂದ ಮಾತನಾಡಿಸುತ್ತಾನೆ. ಮೋಸಗೀಸ ಮಾಡಹೋದರೆ ಅವನು ಮಾತೂ ಆಡಿಸನು. ಅವನಿಗೂ ಮೋಸ ಮಾಡಬೇಕೆಂಬ ಗಿರಾಕಿಗಳೇನೂ ಕಡಿಮೆ ಇರುವುದಿಲ್ಲ. ಆದರೆ ಬಲು ಜಾಣನಾದ ಆ ವಣಿಕನು ಯಾರಿಂದಲೂ ಮೋಸ ಹೋಗದಷ್ಟು ಚತುರ.

ಈ ಅರ್ಥಗರ್ಭಿತ ಹೋಲಿಕೆಯಿಂದ ದೇವರನ್ನು ಎರಡು ರೀತಿಯಲ್ಲಿ ಚಿತ್ರಿಸಲಾಗಿದೆ.

1. ದೇವನು ನ್ಯಾಯಬದ್ಧ ವ್ಯಾಪಾರಿ.
2. ದೇವನು ನ್ಯಾಯಾಧೀಶನೂ ಅಹುದು.

ಈ ಭೂಮಿಯು ಅತ್ಯಂತ ಸುಂದರವಾದ ದೇವರ ಕೊಡುಗೆ. ದೊಡ್ಡ ಅಂಗಡಿಯಂತೆ. ಪಂಚ ಭೂತಗಳು, ಸುಂದರ ಪ್ರಕೃತಿ, ಜಡ -ಚೇತನಗಳಿಂದ ಕೂಡಿದ ಜಗತ್ತು - ಜೀವಾತ್ಮರು. ಜೀವಾತ್ಮರು ವಿವಿಧ ಕರ್ಮಗಳನ್ನು ಮಾಡುತ್ತ ಚಟುವಟಿಕೆಯಿಂದ ಇರುವರು. ಅವರ ಕರ್ಮ ಸಂಚಯವೇ ಹಣ; ಅದಕ್ಕೆ ತಕ್ಕಂತೆ ಸುಖದುಃಖಗಳೆಂಬ ಪದಾರ್ಥಗಳನ್ನು ದೇವರು ನೀಡುವನು. ಅವನ ವ್ಯಾಪಾರ ಕರಾರು ವಾಕ್ಕಾಗಿರುತ್ತದೆ. ಕಾಣಿ ಜಾಸ್ತಿಯೂ ಇರದು ಅರ್ಧಕಾಣಿ ಕಡಿಮೆಯೂ ಇರದು. ಯಾವುದೇ ಪಕ್ಷ ಪಾತ, ಲಂಚ, ರುಷುವತ್ತು ಅಲ್ಲಿಲ್ಲ. ದೇವನ ನಿಯಮಕ್ಕೆ ತಕ್ಕಂತೆ ಇರುವವರ ಸಂಗಡ ಮಾತು. ಒಳಗೆ ಹೊರಗೆ ಬೇರೆಯೇ ಇರುವ ಕಪಟಿಗಳ ಜೊತೆ ಮೌನ. ಇಂಥ ಜಾಣ ವ್ಯಾಪಾರಿ ಪರಮಾತ್ಮನು. 2. ದೇವನು ನ್ಯಾಯದ ತಕ್ಕಡಿ ಹಿಡಿದ ನ್ಯಾಯಾಧೀಶ. ಮಾನವನು ಮಾಡುವ ಕರ್ಮಗಳು, ಪುಣ್ಯ-ಪಾಪಗಳಿಗೆ ತಕ್ಕಂತೆ ಸುಖ -ದುಃಖಗಳನ್ನು ನೀಡುವವನು, ದೇವನು ಸರ್ವಜ್ಞ, ಸರ್ವದ್ರಷ್ಟಾರ. ಅವನನ್ನು ವಂಚಿಸಲು ಯಾರಿಗೂ ಸಾಧ್ಯವಿಲ್ಲ. ನ್ಯಾಯ ಮಾರ್ಗದಲ್ಲಿ ನಡೆಯುವವರಿಗೆ ಜ್ಞಾನ, ಅನುಗ್ರಹ ನೀಡುವನು. ಅನ್ಯಾಯಿಗಳೊಡನೆ ನುಡಿಯದೆ ಮೌನವಾಗಿರುವನು. ಅಂದರೆ ಅನುಗ್ರಹಿಸುವುದಿಲ್ಲ. ಹಿಂದಿನ ಕಾಲದಲ್ಲಿ ತೂಕ ಮಾಡುವಾಗ ಬಳಸುತ್ತಿದ್ದ ಅತಿ ಸಣ್ಣ ಬೊಟ್ಟು ಎಂದರೆ ಅರ್ಧ ಕಾಣಿ.

120. ನಂಬಿ ಕರೆದರೆ ಓ ಎನ್ನನೆ ಶಿವನು

ನಂಬರು ನಚ್ಚರು ಬರಿದೆ ಕರೆವರು,
ನಂಬಲರಿಯರೀ ಲೋಕದ ಮನುಜರು!
ನಂಬಿ ಕರೆದಡೆ, ಓ ಎನ್ನನೆ ಶಿವನು?
ನಂಬದೆ ನಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ಲಿಂಗದೇವ ! -ಬ.ವ.ದೀ.118

ನಂಬಿಕೆ ಎನ್ನುವುದು ಉದಾತ್ತ ಗುಣ. ಮಾನವರ ಮಧ್ಯೆ ವ್ಯವಹಾರ ಮಾಡುವಾಗ ಪರಸ್ಪರರಲ್ಲಿ ನಂಬಿಕೆ ಬೇಕಾಗುತ್ತದೆ. ತಾಯಿ ತಂದೆ ಮಕ್ಕಳಲ್ಲಿ, ಪತಿ ಪತ್ನಿಯಲ್ಲಿ, ಸ್ನೇಹಿತರಲ್ಲಿ - ಹೀಗೆ ನಂಬಿಕೆ ಇಡಬೇಕಾಗುತ್ತದೆ, ಇಂಥ ನಂಬಿಕೆಯು ದೇವರನ್ನು ಕುರಿತು ಇಡುವಾಗ ಬಹಳ ದೃಢವಾಗಿ ಇರಬೇಕಾಗುತ್ತದೆ. ಅರ್ಧಂಬರ್ಧ ವಿಶ್ವಾಸದಿಂದ ವ್ಯವಹರಿಸಿದಾಗ ಮಾನವರೇ ನಂಬುವುದಿಲ್ಲ ಎಂದಾಗ ಇನ್ನು ಸರ್ವಜ್ಞನಾದ ದೇವನು ನಂಬುವನೆ? ಧರ್ಮವಂತರು ಎನ್ನಿಸಿಕೊಂಡ ಎಷ್ಟೋ ಜನರು ಯಾಂತ್ರಿಕವಾಗಿ ದೇವರನ್ನು ನಂಬಿದ್ದೇವೆ ಎನ್ನುತ್ತಾರೆ. ಅವರು ಏನನ್ನೋ ದೇವರು ಎಂದು ನಂಬಿರುತ್ತಾರೆ; ಪೂರ್ಣ ಶರಣಾಗತಿಯಿಂದ, ಪೂರ್ಣ ತಿಳುವಳಿಕೆಯಿಂದ ನಂಬಿರುವುದಿಲ್ಲ. ಹೀಗಾಗಿ ಅವನ ಕರೆ ದೇವನ ಗಮನ ಸೆಳೆಯಲಾರದಷ್ಟು ಕ್ಷೀಣವಾಗಿರುತ್ತದೆ. ಲೋಕದ ಜನರು ನಂಬಲು ಅರಿಯರು. ದೃಢಚಿತ್ತದಿಂದ ನಂಬಿ ಕರೆದರೆ ಪರಮಾತ್ಮನು ಖಂಡಿತಾ ಓಗೊಡುವನು. ಹಿಂದೆ ಸೌಂದರ ನಂಬಿ ಎಂಬ ಶಿವಭಕ್ತನು ಕರೆದಾಗ ಓಗೊಡಲಿಲ್ಲವೆ? ದೃಢವಾಗಿ ನಂಬದೆ ಕರೆಯುವವರಿಗೆ ಇನ್ನೂ ಜೋರಾಗಿ ಕೂಗಿ, ಕೊಂಬು ಕಹಳೆ ಊದಿ ಕೂಗಿ; ಆದರೆ ನಾನು ನಿಮಗೆ ಗೋಚರನಾಗುವುದಿಲ್ಲ, ಎಂದು ಲಿಂಗದೇವನು ಹೇಳುವನಂತೆ.

121. ಬಹಿರಂಗದ ಡಾಂಭಿಕ ಕ್ರಿಯೆ.

ಹುತ್ತವ ಬಡಿದಡೆ ಹಾವು ಸಾಯಬಲ್ಲುದೆ ಅಯ್ಯಾ?
ಅಘೋರ ತಪವ ಮಾಡಿದಡೇನು ?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ,
ಲಿಂಗದೇವ ? -ಬ.ವ.ದೀ.119

ಹುತ್ತದ ಒಳಗೆ ಕೋವಿಯ ಗುಂಟ ಸಾಗಿ ಹಾವು ಆರಾಮವಾಗಿ ಆಶ್ರಯಪಡೆದಿರುತ್ತದೆ. ಅದನ್ನು ಕೊಲ್ಲಬೇಕು ಎಂದು ಹುತ್ತವನ್ನು ಬಡಿದರೆ ಹಾವಿಗೆ ಏನೇನೂ ಆಗದು. ಹಾಗೆ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರಾದಿಗಳೆಂಬ ಹಾವುಗಳು ಶರೀರವೆಂಬ ಹುತ್ತದಲ್ಲಿ, ಮನಸ್ಸೆಂಬ ಕೋವಿಯಗುಂಟ ಸಾಗಿ ಒಳಗಿದ್ದು ಅಂತರಂಗವನ್ನು ಕಲುಷಿತಗೊಳಿಸುತ್ತವೆ. ಕೆಲವು ಮೂಢರು ಮತ್ತು ಕೆಲವು ಕಂದಾಚಾರಿಗಳು ನೀರು ಮುಳುಗಿ ಪರಿಶುದ್ಧರಾದೆವು ಎಂದು ಭಾವಿಸಿದರೆ ಮತ್ತೆ ಕೆಲವರು ಕಠಿಣವಾದ ತಪಸ್ಸು ಮಾಡಿ ದೇಹ ದಂಡನೆ ಮಾಡಿಕೊಳ್ಳುತ್ತಾರೆ. ಇವೆಲ್ಲವೂ ಹುತ್ತವನ್ನು ಬಡಿದಂತೆಯೇ ಸೈ. ಕಾಮಕ್ರೋಧಾದಿಗಳೆಂಬ ಹಾವುಗಳನ್ನು ಕೊಂದು ಅಂತರಂಗದ ಶುದ್ಧಿಯನ್ನು ಸಾಧಿಸದಿದ್ದರೆ ಲಿಂಗದೇವನು ಒಲಿಯನು.

122. ಸದ್ಭಾವಿಗಳಲ್ಲಿ ದೇವನಿಪ್ಪ

ಕಾಮವೇಕೋ, ಲಿಂಗಪ್ರೇಮಿಯೆನಿಸುವಂಗೆ ?
ಕ್ರೋಧವೇಕೊ, ಶರಣವೇದ್ಯನೆನಿಸುವಂಗೆ ?
ಲೋಭವೇಕೊ, ಭಕ್ತಿಯ ಲಾಭವ ಬಯಸುವಂಗೆ ?
ಮೋಹವೇಕೊ, ಪ್ರಸಾದವೇದ್ಯನೆನಿಸುವಂಗೆ ?
ಮದಮತ್ಸರವುಳ್ಳವಂಗೆ ಹೃದಯಶುದ್ಧವೆಲ್ಲಿಯದೊ ?
ಹದುಳಿಗರಾದಲ್ಲಿಪ್ಪ ನಮ್ಮ ಲಿಂಗದೇವ ! -ಬ.ವ.ದೀ.120

ಕೆಲವನ್ನು ಗಳಿಸಬೇಕಾದರೆ ಕೆಲವನ್ನು ಕಳೆದುಕೊಳ್ಳಬೇಕಾಗುತ್ತದೆ. ಅರ್ಥಾತ್ ತೊರೆಯಬೇಕಾಗುತ್ತದೆ. ದೇವನಲ್ಲಿ ಅಪಾರ ಪ್ರೇಮ ಬೆಳೆದು ಲಿಂಗಪತಿ ಶರಣಸತಿ ಭಾವದಿಂದ ಆರಾಧಿಸುವ ಭಕ್ತ ಅಥವಾ ಭಕ್ತೆ ಸತಿಯೊಡನೆ ಅಥವಾ ಪತಿಯೊಡನೆ ಕಾಮ ಸಂಬಂಧವನ್ನು ತೊರೆಯಬೇಕಾಗುತ್ತದೆ.

ಇನ್ನೊಂದು ದಿಕ್ಕಿನಿಂದ ನೋಡಿದರೆ ಅವರು ಉದ್ದೇಶಪೂರ್ವಕವಾಗಿ ತೊರೆಯುವುದಲ್ಲ. ಅವರ ಮನಃಸ್ಥಿತಿಯೇ ಹಾಗೆ ಆಗಿ ಬಿಡುತ್ತದೆ. ಏಕೆಂದರೆ ಲಿಂಗದೇವನು ಭಕ್ತನ ಸರ್ವಾಂಗವನ್ನೂ ವ್ಯಾಪಿಸಿಕೊಂಡು ಬಿಡುತ್ತಾನೆ. ಕೆಲವು ಶರಣರು ಉದಾ: ಅಕ್ಕಮಹಾದೇವಿ, ಉರಿಲಿಂಗದೇವ ಮುಂತಾದವರು ಆರಂಭದಲ್ಲೇ ಸತಿಭಕ್ತಿಯನ್ನು ಮಾಡುವರು. ಮತ್ತೆ ಕೆಲವರು ಷಟಸ್ಥಲದಲ್ಲಿ 5ನೆಯ ಸ್ಥಲವಾದ ಶರಣ ಸ್ಥಲಕ್ಕೆ ಏರಿದಾಗ ಸತಿಭಕ್ತಿಯನ್ನು ಅಳವಡಿಸಿಕೊಳ್ಳುವರು. ಮೊದಲನೆಯ ಪ್ರಕಾರದವರು ಆರಂಭದಲ್ಲೇ ವೈರಾಗ್ಯದ ಪಥವನ್ನು ಹಿಡಿದರೆ ಎರಡನೆಯ ಬಗೆಯವರು ಶರಣ ಸ್ಥಲಕ್ಕೆ ಏರಿದಾಗ ಸತಿ/ ಪತಿ ಸಂಗವನ್ನು ತೊರೆಯುವರು. ಲಿಂಗದೇವನನ್ನು ತಂದೆ ಎಂಬ ಭಯ ಭಕ್ತಿಯಿಂದ ಆರಾಧಿಸುವುದು ಬೇರೆ; ಪತಿ ಎಂದು ಪ್ರೀತಿಸುವುದು ಬೇರೆ. ಲಿಂಗಪತಿ ಎಂದು ಪ್ರೀತಿಸುವುದು ಲೌಕಿಕ ಕಾಮ, ಪ್ರೇಮಗಳಿಗೆ ಅವಕಾಶ ನೀಡದು. ಇನ್ನು ಕೆಲವು ಸಾಧಕಜೀವಿಗಳಿಗೆ ದೇವನ ಪ್ರೀತಿಗಿಂತಲೂ ಶರಣರ ಒಡನಾಟ, ಸಖ್ಯ ಹೆಚ್ಚು ಪ್ರಿಯ. ಈ ಉದ್ದೇಶ ಹೊಂದಿದವರು ಕೋಪವನ್ನು ತೊರೆಯಬೇಕಾಗುತ್ತದೆ. ಶರಣರ ಒಡನಾಡುತ್ತ ಜ್ಞಾನವನ್ನು, ಅನುಗ್ರಹವನ್ನು ಪಡೆದುಕೊಳ್ಳಬೇಕು ಎಂಬ ಹಂಬಲ ಉಳ್ಳವರು ಹಿರಿಯ ಶರಣರ ಸೇವೆ ಮಾಡುವಾಗ ಅವರು ಕೋಪ ಮಾಡಿಕೊಳ್ಳಬಹುದು, ಬೈಯಬಹುದು.

ನಡೆವರಯ್ಯಾ ಒಡೆಯರು ತನು -ಮನ -ಧನದ ಮೇಲೆ
ನುಡಿವರಯ್ಯಾ ಒಂದು ನಿಮಿಷ ಬಾರದಿದ್ದಡೆ;
ಜರಿವರಯ್ಯಾ ಒಡೆಯರು ಮನಬಂದ ಪರಿಯಲಿ;
ಶಿವ ಶಿವಾ ! ಅಣೆವರಯ್ಯಾ ಮಂಡೆಯನೂರಿ
ಪ್ರಾಣದ ಒಡೆಯರಯ್ಯಾ, ಲಿಂಗದೇವಾ, ನಿಮ್ಮ ಶರಣರು- ಬ.ವ.ದೀ.341

ಜರಿಯಬಹುದು, ಸರಿಯಾಗಿ ಸೇವೆ ಮಾಡಲಿಲ್ಲವೆಂದು ಮಂಡೆಯ ಮೇಲೆ ಕುಟ್ಟಬಹುದು. ಆದರೂ ಸಾಧಕನು ಜ್ಞಾನಾರ್ಜನೆಯ ದೃಷ್ಟಿಯಿಂದ ಕೋಪ ಮಾಡಿಕೊಳ್ಳದೆ ವಿಧೇಯನಾಗಿ ವರ್ತಿಸುವನು. ಒಂಟಿಯಾಗಿ ಕಾಗೆ - ಗೂಗೆಯಂತೆ ಬದುಕುವವನಿಗೆ ಶರಣರ ಒಡನಾಟದ ರುಚಿ ತಿಳಿಯದು. ಶರಣರ ಒಡನಾಟದ ಸವಿ ಬಲ್ಲವನು ಕೋಪವನ್ನು ನಿಗ್ರಹಿಸಿಕೊಂಡು ಶರಣರೊಲುಮೆಗೆ ಹಾತೊರೆಯುವನು.

ಭಕ್ತಿಯ ಲಾಭವನ್ನು ಬಯಸುವವನು ಲೋಭಿಯಾಗಿದ್ದರೆ ಆಗದು, ಉದಾರವಾಗಿ ಗುರು -ಲಿಂಗ - ಜಂಗಮಕ್ಕೆ ದಾಸೋಹಕ್ಕೆ ಸಮಾಜ ಕೆಲಸಗಳಿಗೆ ತನ್ನ ಗಳಿಕೆಯನ್ನು ಸವೆಸಬೇಕಾಗುವುದು. ಅದೇ ರೀತಿ ದೇವನ ಕೃಪೆಯನ್ನು ಪಡೆದುಕೊಳ್ಳಬೇಕು ಎನ್ನುವವನು ಲೌಕಿಕ ವ್ಯವಹಾರಗಳಲ್ಲಿ ಅತಿ ಮೋಹಿಯಾಗಿ ಇರಬಾರದು. ಮಾಡುವ ಕೆಲಸಗಳನ್ನೆಲ್ಲ ಕರ್ತವ್ಯ ಪ್ರಜ್ಞೆಯಿಂದ ಮಾಡಬೇಕು. ಅದರಲ್ಲಿ ನಾನು ಎಂಬ ಅಹಂ ಆಗಲಿ, ನನ್ನದು ಎಂಬ ವ್ಯಾಮೋಹವಾಗಲಿ ಇರತಕ್ಕದ್ದಲ್ಲ. ಮದ, ಮತ್ಸರ ಇರುವವನಿಗೆ ಹೃದಯ ಶುದ್ಧಿ ಇರದು. ಸದಾಕಾಲ ಅಹಂಭಾವದಿಂದ ತನ್ನ ಬಗ್ಗೆಯೇ ಚಿಂತಿಸುವನು; ಇನ್ನಿತರರನ್ನು ಮತ್ಸರಿಗನು ಸದಾ ಮತ್ತೊಬ್ಬರಲ್ಲಿ ತಪ್ಪನ್ನು ಹುಡುಕುವ ದೋಷೈಕ ದೃಷ್ಟಿ ಹೊಂದಿರುವನು. ಹದುಳಿಗರಾದವರು ಅಂದರೆ ಸದಾ ಇನ್ನೊಬ್ಬರ ಕ್ಷೇಮ ಬಯಸುವ ಹೃದಯ ಉಳ್ಳವರಲ್ಲಿ ಲಿಂಗದೇವನು ನೆಲೆಸಿರುವನು.

123. ಶರಣರ ಸಂಗ

ಸಾರ ! ಸಜ್ಜನರ ಸಂಗವ ಮಾಡುವುದು
ದೂರ ! ದುರ್ಜನರ ಸಂಗ ಬೇಡವಯ್ಯಾ
ಆವ ಹಾವಾದಡೇನು, ವಿಷವೊಂದೆ !
ಅಂಥವರ ಸಂಗ ಬೇಡವಯ್ಯಾ
ಅಂತರಂಗ ಶುದ್ಧವಿಲ್ಲದವರ ಸಂಗ
ಸಿಂಗಿ ಕಾಳಕೂಟ ವಿಷವೊ, ಲಿಂಗದೇವ -ಬ.ವ.ದೀ.121

ಧರ್ಮಪಿತ ಬಸವಣ್ಣನವರು ವಿಶೇಷ ಸೂಚನೆ ನೀಡುವರು. "ಸಾರ" ಎಂಬ ಪದ ಬಳಸುವ ಮೂಲಕ. ಸದಾ ಸಜ್ಜನರ ಸಂಗವನ್ನೇ ಮಾಡಬೇಕು. ಏಕೆಂದರೆ ಅವರ ಜೀವನವು ಮಾದರಿಯಾಗಿರುತ್ತದೆ, ಅನುಕರಣೀಯವಾಗಿರುತ್ತದೆ. ಕಷ್ಟಕಾಲದಲ್ಲಿ ಅವರು ಮಾರ್ಗದರ್ಶನ ಮಾಡುವವರೂ ನೆರವೀಯುವವರೂ ಆಗಿರುತ್ತಾರೆ. ಜೊತೆಗೇ ಬಸವಣ್ಣನವರು ಒಂದು ಎಚ್ಚರಿಕೆಯನ್ನು

ನೀಡುವರು. ದುರ್ಜನರ ಸಂಗದಿಂದ ದೂರವಿರಬೇಕು ಎಂದು. ಏಕೆಂದರೆ ಅವರು ಆದರ್ಶ ರಹಿತವಾದ, ದುಶ್ಚಟ - ದುರ್ಗುಣಗಳಿಂದ ಕೂಡಿದ ವ್ಯಕ್ತಿಗಳಾಗಿ ಅವರ ಒಡನಾಟ ಮಾಡುವವರನ್ನು ಅಪಾಯಕ್ಕೆ ದೂಡುವವರಾಗಿರುತ್ತಾರೆ. ಅವರ ಸಂಗ ಹಾವಿನೊಡನೆ ಸರಸವಾಡಿದಂತೆ. ಎಷ್ಟೋ ಜನ ಹಾವನ್ನು ಹಿಡಿಯುವವರು, ಆಡಿಸುವವರು ಬಗೆಬಗೆಯ ತಂತ್ರಗಳನ್ನು ಕಲಿತು, ಮದ್ದುಗಳನ್ನು ತಿಳಿದುಕೊಂಡು ಹಾವು ಕಚ್ಚಿದಾಗ ಮದ್ದು ತಿಂದು, ಸಾವಿನಿಂದ ಪಾರಾಗುವರು. ಆದರೆ ಒಮ್ಮೊಮ್ಮೆ ಪರಿಸ್ಥಿತಿ ಕೈಮೀರಿ ಹಾವಿನ ಕಡಿತದಿಂದಲೇ ಸಾಯುವುದುಂಟು. ಅದೇ ರೀತಿ ದುರ್ಜನರ ಸಖ್ಯ. ಅದರಲ್ಲೂ ಅಂತರಂಗ ಶುದ್ಧಿ ಇಲ್ಲದ ಕಪಟ ದುರ್ಜನರ ಸಂಗವು ಎಷ್ಟೇ ಎಚ್ಚರಿಕೆಯಿಂದ ಇದ್ದರೂ ಕಾಳನಾಗರ ಹಾವಿನ ಭಯಂಕರ ವಿಷದಂತೆ ವ್ಯಕ್ತಿಯ ವಿನಾಶಕ್ಕೆ ಕಾರಣವಾಗುವುದು.

124. ಜೀವನದಲ್ಲಿ ಸತ್ಯತೆ ಮತ್ತು ಶುದ್ಧತೆ

ಹಸಿದು ಎಕ್ಕೆಯ ಕಾಯ ಮೆಲಬಹುದೆ ?
ನೀರಡಿಸಿ ವಿಷವ ಈಂಟಲುಬಹುದೇ ?
ಸುಣ್ಣದ ತುಯ್ಯಲ ಬಣ್ಣವೊಂದೆ ಎಂದಡೆ,
ನಂಟುತನಕ್ಕೆ ಉಣ್ಣಬಹುದೆ ?
ಲಿಂಗಸಾರಾಯ ಸಜ್ಜನರಲ್ಲದವರ
ಲಿಂಗದೇವನೆಂತೊಲಿವನು ? -ಬ.ವ.ದೀ.122

ವ್ಯಕ್ತಿಗೆ ಬಹಳ ಹಸಿವೆಯಾಗಿದೆ. ದೇಹ ನಿತ್ರಾಣಗೊಂಡು ಕುಸಿಯುವ ಸ್ಥಿತಿಗೆ ಬಂದಿದೆ. ತಿನ್ನಲು ಏನೂ ಸಿಗುತ್ತಿಲ್ಲ; ಆಗ ವಿಷದ ಗುಣದಿಂದ ಕೂಡಿದ ಎಕ್ಕೆಯ ಕಾಯಿ ಸಿಗುತ್ತದೆ. ಹಾಗೆಂದು ಅದನ್ನು ತಿನ್ನಲಾದೀತೆ? ತಿಂದರೆ ವಿಷವೇರಿ ಸಾಯುವುದು ಖಚಿತ! ಮತ್ತೊಬ್ಬ ವ್ಯಕ್ತಿಗೆ ಬಹಳಷ್ಟು ಬಾಯಾರಿಕೆಯಾಗಿದೆ. ನೀರಡಿಸಿ ಕಂಗಾಲಾಗಿದ್ದಾನೆ. ಅಂಥ ಸನ್ನಿವೇಶದಲ್ಲಿ ವಿಷವು ಸಿಕ್ಕಿತೆಂದು ಕುಡಿದು ಬಿಡಲಾಗುವುದೆ? ಸುಣ್ಣವನ್ನು ಕಲಸಿ ಇಟ್ಟ ನೀರು ಹಾಲಿನ ಬಣ್ಣವನ್ನೇ ಹೊಂದಿರುತ್ತದೆ ಎಂದ ಮಾತ್ರಕ್ಕೆ ನಂಟರು ಬಂದಾಗ ಸುಣ್ಣದ ನೀರು ಕುಡಿಸಬಹುದೆ. ಸಾರಾಯ ಸಜ್ಜನಿಕೆ ಇಲ್ಲದವರನ್ನು ದೇವರು ಹೇಗೆ ಮೆಚ್ಚಿಕೊಳ್ಳಲು ಸಾಧ್ಯ ?!

ಜೀವನ ಪಥದಲ್ಲಿ ಮಾನವನು ಸಾಗುವಾಗ ಅನೇಕ ದುರ್ಭರ ಪ್ರಸಂಗಗಳು ಎದುರಾಗುತ್ತವೆ. ಬಡತನ, ರೋಗ - ರುಜಿನ ಮುಂತಾದವು ಎರಗುತ್ತವೆ. ಆಗ ವ್ಯಕ್ತಿಯು ಅಡ್ಡದಾರಿ ಹಿಡಿದರೆ ಆ ಬಡತನದಿಂದ ಪಾರಾಗಲು ಸಾಧ್ಯವೆಂದು? ಮನಸ್ಸು ಹೊಯ್ದಾಡುತ್ತದೆ. ಅನೀತಿಯ ಮಾರ್ಗದಲ್ಲಿ ಸಾಗಿದರೆ ಬಡತನ ದೂರವಾಗಿ ತಾತ್ಕಾಲಿಕ ಸುಖ ಸಿಗಬಹುದು. ಆದರೆ ಅಡ್ಡದಾರಿ ಹಿಡಿಯುವುದರಿಂದ ಮೇಲೇಳಲಾರದ ಪಾಪಕೂಪದಲ್ಲಿ ಬೀಳಬೇಕಾಗುವುದಷ್ಟೆ. ಅದಕ್ಕಾಗಿ ಧರ್ಮಪಿತರು ಹೇಳುವುದು, ಹಸಿವಾಯಿತು ಎಂದು ಎಕ್ಕೇಕಾಯಿ ತಿನ್ನಬಾರದು, ಬಾಯಾರಿಕೆಯಾಯಿತು ಎಂದು ವಿಷವನ್ನು ಕುಡಿಯಬಾರದು.

ಸಂಬಳದ ಹಣ ಲಂಚದ ಹಣ ಎರಡೂ ನೋಟಿನ ರೂಪದಲ್ಲೇ ಇರುತ್ತವೆ ಎಂದ ಮಾತ್ರಕ್ಕೆ ಲಂಚವನ್ನು ಪಡೆದರೆ ಹಾಲು ಖೀರು, ಸುಣ್ಣದ ನೀರು ಒಂದೇ ಬಣ್ಣದವು ಎಂದು ಸುಣ್ಣದ ನೀರನ್ನು ಕುಡಿದಂತೆ ಆಗುವುದು. ಆದ್ದರಿಂದ ವ್ಯಕ್ತಿಯ ಜೀವನ ಮತ್ತು ಗಳಿಕೆ ಎರಡೂ ಸತ್ಯಶುದ್ಧವಾಗಿ ಇರಬೇಕು. ಪಾಪ ಮಾರ್ಗದಿಂದ ಹಣವನ್ನು ಗಳಿಸಿ ಅದನ್ನು ದೇವರ ಹುಂಡಿಗೆ ಹಾಕಿ ಪಾಪ ತೊಳೆದುಕೊಳ್ಳುತ್ತೇನೆ ಎಂಬ ಅಜ್ಞಾನಿಯಂತಹ ಪರಿಸ್ಥಿತಿ ಇವನದಾದೀತು. ದೇವರ ಸಾಕ್ಷಿಯಾಗಿ ಸಜ್ಜನಿಕೆ ಅಳವಡಿಸಿಕೊಳ್ಳುವುದು ಮುಖ್ಯ.

125. ಅವಗುಣಗಳ ಮೆಚ್ಚಿಕೊಳ್ಳನು

ಎಲವದ ಮರ ಹೂತು ಫಲವಾದ ತೆರನಂತೆ;
ಸಿರಿಯಾದಡೇನು, ಶಿವಭಕ್ತಿಯಿಲ್ಲದನ್ನಕ್ಕ ?
ಫಲವಾದಡೇನು ಹೇಳಾ, ಹಾವು ಮೆಕ್ಕೆಯ ಕಾಯಿ ?
ಕುಲವಿಲ್ಲದ ರೂಹು ಎಲ್ಲಿದ್ದರೇನು ?
ಬಚ್ಚಲ ನೀರು ತಿಳಿಯಾದಲ್ಲಿ ಫಲವೇನು ?
ಅವಗುಣಗಳ ಮೆಚ್ಚ ಲಿಂಗದೇವ! -ಬ.ವ.ದೀ.123

ಬೂರುಗದ ಗಿಡ ತನ್ನ ಕಾಯಿ ಒಡೆದಾಗ ಬಣ್ಣಬಣ್ಣದ ಎಸಳುಗಳನ್ನು ಹೊರಚೆಲ್ಲುತ್ತದೆ. ಇಡೀ

ಗಿಡಕ್ಕೆ ಬಣ್ಣದ ಹೊದಿಕೆಯನ್ನು ಹೊದಿಸಿದಂತಿರುತ್ತದೆ. ಆ ಮೃದುವಾದ ದೂದಿಯನ್ನು ಸಂಗ್ರಹಿಸಿ ಒಯ್ದು ಮೆತ್ತನೆಯ ಸುಪ್ಪತ್ತಿಗೆ ತಯಾರು ಮಾಡುತ್ತಾರೆ. ರೇಷ್ಮೆಯಂತಹ ಈ ದೂದಿಯು ಬಹಳ ಬೆಲೆಯುಳ್ಳದು. ರಾಜಮಹಾರಾಜರು ಹಂಸತೂಲಿಕಾ ತಲ್ಪಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಎಲವದ ಮರ ಹಣ್ಣಾಗಿ ಕಾಯಿಗಳನ್ನು ಸಿಡಿಸಿದಾಗ ನೋಡಲು ಬಹು ಸೊಗಸು. ಆದರೆ ಆ ತುಂಡುಗಳು ಗಾಳಿಯಲ್ಲಿ ಮಿಶ್ರಣಗೊಂಡು ಕೈಗೆ ಸಿಗದಂತೆ ದೂರದೂರಕ್ಕೆ ಸಾಗಿಬಿಡುತ್ತವೆ.

ಹಾಗೆ ಭಕ್ತಿಯಿಲ್ಲದ ಶ್ರೀಮಂತಿಕೆಯ ವೈಭವ ಕೂಡ. ಮನೆ ತುಂಬ ಆಳುಕಾಳು. ಪೂಜೆ ಮಾಡಲಿಕ್ಕೆ ಸಹ ಆಳನ್ನು ನೇಮಿಸಿರಲಾಗುವುದು. ಏನು ವೈಭವ! ಎಷ್ಟು ಹೂವು ವಿಗ್ರಹವನ್ನು ಅಲಂಕರಿಸುತ್ತವೆ. ಅಲ್ಲಿ ಸಿರಿ ಇದೆಯೇ ವಿನಾ ಭಕ್ತಿಯಿಲ್ಲ. ಭಕ್ತಿಯುಳ್ಳವನ ಬಳಿ ಸಂಪತ್ತಿದ್ದರೆ ಅದು ದಾನ ಧರ್ಮ ಪರೋಪಕಾರಕ್ಕೆ ಸದ್ವಿನಿಯೋಗವಾಗುವುದು. ಭಕ್ತಿ ಇಲ್ಲದಿದ್ದರೆ ಮನೆಯ ಮುಂದೆ ನಿಂತು ಮನೆಯ ವೈಭವವನ್ನು ಬಣ್ಣಿಸಿದಂತೆ ಆಗುವುದು. ಮೆಕ್ಕೆಯ ಕಾಯಿ ಎಂಬ ಫಲ ಬಳ್ಳಿಯಲ್ಲಿ ಬಿಡುವುದುಂಟು. ತೊಂಡೆಯ ಕಾಯಿಯಂತೆ ಇರುವ ಇದನ್ನು ತರಕಾರಿಯಾಗಿ ಉಪಯೋಗಿಸುವರು, ಉಪ್ಪಿನಕಾಯಿ ಹಾಕಲು ಸಹ ಬಳಸುವರು. ಇದರಲ್ಲಿ ಹಾವು ಮೆಕ್ಕೆಯಕಾಯಿ ಎಂಬ ವಿಷದ ಜಾತಿಯುಂಟು. ಅದರ ಕಾಯಿ ತಿಂದರೆ ವ್ಯಕ್ತಿ ಸಾಯುವನು. ಹೀಗಾಗಿ ಗಿಡದ ತುಂಬ ಕಾಯಿ ಬಿಟ್ಟಿದ್ದರೂ ಹಾವು ಮೆಕ್ಕೆಯ ಕಾಯಿಯನ್ನು ಯಾರೂ ತಿನ್ನಲು ಹೋಗರು. ಭಕ್ತಿಯಿಲ್ಲದವನ ಶ್ರೀಮಂತಿಕೆಯೂ ಹಾವು ಮೆಕ್ಕೆಯ ಕಾಯಿಯಂತೆಯೆ !

ಕುಲವಿಲ್ಲದ ರೂಹು ಎಲ್ಲಿದ್ದರೇನು? ಇದು ಗುಣವಿಲ್ಲದ ರೂಹು ಎಂದು ಇರಲೂ ಸಾಧ್ಯವಿದೆ. ಎಂಥಾ ಚೆಲುವು ಇದ್ದರೇನು ಸದ್ಗುಣವಿಲ್ಲದಿದ್ದರೆ. ಅಂಥ ವ್ಯಕ್ತಿಯ ಸಾಂಗತ್ಯ, ಒಡನಾಡ ಹಿತಕರವಲ್ಲ. ಕುಲವಿಲ್ಲದ ರೂಹು ಎಂಬುದನ್ನು ಹೀಗೆ ಅರ್ಥೈಸಬಹುದು. ಓರ್ವ ಕನ್ಯೆ ಅತ್ಯಂತ ಸುಂದರಿ, ಅವಳು ಒಂದು ನಿಮ್ನ ಜಾತಿಯಲ್ಲಿ ಹುಟ್ಟಿದ್ದಾಳೆ. ಅಸ್ಪೃಶ್ಯರಲ್ಲಿಯೋ, ವೇಶ್ಯೆಯ ಮಗಳಾಗಿಯೋ ಹುಟ್ಟಿದ್ದಾಳೆ. ಸೌಂದರ್ಯದ ದೃಷ್ಟಿಯಿಂದ ಆಕೆ ಪಟ್ಟದ ರಾಣಿಯಾಗುವ ಅರ್ಹತೆ ಪಡೆದಿದ್ದಾಳೆ. ಆದರೆ ಹುಟ್ಟಿದ ಕುಲದ ದೃಷ್ಟಿಯಿಂದ ಅಂತಃಪುರದ ದಾಸಿ ಮಾತ್ರ ಆಗಲು ಸಾಧ್ಯ. ಹೀಗೆ ಹೇಳುವಲ್ಲಿ ಧರ್ಮಪಿತ ಬಸವಣ್ಣನವರಿಗೆ ಅಂಥವರ ಬಗ್ಗೆ ಅನುಕಂಪವಿದೆಯೇ ವಿನಾ ತಿರಸ್ಕಾರವಿಲ್ಲ.

ಸ್ನಾನ - ಶೌಚಾದಿ ಕ್ರಿಯೆಗಳನ್ನು ಮಾಡಿದಾಗ ಹರಿದು ನಿಂತ ನೀರು ತಿಳಿಯಾಗಿ ನಿಂತ ಮಾತ್ರಕ್ಕೆ ಯಾರೂ ಅದನ್ನು ಪುನಃ ಸ್ನಾನ-ಪೂಜಾದಿ ಕ್ರಿಯೆಗಳಿಗೆ ಬಳಸುವುದಿಲ್ಲ. ಹಾಗೆ ದುರ್ಗುಣಗಳ ಸಿರಿವಂತಿಕೆ - ಸಂಪತ್ತು ಬಳಕೆಗೆ ಉಪಯೋಗವಾಗುವುದಿಲ್ಲ.

126. ಶರಣರ ಅನುಭಾವ

ಬಚ್ಚಲ ನೀರು ತಿಳಿಯಾದಡೇನು ?
ಸಲ್ಲದ ಹೊನ್ನು ಮತ್ತೆಲ್ಲಿದ್ದಡೇನು ?
ಆಕಾಶದ ಮಾವಿನ ಫಲವೆಂದಡೇನು ?
ಕೊಯ್ಯಲಿಲ್ಲ ಮೆಲ್ಲಲಿಲ್ಲ !
ಲಿಂಗದೇವನ ಶರಣರ ಅನುಭಾವವಿಲ್ಲದವರು
ಎಲ್ಲಿದಡ್ಡೇನು, ಎಂತಾದಡೇನು? -ಬ.ವ.ದೀ.124

ಸ್ನಾನ - ಶೌಚಾದಿ ಕ್ರಿಯೆಗಳ ಮೂಲಕ ಬಚ್ಚಲಿನ ಕಿಂಡಿಯಿಂದ ಹರಿದು ಹೋದ ನೀರು ಒಂದು ಕಡೆ ಮಡುಗಟ್ಟಿ ನಿಲ್ಲುತ್ತದೆ. ಅದು ಸ್ವಲ್ಪಕಾಲದ ಮೇಲೆ ತಿಳಿಯಾಗಿ, ನಿಲ್ಲುತ್ತದೆ. ಆದರೆ ಅದನ್ನು ಯಾರೂ ಪುನಃ ಸ್ನಾನಕ್ಕಾಗಲೀ, ಪೂಜೆಗಾಗಲೀ ಬಳಸುವುದಿಲ್ಲ. ಅದೇ ರೀತಿ ಸ್ವಂತ ಬಳಕೆಗಾಗಲೀ, ಸಮಾಜದ ಸೇವೆಗಾಗಲೀ ಬಳಕೆಯಾಗದ ಹಣ ಎಲ್ಲಿದ್ದೇನು? ಅತ್ಯಂತ ಎತ್ತರದಲ್ಲಿ ಬೆಳೆದ ಮಾವಿನ ಗಿಡದ ಮೇಲ್ತುದಿಯ ಫಲವು ಎಷ್ಟು ರುಚಿಯಾಗಿದ್ದರೇನು. ಅದನ್ನು ನೋಡಿ, ಹಿಗ್ಗಿ ಬಣ್ಣಿಸುವುದು ಸಾಧ್ಯವೇ ವಿನಾ ಹತ್ತಿ ಕೊಯ್ಯಲೂ ಸಾಧ್ಯವಿಲ್ಲ. ತಿಂದು ಸಂತೋಷಪಡಲು ಸಾಧ್ಯವಿಲ್ಲ! ಅದೇ ರೀತಿ ಲಿಂಗದೇವನ ಶರಣರ ಒಡನಾಟ ಅನುಭಾವ ಗೋಷ್ಠಿಯಲ್ಲಿ ಪಾಲುದಾರಿಕೆ ಇಲ್ಲದವರು ಆಕಾಶದ ಮಾವಿನ ಫಲದಂತೆ ಎಲ್ಲಿದ್ದರೇನು, ಎಂತಾದರೇನು? ಅವರ ಸಮಯವಾಗಲಿ, ಸಂಪತ್ತಾಗಲಿ ತನ್ನ ಸಮಾಜಕ್ಕೆ ಎಷ್ಟೂ ಉಪಯೋಗವಾಗದು. ಎಷ್ಟೇ ದೊಡ್ಡ ವ್ಯಕ್ತಿಯಾದರೂ ಅವನು ತನ್ನ ಸಮಾಜದಿಂದ ದೂರವುಳಿಯಬಾರದು. ತಾನು ಶ್ರೀಮಂತನಾದನೆಂದು ಸಮಾಜದ ಒಡನಾಟ, ಪ್ರಾರ್ಥನೆಯಿಂದ ದೂರ ಉಳಿಯುವವನು ಆಕಾಶದ ಮಾವಿನ ಹಣ್ಣಿನಂತೆ ನಿಷ್ಪ್ರಯೋಜಕ.

ಗಿಳಿಯೋದಿ ಫಲವೇನು?
ಬೆಕ್ಕು ಬಹುದ ಹೇಳಲರಿಯದು.
ಜಗವೆಲ್ಲ ಕಾಂಬ ಕಣ್ಣು
ತನ್ನ ಕೊಂಬ ಕೊಯ್ಲಿಯ ಕಾಣಲರಿಯದು.
ಇದಿರಗುಣವ ಬಲ್ಲೆವೆಂಬರು
ತಮ್ಮ ಗುಣವ ತಾವರಿಯರು, ಲಿಂಗದೇವ -ಬ.ವ.ದೀ.125

ಮಾನವನಲ್ಲಿರುವ ಒಂದು ದೌರ್ಬಲ್ಯ, ದುರ್ಗುಣವೇನೆಂದರೆ ಇನ್ನಿತರರ ದೋಷವನ್ನು ಬೇಗನೆ ಗುರುತಿಸುವುದು, ತಮ್ಮ ಗುಣ -ದೋಷವನ್ನು ಅರಿಯದಿರುವುದು. ಇಲ್ಲಿ ಗುಣ ಎಂಬ ಪದವನ್ನು ಬಳಕೆ ಮಾಡಲಾಗಿದೆ. ನೇರ ಅರ್ಥ ಸದ್ಗುಣ ಎಂದು ಇಂದು ಬಳಕೆಯಲ್ಲಿದ್ದರೂ ಸನ್ನಿವೇಶಕ್ಕೆ ತಕ್ಕಂತೆ ಲೋಪ-ದೋಷ ಎಂದು ಆ ಪದದ ಅರ್ಥ ಮಾಡಬೇಕು.

ಗಿಳಿಯು ಮಾತನಾಡುವುದಾದರೂ ಅರ್ಥ ತಿಳಿದು ಮಾತನಾಡದು. ಕಲಿತ ಶಬ್ದಗಳನ್ನು ಯಾಂತ್ರಿಕವಾಗಿ ಉಚ್ಚರಿಸುತ್ತದೆ. ಅದಕ್ಕೆ ಗಿಳಿಯೋದು ಎನ್ನುವುದು. ಅದು ಕಲಿತ ಪದಗಳನ್ನು ಮಧುರವಾಗಿ ಉಲಿಯುತ್ತಿರುತ್ತದೆ. ಆಗೇನಾದರೂ ಇದಕ್ಕಿದ್ದಂತೆಯೇ ಬೆಕ್ಕು ಬಂದರೆ ಸ್ವತಂತ್ರವಾಗಿ ಆಲೋಚಿಸಿ, ಬೆಕ್ಕು ಬಂದಿದೆ, ಬನ್ನಿ, ನನ್ನನ್ನು ರಕ್ಷಿಸಿರಿ ಎಂದು ಮಾಲಿಕರನ್ನು ಕರೆಯಲಾರದು. ಜಗತ್ತನೆಲ್ಲ ನೋಡುವ ಕಣ್ಣು, ಇನ್ನೊಬ್ಬರ ಅಳೆಯಬಲ್ಲ ಕಣ್ಣು ತನ್ನಲ್ಲಿಯೇ ಕಪ್ಪು ಚುಕ್ಕೆಯಾಗಿ ನೆಲೆ ನಿಂತು, ನಂತರ ವಿಸ್ತಾರಗೊಂಡು ಕಣ್ಣಿನ ದೃಷ್ಟಿಯನ್ನು ಮಂಕು ಮಾಡುವ ಕಾಯಿಲೆಯನ್ನು (ಗ್ಲೂಕೋಮಾ) ಕಾಣಲರಿಯದು. ಅದೇ ರೀತಿ ವ್ಯಕ್ತಿಯು ಇನ್ನೊಬ್ಬರ ಲೋಪದೋಷಗಳನ್ನು ಬೇಗನೆ ಎತ್ತಿ ತೋರಿಸುವನು. ತನ್ನ ದೋಷ - ದೌರ್ಬಲ್ಯಗಳ ಅವಲೋಕನ ಮಾಡಿಕೊಳ್ಳಲಾರ.

128. ನಿನ್ನ ನೀನು ತಿದ್ದಿಕೊ

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಲಿಂಗದೇವ ! -ಬ.ವ.ದೀ.126

ವಿಶ್ವಗುರು ಬಸವಣ್ಣನವರ ಈ ವಚನವನ್ನು ಅಪಾರ್ಥ ಮಾಡುವವರು ಬಹಳಷ್ಟು ಜನರು. ಲೋಕದ ಡೊಂಕನ್ನು ನೀವೇಕೆ ತಿದ್ದುವಿರಿ ಎಂದು ಹೇಳಿದ ಬಸವಣ್ಣನವರು ತಾವೇಕೆ ಇನ್ನೊಬ್ಬರನ್ನು ಟೀಕಿಸಿದರು ? ಎಂಬುದು ಒಂದು ಪ್ರಶ್ನೆಯಾದರೆ, ನೆರೆ ಮನೆಯವರ ದುಃಖಕ್ಕೆ ಅಳುವವರ ಮೆಚ್ಚ ಎಂಬುದು ಅಮಾನವೀಯ. ಹಾಗಾದರೆ ನಾವು ಇನ್ನೊಬ್ಬರ ದುಃಖದಲ್ಲಿ ಪಾಲುಗಾರರಾಗಬಾರದೆ ? ಎಂದು ಕೆಲವರು ಕೇಳುವರು.

ಲೋಕದ ಡೊಂಕ ಅಂದರೆ ಇನ್ನಿತರರ ಲೋಪದೋಷಗಳನ್ನು ಗುರುತಿಸಿ ಅವರನ್ನು ತಿದ್ದಿಕೊಳ್ಳಲು ಹೇಳುವ ಮೊದಲು ನಿಮ್ಮನ್ನು ನೀವು ತಿದ್ದಿಕೊಳ್ಳಿರಿ. ತನುವಿನ ವಿಕಾರಗಳಾದ ಹಸಿವು, ತೃಷೆ, ನಿದ್ರೆ, ವಿಷಯಗಳು ಉದ್ರೇಕಗೊಂಡು ಕುಣಿಯುತ್ತಿವೆ. ಮನದ ವಿಕಾರಗಳಾದ ಕಾಮಕ್ರೋಧ ಲೋಭಮೋಹ ಮದ ಮತ್ಸರಗಳು ಉದ್ರೇಕಗೊಂಡಿವೆ. ಮೊದಲು ಅವನ್ನು ಸಂತೈಸಿ ಅಂದರೆ ಶಾಂತಗೊಳಿಸಿರಿ. ಕೆಲವರು ಇನ್ನಿತರರ ದುಃಖದಲ್ಲಿ ಸಹಾನುಭೂತಿ ತೋರಿಸುವವರಂತೆ ಮಾತನಾಡುತ್ತ ನಟಿಸುತ್ತಾರೆ. ಅವರ ನೋವು -ದುಃಖವನ್ನು ಜಾಸ್ತಿ ಮಾಡುವರು. ಉದಾಹರಣೆಗೆ, ಯಾರೋ ಒಬ್ಬ ಹುಡುಗಿ ತನ್ನನ್ನು ಪ್ರೀತಿಸಿದವರೊಡನೆ ಹೋಗಿರುತ್ತಾಳೆ ಎಂದುಕೊಳ್ಳಿರಿ. ಆಗ ಈ ಸಹಾನುಭೂತಿ ತೋರಿಸುವವರು, "ಪಾಪ, ಹೀಗಾಗಬಾರದಿತ್ತು ಹುಡುಗಿ ಪ್ರೀತಿಸಿದವರ ಸಂಗಡ ಓಡಿ ಹೋಗಿ ಮನೆತನದ ಮರ್ಯಾದೆಯನ್ನು ಕಳೆಯಬಾರದಿತ್ತು. ನಮ್ಮ ಮಗಳು ಹಾಗೆ ಮಾಡಿದರೆ ಕೊಚ್ಚಿ ಹಾಕುತ್ತಿದ್ದೆವು." ಇದು ಸಹಾನುಭೂತಿ ತೋರಿಸುವ ರೀತಿಯೆ ?

ದುಃಖಿಸುವ ತಾಯಿ ತಂದೆಯರಿಗೆ, "ಇರಲಿ ಬಿಡಿರಿ, ಅದೇನು ಅಪರಾಧ ಅಲ್ಲ. ಮದುವೆಯಾಗಿ ಸುಖವಾಗಿರಲಿ ಅಂತ ಹರಸಿರಿ. ಎಲ್ಲಿ ಹೋಗ್ತಾರೆ; ಬಂದೇ ಬರ್ತಾರೆ. ಆಶೀರ್ವಾದ ಮಾಡುವಿರಂತೆ." ಹೀಗೆ ಧೈರ್ಯ ಹೇಳಬೇಕು. ಈ ಹಿನ್ನೆಲೆಯಲ್ಲೇ ಬಸವಣ್ಣನವರು, ಸಂತೈಸುವ ಸೋಗಿನಲ್ಲಿ ಚುಚ್ಚು

ಮಾತನಾಡುವ ಬಗೆಯನ್ನು ಒಪ್ಪುವುದಿಲ್ಲ.

ವ್ಯಕ್ತಿಯ ಲೋಪದೋಷ ಹುಡುಕಿ ನಿಂದೆ ಮಾಡಬಾರದು. ಅದರ ಬದಲು ಅವರನ್ನು ತಿದ್ದಿ ಹಿತ ಬಯಸಬೇಕು. ನಿಂದೆ ಬೇರೆ; ವಿಮರ್ಶೆ ಬೇರೆ. ವಿಮರ್ಶೆ ವಸ್ತುನಿಷ್ಠವಾಗಿ ಇರುತ್ತದೆ. ನಿಂದೆಯಲ್ಲಿ ವ್ಯಕ್ತಿಯ ತೇಜೋವಧೆ ಮಾಡುವ ದುರುದ್ದೇಶವಿರುತ್ತದೆ. ತಿದ್ದುವಿಕೆಯಲ್ಲಿ ವ್ಯಕ್ತಿಯನ್ನು ಉದಾತ್ತೀಕರಣ ಮಾಡುವ ಆಕಾಂಕ್ಷೆ ಇರುತ್ತದೆ.

"ನೆರೆ ಮನೆಯ ದುಃಖಕ್ಕೆ ಅಳುವವರ ಮೆಚ್ಚ"- ಅಳುವವರ ಎಂಬ ಪದವೊಂದೇ ನಮಗೆ ಸಮಸ್ಯೆಯನ್ನು ಒಡ್ಡುವಂತಹುದು. ಇದರ ಬದಲು "ಅಳಿಗೊಂಬವರ "ಮೆಚ್ಚ ನಮ್ಮ ಲಿಂಗದೇವ. ಎಂದಾದರೆ ಇಡೀ ವಚನ ಪರಿಪೂರ್ಣಗೊಳ್ಳುತ್ತದೆ, ಬೇರಾವ ಸಮರ್ಥನೆ ಕೊಡುವುದೂ ಅವಶ್ಯವೆನಿಸದು. ಈ ಪದವು ಬೇರೆ ಕಡೆ 2 ವಚನಗಳಲ್ಲಿ ಬಳಕೆಯಾಗಿದೆ.

1. "ಅಳಿಗೊಂಡಹರೆಂದು ಅಂಜಲದೇಕೆ?" (ಬ.ಷ.ವ.176) ಅಳಿಗೊಳ್ಳುವುದು ಎಂದರೆ ಆಡಿಕೊಳ್ಳುವುದು ಎಂದರ್ಥ.

2. ಆಳಾಗಿ ಹೊಕ್ಕು ಅರಸಾಗಿ ನಡೆದಡೆ ಅಳಿಗೊಂಡಿತ್ತೆನ್ನ ಮನ (ಬ.ಷ.ವ.254) ಒಬ್ಬ ವ್ಯಕ್ತಿ ಆಳಾಗಿ ಪ್ರವೇಶಿಸಿ, ನಂತರ ಬೆಳೆದು, ಬಲಿತು ಠೇಂಕಾರದಿಂದ ಅರಸನಂತೆ ಅಂದರೆ ಯಜಮಾನನಂತೆ ವರ್ತಿಸಿದರೆ ನನ್ನ ಮನಸ್ಸು ಅಳಿಗೊಂಡಿತ್ತು - ಬೇಸರಗೊಳ್ಳುವುದು. (ಆಡಿಕೊಳ್ಳುವುದು).

ನೆರೆಮನೆಯ ದುಃಖಕ್ಕೆ ಅಳಿಗೊಂಬವರ ಮೆಚ್ಚ ಎಂದರೆ ಇನ್ನೊಬ್ಬರ ದುಃಖ ಕಂಡು (ಸಹಾನುಭೂತಿ ಹೊಂದಿರಬೇಕಲ್ಲದೆ) ಆಡಿಕೊಳ್ಳುವವರ ದೇವರು ಮೆಚ್ಚ ಎಂದಾಗುವುದು. ವಚನದ ಶೋಭೆ ಹೆಚ್ಚಾಗುವುದಲ್ಲವೆ?

129. ಶರಣರನ್ನು ಅರಿಯುವುದು

ಏತ ತಲೆವಾಗಿದಡೇನು, ಗುರು ಭಕ್ತನಾಗಬಲ್ಲುದೆ ?
ಇಕ್ಕುಳ ಕೈ ಮುಗಿದಡೇನು, ಭೃತ್ಯಾಚಾರಿಯಾಗಬಲ್ಲುದೆ ?
ಗಿಳಿಯೋದಿದಡೇನು, ಲಿಂಗವೇದಿಯಾಗಬಲ್ಲುದೆ ?
ಲಿಂಗದೇವನ ಶರಣರು ಬಂದ ಬರವ, ನಿಂದ ನಿಲುವ
ಅನಂಗ ಸಂಗಿಗಳೆತ್ತ ಬಲ್ಲರು ?

ಆಳವಾದ ಬಾವಿಯಿಂದ ನೀರನ್ನು ಎತ್ತಲು ಏತವನ್ನು ಉಪಯೋಗಿಸಲಾಗುವುದು. ಏತದ ಬಾನೆಯು ನೀರನ್ನು ತುಂಬಿಕೊಂಡು ಮೇಲೆ ಬಂದು ಬಾಗುವುದು. ಆಗ ನೀರು ಖಾಲಿ -ಯಾಗುವುದು. ಏತವು ಪೂರ್ತಿ ನೆಲಕ್ಕೆ ಬಾಗುವುದು. ಹಾಗೆ ಬಾಗಿದ ಮಾತ್ರಕ್ಕೆ ಅದು ಗುರುಭಕ್ತನೆ? ಬಾಗಿದುದು ಸಾಷ್ಟಾಂಗ ನಮಸ್ಕಾರವೆ? ಇಕ್ಕುಳವು ತನ್ನೆರಡು ತುದಿಗಳನ್ನು ಸೇರಿಸಿ ಕೈಮುಗಿಯುತ್ತದೆ. ಅದೇನು ಭೃತ್ಯಾಚಾರಿಯೆ ಯಾವುದೋ ಒಂದು ವಸ್ತುವನ್ನು ಗಪ್ಪನೆ ಹಿಡಿಯಲು ಅದು ಕೈಮುಗಿವಂತೆ ಕೆಲವರು ಮೋಸ ಮಾಡಲೆಂದೇ ಕೈಮುಗಿಯುವುದುಂಟು. ಗಿಳಿಗೆ ಓಂ ಲಿಂಗಾಯ ನಮಃ ಎಂಬ ಮಂತ್ರವನ್ನು ಕಲಿಸುತ್ತೇವೆ ಎಂದುಕೊಳ್ಳಿ. ಅದು ಯಾಂತ್ರಿಕವಾಗಿ ಉಚ್ಚರಿಸುವುದು ನಿಜ. ಆದರೆ ಅದಕ್ಕೆ ಲಿಂಗಜ್ಞಾನ ಅಳವಡುವುದಿಲ್ಲ. ಅದೇ ರೀತಿ ಕೆಲವರು ಧರ್ಮವಂತರಿರುವರು. ಅವರು ಮಹಾತ್ಮರನ್ನು ಭಾವಚಿತ್ರಗಳನ್ನು ಪೂಜಿಸುವರು, ಅವರನ್ನು ಭಜಿಸುವರು, ಹಾಡಿ ಹೊಗಳುವರು ಮತ್ತು ಮತ್ತೊಮ್ಮೆ ಹುಟ್ಟಿ ಬಾ ಎಂದು ಕರೆಯುವರು. ಸಾಧಕ ಜೀವಿಗಳು ಆದರ್ಶದ ಪಥ ಹಿಡಿದು ಬಂದಾಗ ಅವರನ್ನು ಅರಿಯದೆ, ಪ್ರೋತ್ಸಾಹಿಸದೆ, ಟೀಕಿಸುತ್ತಾ ಕಾಲ ಕಳೆಯುವರು. ಅದಕ್ಕೇ ಗುರು ಬಸವಣ್ಣನವರು ಹೇಳಿರುವುದು.

"ಲಿಂಗದೇವನ ಶರಣರು ಬಂದ ಬರವ, ನಿಂದ ನಿಲುವ ಅನಂಗ ಸಂಗಿಗಳು ಎತ್ತ ಬಲ್ಲರು ?" ಎಂದು

ಸಾಮಾನ್ಯವಾಗಿ ಸಾಂಪ್ರದಾಯಿಕ ಮಠಗಳಿಗೆ ಅಧಿಕಾರಿಗಳನ್ನು ಆಯ್ಕೆ ಮಾಡುವಾಗ ಅವರಿಗೆ ಅದ್ದೂರಿ ಸ್ವಾಗತ, ಪಟ್ಟಾಭಿಷೇಕ, ಉತ್ಸವ, ಯಥೇಚ್ಛ ಕಾಣಿಕೆ. ಸ್ವಯಂ ಪ್ರೇರಣೆಯಿಂದ ಅಧ್ಯಾತ್ಮಿಕ ಪಥಕ್ಕೆ ಬರುವವರಿಗೆ ಮನೆಯವರಿಂದ ವಿರೋಧ, ಹೊರಗಿನವರಿಂದ ಟೀಕೆ, ಕೈಯಲ್ಲಿ ಕಾಸಿರುವುದಿಲ್ಲ, ಊಟಕ್ಕೂ ತೊಂದರೆ, ಜೊತೆಗೆ ನಿಂದೆ. ಆದರೆ ವಿಚಿತ್ರವೆಂದರೆ ಸಮಾಜವು ಆರಿಸಿಕೊಂಡ ಮೊದಲನೆಯ ವರ್ಗದವರಿಗಿಂತಲೂ , ಸ್ವಯಂ ಪ್ರೇರಣೆಯಿಂದ ವಿರೋಧ ಎದುರಿಸಿ ಮುಂದೆ ಬಂದವರಿಂದಲೇ ಸಮಾಜದಲ್ಲಿ ಪರಿವರ್ತನೆ, ಧರ್ಮಜಾಗೃತಿ. ಅಂಥ ಸಾಧಕ ಜೀವಿಗಳನ್ನು ಲೌಕಿಕ ಜನರು ಎಲ್ಲಿ ಅರಿಯುವರು ಎಂದು ಬಸವಣ್ಣನವರು ವಿಷಾದಿಸುತ್ತಾರೆ.

(- ಮುಂದುವರಿಯುವುದು)



ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ತಮಿಳು ನಾಡು ರಾಜ್ಯದ ರಾಜಧಾನಿ ಚೆನ್ನೈನಲ್ಲಿ
ಲಿಂಗಾಯತ ಧರ್ಮದ ಒಂಬತ್ತನೆಯ ಸಮ್ಮೇಳನ
2009, ಮೇ 2, 3 ಮತ್ತು 4ರಂದು

ಬಸವ ಧರ್ಮ ಪೀಠ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ 2009ನೇ ಇಸವಿಯ ಮೇ 2,3 ಮತ್ತು 4ರಂದು ಲಿಂಗಾಯತ ಧರ್ಮದ ಒಂಬತ್ತನೆಯ ಸಮ್ಮೇಳನವನ್ನು ತಮಿಳು ನಾಡು ರಾಜ್ಯದ ರಾಜಧಾನಿ ಚೆನ್ನೈದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಮೊಟ್ಟ ಮೊದಲನೆಯ ಸಮ್ಮೇಳನವು 1993ರಲ್ಲಿ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿಯಲ್ಲಿ ಜರುಗಿತು. ನಂತರ ಕ್ರಮವಾಗಿ ಹೈದರಾಬಾದ್ (1994), ಬೆಂಗಳೂರು, ಇಚಲ ಕರಂಜಿ, ನವ ದೆಹಲಿ, ಗೋಕಾಕ್, ಮುಂಬಯಿಯ ಮಹಾನಗರದಲ್ಲಿ ಸಮ್ಮೇಳನಗಳು ಜರುಗಿದವು. 1997ರಲ್ಲಿ ಭಾರತದ ಹೆಮ್ಮೆಯ ರಾಜಧಾನಿ ನವದೆಹಲಿಯ ಲಾಲ್ ಕಿಲ್ಲಾ ಮೈದಾನದಲ್ಲಿ, 2005ರಲ್ಲಿ ಲಾಲ್ ಕಿಲ್ಲಾ ಮೈದಾನಕ್ಕೆ ಹತ್ತಿರದಲ್ಲಿ ಇರುವ ದರಿಯಾಗಂಜ್‌ನ ಮಹಾವೀರ ವಾಟಿಕಾದಲ್ಲಿ ಜರುಗಿತು. 2007ರಲ್ಲಿ ಮಹಾವೀರ್ ಎನ್‌ಕ್ಲೇವ್, ಪಾಲಮ್‌ದ ಎಂ.ಸಿ.ಡಿ. ಭವನದ ಸಮೀಪದ ಮೈದಾನದಲ್ಲಿ ಜರುಗಿತು. ಇದೀಗ ಒಂಬತ್ತನೆಯ ಸಮ್ಮೇಳನವನ್ನು ತಮಿಳುನಾಡಿನ ರಾಜಧಾನಿ ಚೆನ್ನೈ ಪಟ್ಟಣದಲ್ಲಿ 2009ರ ಮೇ 2, 3 ಮತ್ತು 4 ಶರಣ(ಶನಿ)ವಾರ, ದೇವ(ಭಾನು)ವಾರ ಮತ್ತು ಶಿವ(ಸೋಮ)ವಾರ ದಂದು ಸಂಯೋಜಿಸಲಾಗಿದೆ.

ಸಮ್ಮೇಳನ ಸ್ಥಳ : ಚೆನ್ನೈ ನಗರದ ಹೃದಯ ಭಾಗದಲ್ಲಿರುವ ತ್ಯಾಗರಾಜ ನಗರ (ಟಿ.ನಗರ ಎಂಬುದು ಸಂಕ್ಷಿಪ್ತ ರೂಪ)ದ ಹಿಂದಿ ಪ್ರಚಾರ ಸಭಾದ ಗಾಂಧಿ ಕಾನ್ವೊಕೇಷನ್ ಹಾಲ್.

ವಿಶ್ವಗುರು ಬಸವಣ್ಣನವರು (1134 -1196) ಭಾರತದ ಮೊಟ್ಟ ಮೊದಲ ಸಮತಾವಾದಿ, ಸಮಾಜ ಸುಧಾರಕರು. ಅವರ ದಿವ್ಯ ಸಂದೇಶಗಳು ಎಲ್ಲ ರಾಜ್ಯಗಳಲ್ಲಿ, ಎಲ್ಲ ಭಾಷೆಗಳಲ್ಲಿ ಪ್ರಚಾರವಾಗುವುದು ಅತ್ಯಂತ ಅವಶ್ಯಕವಾಗಿದೆ. ಗುರು ಬಸವಣ್ಣನವರು ಸಂಸ್ಥಾಪಿಸಿಕೊಟ್ಟ ಲಿಂಗಾಯತ ಧರ್ಮವು ಅತ್ಯಂತ ಪ್ರಗತಿಪರ ವಿಚಾರಗಳಿಂದ ಕೂಡಿದ ರಾಷ್ಟ್ರಧರ್ಮವಾಗಿದೆ. ಇದನ್ನು ಅನುಸರಿಸುವ ಲಿಂಗಾಯತ ಧರ್ಮ ಬಾಂಧವರು ದೇಶದಲ್ಲಿ ಎಲ್ಲೆಡೆ ಚದುರಿದಂತೆ ನೆಲೆಸಿದ್ದಾರೆ. ಲಿಂಗಾಯತ ಸಮಾಜದ ಸಂಘಟನೆ ಮತ್ತು ಬಸವ ತತ್ವ ಪ್ರಚಾರದ ದೃಷ್ಟಿಯಿಂದ ಪ್ರಸ್ತುತ ಸಮ್ಮೇಳನವನ್ನು ಏರ್ಪಡಿಸಲಾಗಿದೆ.

ಭಾಗವಹಿಸುವವರಿಗೆ ಸೂಚನೆಗಳು

ಪ್ರತಿನಿಧಿ ಶುಲ್ಕ ಒಬ್ಬರಿಗೆ 800ರೂಗಳು. ಮೇ 1ರ ಮಧ್ಯಾಹ್ನದಿಂದ ಮೇ4 ರ ಮಧ್ಯಾಹ್ನದ ವರೆಗೆ ಊಟ ಮತ್ತು ವಸತಿಯ ಜವಾಬ್ದಾರಿ ಸಮ್ಮೇಳನ ಸಮಿತಿಯದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ.

1. ಚೆನ್ನೈನಲ್ಲಿ ಸಂದರ್ಶನೀಯ ಸ್ಥಳಗಳು ಬಹಳ. ಹೀಗಾಗಿ ಜನರು ಒಂದೆರಡು ದಿವಸ ಜಾಸ್ತಿ ಉಳಿದು ನಗರ ಸಂದರ್ಶನ ಮಾಡುವುದು ಅನಿವಾರ್ಯವಾಗುತ್ತದೆ. ಆಗ ಜನರು ತಮ್ಮ ಜವಾಬ್ದಾರಿ ಮೇಲೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಗಾಂಧಿ ಭವನದ ಆವರಣದಲ್ಲಿ ಉಳಿಯಲು ಅನುಕೂಲವಿದೆ. ಅದರ ವಸತಿ ಶುಲ್ಕ ತಾವೇ ಕಟ್ಟಿಕೊಳ್ಳಬೇಕು. ನಗರ ಮಧ್ಯೆ ಇರುವುದರಿಂದ ಉಪಾಹಾರ ಗೃಹಗಳು ವಿಪುಲವಾಗಿವೆ.

2. ಪ್ರತಿನಿಧಿ ಶುಲ್ಕವನ್ನು ಆದಷ್ಟು ಬೇಗನೆ ಕಳಿಸಿ ವಿವರಗಳನ್ನು ನೀಡಬೇಕು.

ಅಕ್ಕಿ, ದವಸ -ಧಾನ್ಯ, ತರಕಾರಿ ಇತ್ಯಾದಿಗಳ ಬೆಲೆ ತೀರಾ ಏರಿರುವುದರಿಂದ ಸಾಮಗ್ರಿಗಳನ್ನು ಖರೀದಿಸುವುದು ಅತ್ಯಗತ್ಯವಾಗಿರುತ್ತದೆ ಮತ್ತು ವಸತಿ ವ್ಯವಸ್ಥೆಗಾಗಿ ಕಲ್ಯಾಣ ಮಂಟಪಗಳನ್ನು ಕಾಯ್ದಿರಿಸಲಾಗಿದೆ.

3. ಸಮ್ಮೇಳನ ಸಮಿತಿಯು ಸಾಮೂಹಿಕವಾಗಿ ವಸತಿ ವ್ಯವಸ್ಥೆಯನ್ನು ಮಾಡುತ್ತದೆ. ಪ್ರತ್ಯೇಕವಾಗಿ ಲಾಡ್ಜಿಂಗ್‌ದಲ್ಲಿ ಇರಬಯಸುವವರು ಮೊದಲೇ ತಿಳಿಸಬೇಕು. ಸಮ್ಮೇಳನ ಸ್ಥಳಕ್ಕೆ ಸಮೀಪದಲ್ಲಿರುವ ಲಾಡ್ಜಿಂಗ್ ಹುಡುಕಲಾಗುವುದು. ಲಾಡ್ಜಿಂಗ್ ಕೋಣೆಯ ಬಾಡಿಗೆ ಜೊತೆಗೆ ಸರ್ವೀಸ್ ಛಾರ್ಜು ಸೇರಿಸಲಾಗುವುದು. ಮುಂದೆ ಹೊರಡಿಸುವ ಕರಪತ್ರದಲ್ಲಿ, ಕಲ್ಯಾಣ ಕಿರಣದಲ್ಲಿ ಲಾಡ್ಜಿಂಗ್ ಕೋಣೆಗಳ ಬಾಡಿಗೆಯ ವಿವರ ನೀಡಲಾಗುವುದು. ಹಣವನ್ನು ಮೊದಲೇ ಪಾವತಿ ಮಾಡಿದರೆ ಮಾತ್ರ ಕೋಣೆ ಕಾಯ್ದಿರಿಸಲಾಗುವುದು. ಏಕೆಂದರೆ ಖಾಸಗಿ ಅತಿಥಿ ಗೃಹಗಳವರು ಮುಂಗಡ ಹಣ ಕಟ್ಟದಿದ್ದರೆ ಕಾಯ್ದಿರಿಸುವುದಿಲ್ಲ ಮತ್ತೆ ಕೆಲವರು ಫೋನ್ ಮೂಲಕ ಹೇಳುತ್ತಾರೆ. ನಾವು ನಂಬಿ ಹಣವನ್ನು ಕಟ್ಟುತ್ತೇವೆ. ನಂತರ ಕಾರಣಾಂತರದಿಂದ ಬರಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆಗ ಯಾರೂ ಆ ಕೋಣೆಗೆ ಬರದಿದ್ದರೆ ನಮಗೆ ನಷ್ಟವಾಗುತ್ತದೆ. ಕಳೆದ ಎರಡು ಸಲದ ಅನುಭವದ ಮೇಲೆ ಈಗ ಮುನ್ನೆಚ್ಚರಿಕೆ ವಹಿಸಲಾಗುತ್ತಿದೆ.

4. ಸಮ್ಮೇಳನಗಳನ್ನು ನಾವು ಕಡಿಮೆ ಮಾಡಿದ್ದೇಕೆ ಎಂದರೆ ಅನೇಕರು ಪ್ರತಿನಿಧಿ ಶುಲ್ಕವನ್ನು ಕೊಡದಿರುವುದು. ಶರಣ ಮೇಳ, ಕಲ್ಯಾಣ ಪರ್ವಕ್ಕೆ ಧಾವಿಸಿದಂತೆ ಪರರಾಜ್ಯಗಳ ಸಮ್ಮೇಳನಕ್ಕೂ ಬಂದರೆ ನಾವು ಖರ್ಚುವೆಚ್ಚವನ್ನು ಹೇಗೆ ನಿಭಾಯಿಸಬೇಕು ? ಊರು ನೋಡಲು, ಸಾಮಾನು ಖರೀದಿಸಲು ಹಣ ಇರುತ್ತದೆ. ಪ್ರತಿನಿಧಿ ಶುಲ್ಕ ತುಂಬಲು ಇರದೆ ? ಧರ್ಮ ಸಂಸ್ಥೆಗೆ ಕೊಡಬೇಕಾದ ಶುಲ್ಕದ ಹಣದಲ್ಲಿ ಉಳಿಸಿಕೊಂಡು ವೈಯಕ್ತಿಕ ಸಾಮಾನು ಖರೀದಿಗೆ ಬಳಸಬೇಕೆಂಬ ಕ್ಷುಲ್ಲಕ ಮನೋಭಾವ ಕೆಲವರದು. ಈ ರೀತಿ ಮಾಡಬಾರದು. ಅದರಿಂದ ನಮಗೆ ಸಮ್ಮೇಳನ (ಶಿಬಿರ)ಗಳನ್ನು ನಡೆಸುವ ಉತ್ಸಾಹ ಕಡಿಮೆಯಾಗಿದೆ. ಶರಣ ಮೇಳ, ಕಲ್ಯಾಣ ಪರ್ವ, ಅಲ್ಲಮ ಗಿರಿಯ ಗಣ ಮೇಳಕ್ಕೆ ನಿರ್ಬಂಧ ವಿಧಿಸುವುದಿಲ್ಲ. ಆದರೆ ಪರವೂರಿನಲ್ಲಿ ಮಾಡುವಾಗ, ಎಲ್ಲ ಸಾಮಾನುಗಳು ತುಟ್ಟಿಯಾಗಿರುವ ಈ ಕಾಲದಲ್ಲಿ, ಸಮ್ಮೇಳನಗಳನ್ನು ಮಾಡುವುದು ಎಷ್ಟು ಶ್ರಮದ ಕೆಲಸ ಎಂಬುದನ್ನು ಶರಣ ಬಂಧುಗಳು ಮನಗಾಣಬೇಕು.

ಬೇಗನೆ ಪ್ರತಿನಿಧಿ ಶುಲ್ಕವನ್ನು ಕಳಿಸಿದರೆ ಗುರುತಿನ ಚೀಟಿ (Identity Card) ಕಳಿಸಿಕೊಡಲು ಸಾಧ್ಯವಾಗುವುದು. ಅದರಲ್ಲಿ ಕ್ರಮ ಸಂಖ್ಯೆ, ಸಂಸ್ಥೆಯ ವಿಳಾಸ, ದೂರವಾಣಿ ಸಂಖ್ಯೆ ಮುಂತಾದ ವಿವರಗಳು ಇರುತ್ತವೆ.

5. ಸಮ್ಮೇಳನಕ್ಕೆ ಬಂದವರು 3 ದಿನ ತಪ್ಪದೆ ಭಾಗಿಯಾಗಿ ನಂತರ ಸುತ್ತ ಮುತ್ತಲಿನ ಸ್ಥಳ ನೋಡಲು ಹೋಗಬೇಕು. ಭಾಗವಹಿಸಿದ ಅಲ್ಲಿನ ಅತಿಥಿಗಳಿಗೆ ನಮ್ಮ ಧರ್ಮ - ಸಂಸ್ಕೃತಿ - ಸಮಾಜಗಳ ಪರಿಚಯ ಮಾಡಿಕೊಡಬೇಕೆಂಬ ಹಂಬಲ, ಉತ್ಸಾಹ ನಮ್ಮದಾಗಿರುತ್ತದೆ. ಆಗ ಇಲ್ಲಿಂದ ಬಂದವರು ಬರೀ ಊರು ತಿರುಗುತ್ತಿದ್ದರೆ ಪ್ರಯೋಜನವೇನು ? ಕೇವಲ ಊರು ನೋಡಲು ಬರುವುದೇ ಆದರೆ ಬೇರೆ ಸಮಯದಲ್ಲಿ ಹೋಗಿ, ಬರಬಹುದು. ಆದ್ದರಿಂದ ಅನ್ಯರ ಎದುರು ನಮ್ಮ ಶಿಸ್ತು, ಒಗ್ಗಟ್ಟು, ಸಂಸ್ಕೃತಿಯನ್ನು ತೋರಿಸುವುದು ಅವಶ್ಯವಿರುತ್ತದೆ.

6. ಬೆಂಗಳೂರಿನಿಂದ ಚೆನ್ನೈಗೆ ನೇರವಾಗಿ ಹೋಗುವವವರಿಗೆ ರೇಲ್ವೆ ರಿಸರ್ವೇಷನ್‌ಗೆ ನೆರವು ನೀಡಲಾಗುವುದು.

1. ಮಲಗಿ ಹೋಗಲು ರಾತ್ರಿ ಟ್ರೇನ್ - ಬೆಲೆ: ಹೋಗುವ, ಮರಳಿ ಬರುವ ಟಿಕೆಟ್ (ಎರಡೂ ಕಡೆ ಸೇರಿ) 410-00

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 320-00 (ಗಂಡಸರಿಗೆ)

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 270-00 (ಮಹಿಳೆಯರಿಗೆ)

2. ಕುಳಿತು ಹೋಗುವ ಹಗಲಿನ ಟ್ರೇನ್ - ಬೆಲೆ : ಹೋಗುವ, ಮರಳಿ ಬರುವ ಟಿಕೆಟ್ (ಎರಡೂ ಕಡೆ ಸೇರಿ) 240-00

60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 200-00 (ಗಂಡಸರಿಗೆ)
60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 150-00 (ಮಹಿಳೆಯರಿಗೆ)
(ಇವರು 60 ವರ್ಷ ಮೇಲಿನವರೆಂದು ಸಿದ್ಧಪಡಿಸಲು ಏನಾದರೂ ದಾಖಲೆ ತರಬೇಕು)

ಹೋಗುವಾಗ ಎಲ್ಲರೂ ಒಟ್ಟಿಗೆ ಹೋದರೂ ಬರುವಾಗ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಬರುವುದರಿಂದ ವಾಪಸ್ಸು ಬರುವ ದಿನವನ್ನು ತಿಳಿಸಬೇಕು. ತಡ ಮಾಡಿದರೆ ರಿಸರ್ವೇಷನ್ ಸಿಗುವುದು ಬಹಳ ಕಷ್ಟ. ಬೇಗನೆ ನಿರ್ಧಾರ ತೆಗೆದುಕೊಳ್ಳದೆ ಕೆಲವರು ಹಿಂದಿನ ದೆಹಲಿಯ ಸಮ್ಮೇಳನದ ಅವಕಾಶವನ್ನು ಕಳೆದುಕೊಂಡರು.

(ವಿ.ಸೂ: ದಕ್ಷಿಣ ಭಾರತವು ಬಹಳಷ್ಟು ಆಕರ್ಷಣೀಯ ಸ್ಥಳಗಳನ್ನು ಹೊಂದಿದ್ದು ಅನೇಕರು ಅವುಗಳನ್ನು ಸಂದರ್ಶಿಸುವ ಅಭಿಲಾಷೆ ಹೊಂದಿದ್ದಾರೆ. ಆ ಸ್ಥಳಗಳ ಮಾಹಿತಿ, ಪ್ರವಾಸದ ವೆಚ್ಚ ಮುಂತಾದ ವಿವರಗಳಿಗೆ ಇಂದುಶೇಖರ್ ಅವರನ್ನು ಸಂಪರ್ಕಿಸಿರಿ.)

ರೇಲ್ವೆ ರಿಸರ್ವೇಷನ್‌ಗೆ ಸಂಪರ್ಕಿಸಬೇಕಾದವರು: ಇಂದು ಶೇಖರ್ - 9945684230.

ವಿ.ಸೂ : ಮೇಲೆ ಕೊಟ್ಟಿರುವುದು ಕೇವಲ ರೇಲ್ವೆ ಛಾರ್ಜು. ಇದರಲ್ಲಿ ಪ್ರತಿನಿಧಿ ಶುಲ್ಕ ಸೇರಿಸಿಲ್ಲ. ಅದನ್ನು ಪ್ರತ್ಯೇಕವಾಗಿ ಕೊಡಬೇಕು.

ವಿಶೇಷ ಸೂಚನೆ : 1997ರ ಸಮ್ಮೇಳನದ ಸಮಯದಲ್ಲಿ ಕೆಲವರು ಪ್ರಮುಖರು ಸಂಗ್ರಹಿಸಿದ ಪ್ರತಿನಿಧಿ ಶುಲ್ಕವನ್ನು ಕೊಡದೆ ಆ ಹಣವನ್ನು ಸ್ವಂತಕ್ಕೆ ಬಳಕೆ ಮಾಡಿಕೊಂಡರು. ಇದರಿಂದ ಸಮ್ಮೇಳನ ಸಮಿತಿಗೆ ತೊಂದರೆಯಾಯಿತಲ್ಲದೆ ಸ್ಥಳೀಯವಾಗಿ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳಲ್ಲಿ ಒಡಕು ಉಂಟಾಯಿತು. ಆದ್ದರಿಂದ ಈಗ ರಸೀತಿ ಪುಸ್ತಕಗಳನ್ನು ಕಳಿಸಲಾಗುವುದಿಲ್ಲ. ಕೇವಲ ಅರ್ಜಿ ಫಾರ್ಮುಗಳನ್ನು ಮಾತ್ರ ಆಯ್ದ ನೇತಾರರಿಗೆ ಕಳಿಸಲಾಗುವುದು. ಕಲ್ಯಾಣ ಕಿರಣದ ಫೆಬ್ರವರಿ ಸಂಚಿಕೆಯಲ್ಲಿ ಅರ್ಜಿಯ ಮಾದರಿ ಇರುತ್ತದೆ. ಪ್ರತಿನಿಧಿ ಶುಲ್ಕವನ್ನು ಜನರೇ ನೇರವಾಗಿ ಮೊದಲೇ ಕಳಿಸಿ, ಐಡೆಂಟಿಟಿ ಕಾರ್ಡ್ ಪಡೆದುಕೊಳ್ಳಬೇಕು ಅಥವಾ ವಿಶ್ವಾಸವಿರುವ ನೇತಾರರನ್ನು ಆಯ್ಕೆ ಮಾಡಿಕೊಂಡು ಅವರ ಮೂಲಕ ಭಾಗವಹಿಸುವ ಎಲ್ಲರ ಹಣವನ್ನು ಮೊದಲೇ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬೇಕು ಅಥವಾ ಬೆಂಗಳೂರಿಗೆ ಬಂದು ನಗದು ಕಟ್ಟಿ ರಸೀತಿ ಪಡೆಯಬೇಕು. ಪ್ರಸ್ತುತ ಕಲ್ಯಾಣ ಕಿರಣದಲ್ಲಿ ಅರ್ಜಿಫಾರ್ಮು ಮುದ್ರಿಸಲಾಗಿದೆ.

10. ರಾಷ್ಟ್ರೀಯ ಬಸವ ದಳ, ಗಣಾಚಾರ ದಳದ ಕಾರ್ಯಕರ್ತರು ಒಂದೆರಡು ದಿವಸ ಮೊದಲೇ ಬಂದರೆ ಸೇವೆ ಮಾಡಲು, ಬಂದವರಿಗೆ ಸೂಚನೆ ನೀಡಲು ಅನುಕೂಲವಾಗುತ್ತದೆ. ಒಂದೆರಡು ದಿವಸ ಮೊದಲೇ ಬರುವ ಸಾಧ್ಯತೆ ಇರುವ ಸ್ವಯಂ ಸೇವಕರು ತಮ್ಮ ಹೆಸರುಗಳನ್ನು ಬೆಂಗಳೂರು ಕಾರ್ಯಾಲಯಕ್ಕೆ ತಿಳಿಸಬೇಕು. ಚೆನ್ನಾಯ್ ಬಹಳ ಉಷ್ಣದೇಶ. ಆದ್ದರಿಂದ ಪ್ರತಿನಿಧಿಗಳು ರಗ್ಗು ಮುಂತಾಗಿ ಹೆಚ್ಚಿಗೆ ಲಗೇಜು ತರುವ ಅಗತ್ಯವಿರುವುದಿಲ್ಲ. ಊಟದ ತಟ್ಟೆ, ಲೋಟ ಜೊತೆಗೆ ತಂದರೆ ಒಳ್ಳೆಯದು.

13. ಸಮ್ಮೇಳನ ಪ್ರತಿನಿಧಿಗಳು ಕಡ್ಡಾಯವಾಗಿ ಬಿಳಿಯ ವಸ್ತ್ರ, ಕಾವಿಯ ಸ್ಕಾರ್ಫ್ ಮತ್ತು ಬ್ಯಾಡ್ಜ್ ಧರಿಸಿರಬೇಕು. ಐಡೆಂಟಿಟಿ ಕಾರ್ಡ್ - ಗುರುತಿನ ಚೀಟಿ ಹೊಂದಿರಬೇಕು. (ಹಿಂದಿನ ಸಮ್ಮೇಳನಗಳಲ್ಲಿ ಸ್ಕಾರ್ಫ್‌ಗಳು ಕಳೆದು ಕೊಂಡವರನ್ನು ಗುರುತಿಸಲು ಬಹಳ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು)

ಧನ ಸಹಾಯಕ್ಕೆ ವಿನಂತಿ

ತಮಿಳುನಾಡಿನ ರಾಜಧಾನಿ ಚೆನ್ನಾಯಿಯಲ್ಲಿ ಲಿಂಗಾಯತ ಧರ್ಮ ಸಮ್ಮೇಳನವನ್ನು ಸಂಯೋಜಿಸಲಾಗಿದ್ದು ಇದರ ಯಶಸ್ವಿ ನಿರ್ವಹಣೆಗಾಗಿ ಸಹೃದಯರು, ಸದ್ಭಕ್ತರಿಂದ ಉದಾರವಾದ ದೇಣಗೆಯನ್ನು ಕೋರುತ್ತೇವೆ.

ಮಹಾ ಪೋಷಕರು	: ರೂ 10,000/-	(ಹತ್ತು ಸಾವಿರ ಹಾಗೂ ಮೇಲ್ಪಟ್ಟು)
ಪೋಷಕರು	: ರೂ 5,000/-	(ಐದು ಸಾವಿರ ಹಾಗೂ ಮೇಲ್ಪಟ್ಟು)

ವಿಶೇಷ ದಾನಿಗಳು	: ರೂ 3,000/-	(ಮೂರು ಸಾವಿರ ಹಾಗೂ ಮೇಲ್ಪಟ್ಟು)
ದಾನಿಗಳು	: ರೂ 1,000/-	(ಒಂದು ಸಾವಿರ ಹಾಗೂ ಮೇಲ್ಪಟ್ಟು)
ಪ್ರತಿನಿಧಿ ಶುಲ್ಕ	: ರೂ 800/-	(ಎಂಟು ನೂರು ಹಾಗೂ ಮೇಲ್ಪಟ್ಟು)
ಹಿತೈಷಿಗಳು	: ರೂ 500/-	(ಐದು ನೂರು ಹಾಗೂ ಮೇಲ್ಪಟ್ಟು)

ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಎಷ್ಟಾದರೂ ಕೊಡಲು ಅವಕಾಶ ಉಂಟು. ಪ್ರಥಮ ಮಹಿಳಾ ಜಗದ್ಗುರುಗಳು, ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಒಂಬತ್ತನೆಯ ಲಿಂಗಾಯತ ಧರ್ಮ ಸಮ್ಮೇಳನವು ನಡೆಯಲಿದ್ದು ಅನೇಕ ರಾಜಕೀಯ ನೇತಾರರು, ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದಾರವಾಗಿ ದೇಣಿಗೆ ನೀಡಿ, ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ಕೋರುತ್ತೇವೆ.

ಪ್ರತಿನಿಧಿ ಶುಲ್ಕ, ಕಾಣಿಕೆ ಇತ್ಯಾದಿ ಕಳುಹಿಸುವವರು ಕೆಳಕಂಡಂತೆ ಬ್ಯಾಂಕ್ ಡ್ರಾಫ್ಟ್ ಬರೆಯಬೇಕು. ಪರವೂರಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

1.Basava Mahamane Charitable Trust, Payable at BANGALORE.

ವ್ಯವಹರಿಸುವ ವಿಳಾಸ :

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ (ರಿ.)
ಬಸವ ಮಂಟಪ, 2035, 20ನೇ ಮೇನ್,
2ನೇ ಬ್ಲಾಕು, ರಾಜಾಜಿ ನಗರ,
ಬೆಂಗಳೂರು -560010, ಕರ್ನಾಟಕ ರಾಜ್ಯ
ದೂರವಾಣಿ : 080-23325335/23131476

BASAVA MAHAMANE CHARITABLE TRUST (R)
BASAVA MANTAPA
2035, 20th Main, Chord Road, 2nd Block
Rajajinagar, BANGALORE -10, Karnataka -St
Ph : 080-23325335, 23131476, 22923736

ವಿಶೇಷ ವಿವರಗಳು :

1. ಬಸವ ಜಯಂತಿಯ (ಏಪ್ರಿಲ್ 27) ನಿಮಿತ್ತ ಬಹಳ ಜನರು ಸಮ್ಮೇಳನ ದಿನಾಂಕ ಕುರಿತು ಆತಂಕ ವ್ಯಕ್ತಪಡಿಸಿದ ಕಾರಣ ಸಮ್ಮೇಳನ ದಿನಾಂಕಗಳನ್ನು 2009ರ ಮೇ 2, 3 ಮತ್ತು 4ಕ್ಕೆ ಬದಲಾಯಿಸಲಾಗಿದೆ.
2. ದಾಸೋಹಿಗಳು ಒಂದೊಂದು ಹೊತ್ತಿನ ಉಪಾಹಾರದ ಖರ್ಚು, ಮಧ್ಯಾಹ್ನ ಊಟದ ಖರ್ಚು ವಹಿಸಿಕೊಳ್ಳಲು ಅವಕಾಶವಿದೆ.
3. ವಸತಿಗಾಗಿ ಕಲ್ಯಾಣ ಮಂಟಪಗಳನ್ನು ಕಾಯ್ದಿರಿಸಲಾಗಿದೆ. ಮುಂದಿನ ಸಂಚಿಕೆಯಲ್ಲಿ ವಿವರ ನೀಡಲಾಗುವುದು. ಟ್ರೇನ್, ಬಸ್ಸು ಇಳಿದವರು ನೇರವಾಗಿ ಅಲ್ಲಿಗೇ ಹೋಗಬಹುದು.

This mortal world is but the Maker's mint
Those who earn merit here, earn also there
And those who earn not here earn neither there
O Lord Lingadeva. - Lord Basava

ಗಣ ಮೇಳದಲ್ಲಿ ಸಂದೇಶ ವಾಚನ

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

(ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಿಂದ ಅಥವಾ ಸರಿಯಾಗಿ ಓದಬಹುದಾದ ಆಹ್ವಾನಿತ ಅತಿಥಿಗಳಿಂದ)

॥ಓಂ ಶ್ರೀ ಗುರು ಬಸವ ಲಿಂಗಾಯ ನಮಃ॥

ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿ, ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಈ ಪವಿತ್ರ ಶರಣ ಗಣ ಮೇಳದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಶರಣ 'ಗಣ ಮೇಳ' ವು ಅತ್ಯಂತ ಪವಿತ್ರವಾದ ಗಣ ಸಮಾವೇಶ. ಧರ್ಮಪಿತರ ಕಾಲದಲ್ಲಿ ಹಲವಾರು ಗಣಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯೊಳು ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ, ಭಕ್ತಿಯ ಬಣ್ಣವೇರಿಸಿದ ಕಾರಣಿಕರಾದರು.' ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ' ಎಂದರೇನು ? ಗಣ ಎಂದರೆ ಸಮೂಹ, ಸಮಾಜ, ಧರ್ಮಪಿತ ಬಸವಣ್ಣನವರು 'ಗಣ ಧರ್ಮ' ಎಂಬುದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ ಎಂದು ಘೋಷಿಸಿ ತಾತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ.

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿ ಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ಕಾಣುತ್ತಲೇ 'ಕೊ ಕ್ಕೊ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ
ಬಿನ್ನಪವ ಅವಧಾರು; ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ
ಕರೆದೊಡೋ ಎನಿಸಿದಡೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು ಪರಮಾತ್ಮನಿಗೆ ಶರಣಾಗುವುದು; ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. 'ಗಣ ಮೇಳಾಪ' -ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲ ಶಸ್ತ್ರ.

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ

ಒಟ್ಟುಗೂಡಿದ್ದೇವೆ. ಈ ಗಣ ಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ-ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮ ಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ.
ಜಗತ್ ಕರ್ತನಿಗೆ ಶರಣಾಗಿದ್ದೇನೆ
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ತ್ವದ ಪ್ರತೀಕವಾಗಿದೆ. ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ನಾವಿಲ್ಲಿ ಸೇರಿದ್ದೇವೆ.

ಸರ್ವ ಶರಣರ ದಿನಾಚರಣೆ

ಒಂದು ತತ್ತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (heritage) ಸಾಗಿಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗಾಯತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ, ಬಸವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ, ವೀರ ಮಾತೆ ಅಕ್ಕನಾಗಲಾಂಬಿಕೆ ಎಂಬ ಸಪ್ತ ಗಣಾಧೀಶರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈವರೆಗೆ ಆಗಿ ಹೋಗಿರುವ ಲಿಂಗಾಂಗಯೋಗಿಗಳು, ಶರಣರು ಅಸಂಖ್ಯಾತರು. ಅವರ ಜಯಂತಿ -ಲಿಂಗೈಕ್ಯ ದಿನ ಆಚರಿಸಲು ವರ್ಷದ 365 ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟಮೊದಲ ಯೋಗಿಯೂ, ಓಂಕಾರದ ದ್ರಷ್ಟಾರನೂ, ಭಾರತೀಯ ಧಾರ್ಮಿಕ ಪರಂಪರೆಯ ಮೂಲಿಗನಾದ ವೇದಪೂರ್ವ ಪ್ರವಾದಿ "ಯೋಗಿರಾಜ ಶಿವ"ನ ತಪಸ್ಸಿನ ದಿನವಾದ "ಶಿವರಾತ್ರಿಯಂದು" ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ.

ಬಸವ ಧರ್ಮ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸ್ವರೂಪವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕ್ರಿ.ಶ. 1134ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು. ಶೈವ ಬ್ರಾಹ್ಮಣರಾದ ಮಾದಿರಾಜ-ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹುದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ, ಜಾತಿಪದ್ಧತಿ ಇವುಗಳ ಪ್ರತಿಫಲವಾದ ಅಸ್ಪೃಶ್ಯತೆ, ಯಜ್ಞ-ಯಾಗಾದಿಗಳ ಹಿಂಸೆ, ಕ್ರೂರದೇವತೆಗಳಿಗೆ ಕೊಡುವ ಪ್ರಾಣಬಲಿ, ಪೂಜಾದಿಗಳಲ್ಲಿದ್ದ ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯಗಳ ಸಂಕುಚಿತತೆ, ದೇವ-ಭಕ್ತರ ನಡುವೆ ಇವು ಬೆಳೆಸಿದ ಕಂದರ, ಸ್ತ್ರೀ ಶೋಷಣೆ ಮುಂತಾದವುಗಳನ್ನು ಕಂಡು ಬೇಸತ್ತು ನೊಂದು ತಾಯಿ-ತಂದೆ, ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸ ಧರ್ಮದ ರೂಪುರೇಷೆ ಮೂಡಿಸಿಕೊಂಡು ಬಸವರಸ -ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು. ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ, ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು .ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟಿನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು . ಅವರ ನಿರ್ಗಮನದ ನಂತರ ವಿವಾಹದಲ್ಲಿ ಭಾಗಿಗಳಾದ ಶರಣರ ವಧೆಯಾಯಿತು. ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದು

ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ ಕ್ರಿ.ಶ. 1196ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಆದಿ ಗುರು ಬಸವಣ್ಣನವರು ನಮಗೆ ವಿಶೇಷ ಶರಣ ಪಥವನ್ನು ನೀಡಿದ್ದಾರೆ. ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ತ್ವಗಳು ಷಡಾಚಾರಗಳು

1. ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತನು ಕಳಿಸಿದ ಪ್ರತಿನಿಧಿ, ದೇವರ ಕರುಣೆಯ ಕಂದ (ಬಸವಾಚಾರ)
2. ದೇವನು ಒಬ್ಬ; ಲಿಂಗದೇವನನ್ನು ಇಷ್ಟಲಿಂಗರೂಪದಲ್ಲಿ ಪೂಜಿಸಬೇಕು. (ಲಿಂಗಾಚಾರ);
3. ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು (ಸದಾಚಾರ)
4. ಮಾನವರೆಲ್ಲರೂ ಸಮಾನರು. ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)
5. ಅನ್ಯಾಯವನ್ನು-ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)
6. ವ್ಯಕ್ತಿಗಿಂತಲೂ ಸಮಾಜ-ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು. (ಭೃತ್ಯಾಚಾರ)

ದರ್ಶನ ಶಾಸ್ತ್ರ : ಷಟಸ್ಥಲ - ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ ನೆಲೆ-ಲಿಂಗದೇವನಲ್ಲಿ ಒಡವೆರೆದು ಒಂದಾಗುವುದು, ಅಂಗ ಲಿಂಗದೊಡನೆ ಒಂದಾಗಬೇಕಾದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲ (stages) ಗಳನ್ನು ಅಳವಡಿಸಿಕೊಳ್ಳಬೇಕು.

ಆಚರಣೆ : ಅರ್ಚನೆ-ಅರ್ಪಣೆ-ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು! ಕಾಯಕ ಮಾಡಿ ಊಟ ಮಾಡುವುದು; ಶರಣರ ಸಂಗದಲ್ಲಿ ಒಡನಾಡುವುದು.

ಲಾಂಛನಗಳು : ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು-ಲಿಂಗ-ಜಂಗಮ-ವಿಭೂತಿ-ರುದ್ರಾಕ್ಷಿ-ಮಂತ್ರ, ಕರುಣೋದಕ-ಕರುಣ ಪ್ರಸಾದ ಅಳವಡಿಸಿಕೊಳ್ಳುವುದು.

ಸಪ್ತನೀತಿ ಸೂತ್ರ : ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟು ಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿ ಕೊಂಡಿದ್ದಾರೆ. ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅತ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು - ಒಡೆಯುವುದಿಲ್ಲ

ವಿಶ್ವಗುರು ಬಸವಣ್ಣನವರು ವಿಶ್ವ ಕುಟುಂಬತ್ವದ ಬೋಧೆ ನೀಡಿದ್ದಾರೆ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ

ಇವನಾರು ? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ, ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ, ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪ ಹೊಂದಿದೆ. ಕಾರಣವೇನೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ,

ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವ ಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣ ಮೇಳದ ಇಂದು ತೊಡೋಣ.

ಜಯ ಗುರು ಬಸವೇಶ ಹರಹರ ಮಹಾದೇವ.

ಶರಣ ಮೇಳದಲ್ಲಿ ಬಿಡುಗಡೆಯಾದ ಹೊಸ ಪುಸ್ತಕಗಳು

1. ಬಸವ ವಚನಾಮೃತ: ಪುಟಗಳು 88; ಬೆಲೆ: 25/- ರೂಪಾಯಿಗಳು

ಪೂಜ್ಯ ಮಾತಾಜಿಯವರು ಹಲವಾರು ತಿಂಗಳುಗಳಿಂದ ಕಲ್ಯಾಣ ಕಿರಣದಲ್ಲಿ ಗುರು ಬಸವಣ್ಣನವರ ವಚನಗಳಿಗೆ ಅನುಭಾವ ಹಾಗು ಪಾಂಡಿತ್ಯ ಪೂರ್ಣವಾದ ವ್ಯಾಖ್ಯಾನಗಳನ್ನು ಬರೆಯುತ್ತಿದ್ದು. ಇಲ್ಲಿಯವರೆಗೆ ಸುಮಾರು 108 ವಚನಗಳಿಗೆ ಅರ್ಥವನ್ನು ಬರೆದಿದ್ದಾರೆ. ಗುರು ಬಸವಣ್ಣನವರ ಎಲ್ಲಾ ವಚನಗಳಿಗೂ ಹಂತ ಹಂತವಾಗಿ ಅರ್ಥ ಬರೆದು ಪ್ರಕಟಿಸುವ ಉದ್ದೇಶ ಪೂಜ್ಯ ಮಾತಾಜಿಯವರಿಗಿದೆ ಇದೀಗ ಮೊದಲನೇ ಹಂತವಾಗಿ 108 ವಚನಗಳಿಗೆ ಅರ್ಥ ಬರೆದ "ಬಸವ ವಚನಾಮೃತ" ಎನ್ನುವ ಕೃತಿ ಸುಯಿಧಾನ ಸುಗ್ರಂಥ ಮಾಲೆಯ 152ನೇ ಪುಷ್ಪವಾಗಿ ಹೊರಬಂದಿದೆ.

2. ಶರಣರ ನೆನೆ ಮನವೆ: ಪುಟಗಳು 112; ಬೆಲೆ: 30/- ರೂಪಾಯಿಗಳು

"ಶರಣರ ನೆನೆ ಮನವೆ" ಎನ್ನುವ ಗ್ರಂಥ ಸುಯಿಧಾನ ಸುಗ್ರಂಥ ಮಾಲೆಗೆ ಶರಣ ಸಚ್ಚಿದಾಂದರವರ 6ನೇ ಪುಷ್ಪ. ಮಾತಾಜಿಯವರ ಸಂಪಾದಕತ್ವದ 'ಬಸವ ದರ್ಶನ' ಗ್ರಂಥದಲ್ಲಿ ಗುರು ಬಸವಣ್ಣನವರನ್ನು ಸಮಕಾಲೀನ ಮತ್ತು ನಂತರದ ಶರಣರು ಸ್ತುತಿಸಿದ ವಚನಗಳ ಸಂಗ್ರಹವಾಗಿದ್ದು ಅದೊಂದು ಪಾರಾಯಣ ಗ್ರಂಥ ಎನಿಸಿಕೊಂಡಿದೆ. ಶರಣೆ ಮಹಾದೇವಿ ಚಟನಳ್ಳಿಯವರು ಸಂಪಾದಿಸಿದ 'ಷಡ್‌ಗಣಾಧೀಶರ ಗುಣಗಾನ ಎನ್ನುವ ಗ್ರಂಥವು ಲಿಂಗಾಯತ ಧರ್ಮದ ಷಡ್‌ಗಣಾಧೀಶರನ್ನು ಎಲ್ಲಾ ಶರಣರು ಸ್ತುತಿಸಿದ ವಚನಗಳ ಸಂಗ್ರಹವಾಗಿದ್ದು ಇದು ಕೂಡ ಪಾರಾಯಣ ಗ್ರಂಥವಾಗಿದೆ. ಅದೇ ರೀತಿ ಶರಣರನ್ನು ಸ್ತುತಿಸಿದ ಇನ್ನೊಂದು ಪಾರಾಯಣ ಗ್ರಂಥ ರಚನೆಯಾಗಬೇಕು ಎನ್ನುವ ಮಾತಾಜಿಯವರ ಆದೇಶದಂತೆ ರಚಿಸಿದ ಈ ಗ್ರಂಥವು 12ನೇ. ಶತಮಾನದ ಶರಣರು ಒಬ್ಬರನ್ನೊಬ್ಬರು ಸ್ತುತಿಸಿದ ಮತ್ತು ನಂತರದ ಶರಣರು 12ನೇ ಶತಮಾನದ ಶರಣರನ್ನು ಸ್ತುತಿಸಿದ ವಚನಗಳ ಸಂಗ್ರಹವನ್ನೊಳಗೊಂಡಿದೆ. ನಾವು ಶಿವರಾತ್ರಿಯಂದು ಸರ್ವ ಶರಣರ ದಿನಾಚರಣೆಯನ್ನು ಆಚರಿಸುವುದರಿಂದ ವೈಯಕ್ತಿಕವಾಗಿ ಪೂಜೆ ಮಾಡಿದಾಗ ಪಾರಯಣ ಮಾಡಬೇಕಾದ ಗ್ರಂಥವಿದು. ಶಿವರಾತ್ರಿಯಂದು ಈ ಗ್ರಂಥ ಪಾರಾಯಣ ಮಾಡುವುದರಿಂದ ಎಲ್ಲಾ ಶರಣರನ್ನು ವಚನಗಳ ಮೂಲಕ ಸ್ಮರಿಸಿದಂತಾಗುತ್ತದೆ.

ಕಲ್ಯಾಣ ಕಿರಣ ಚಂದಾದಾರರಲ್ಲಿ ಮನವಿ

ಕಲ್ಯಾಣ ಕಿರಣ ಸಕಾಲದಲ್ಲಿ ತಲುಪದಿರುವುದಕ್ಕೆ ಸರಿಯಾದ ವಿಳಾಸವಿಲ್ಲದಿರುವುದು ಕಾರಣವಾಗಿದ್ದು ಪ್ರತಿ ತಿಂಗಳು ಸುಮಾರು 100 - 150ರವರೆಗೆ ಪ್ರತಿಗಳು ವಾಪಸ್ಸಾಗುತ್ತವೆ. ಆದ್ದರಿಂದ ದಯವಿಟ್ಟು ಸರಿಯಾದ ವಿಳಾಸ ಮತ್ತು ಪಿನ್‌ಕೋಡ್ ಹಾಗೂ ತಮ್ಮ ದೂರವಾಣಿ ಸಂಖ್ಯೆಗಳನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿ. ಕಲ್ಯಾಣ ಕಿರಣದ ಯಾವುದೇ ಸಮಸ್ಯೆಯಿರುವವರು ಈ ಕೆಳಗೆ ನಮೂದಿಸಿದ ಜಂಗಮ ದೂರವಾಣಿಗಳಿಗೆ ಎಸ್.ಎಂ.ಎಸ್. (ಮೆಸೇಜ್) ಅಥವಾ ಕರೆ ಮಾಡಿ ತಮ್ಮ ಕುಂದು ಕೊರತೆಗಳನ್ನು ಪರಿಹರಿಸಿಕೊಳ್ಳಲು ಕೋರುತ್ತೇವೆ. ದೂರವಾಣಿಗಳ ಸಂಖ್ಯೆಗಳು : 9620058492, 9481249857

ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೋ..

-ಸಚ್ಚಿದಾನಂದ ಚಟನಳ್ಳಿ

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ
ಸಲಹುತ್ತ ಶಿವ ಶಿವ ಎಂದೋದಿಸಯ್ಯಾ
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು ಲಿಂಗದೇವಾ

ಅನೇಕ ಕ್ರೂರ ಮೃಗಗಳು, ವಾಸಿಸುವ ಕಾಡಿನಲ್ಲಿ ಒಂದು ಮರಿ ಗಿಳಿ ಬದುಕಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಅದು ಪಂಜರದ ಮೊರೆ ಹೋಗಬೇಕು. ಹಾರಲಿಕ್ಕೆ ಬರದ ಗಿಳಿ ಮರಿಗಳನ್ನು ತಿಂದು ಹಾಕಲು ಬೆಕ್ಕುಗಳು ಹೊಂಚು ಹಾಕುತ್ತಿರುತ್ತವೆ.

ಅದೇ ರೀತಿ ಮನುಷ್ಯನು ವಾಸಿಸುವ ಈ ಜಗತ್ತೇ ಒಂದು ಕಾಡು. ಇಲ್ಲಿ ಅನೇಕ ಪ್ರಲೋಭನೆಗಳು, ಆಸೆ ಆಮಿಷಗಳೇ ಕ್ರೂರ ಮೃಗಗಳು. ಅವುಗಳು ವ್ಯಕ್ತಿಯಲ್ಲಿರುವ ಆತ್ಮಚೈತನ್ಯವನ್ನು ಮಲೀನಗೊಳಿಸುತ್ತವೆ. ಅದಕ್ಕಾಗಿ ವ್ಯಕ್ತಿಯು ತನ್ನ ಆತ್ಮವೆಂಬ ಗಿಳಿಯನ್ನು ಉಳಿಸಿಕೊಂಡು ಪರಮಾತ್ಮನಲ್ಲಿಗೆ ಸಲ್ಲಿಸಲು ಭಕ್ತಿಯೆಂಬ ಪಂಜರದ ಮೊರೆ ಹೋಗಬೇಕು. ಆಧ್ಯಾತ್ಮ ಜೀವಿಯು ತಾನೇ ನಿರ್ಮಿಸಿಕೊಂಡ ಒಂದು ಶಿಸ್ತಿನ ಚೌಕಟ್ಟಿನಲ್ಲಿ ಬದುಕಬೇಕು ಎನ್ನುವುದೇ ಮೇಲಿನ ವಚನದ ಅರ್ಥ. ಅಂದರೆ ನಾವು ಮಾಡುವ ಭಕ್ತಿ ವೈಚಾರಿಕತೆಯಿಂದ ಕೂಡಿರಬೇಕು.

ಶಿವರಾತ್ರಿಯು ಭಕ್ತಿ ಪ್ರಧಾನವಾದ ಹಬ್ಬ, ಇದು ಯೋಗಿರಾಜನಾದ ಶಿವನು ತಪಸಿಗೆ ಕುಳಿತ ದಿನ. ಗಾಂಧಿ ಜಯಂತಿ ಎಂದರೆ ಗಾಂಧೀಜಿ ಹುಟ್ಟಿದ ದಿನ ಹೇಗೋ, ಹಾಗೆಯೇ ಶಿವರಾತ್ರಿ ಎಂದರೆ ಶಿವನು ತಪಸ್ಸಿಗೆ ಕುಳಿತ ದಿನ. ಅದಕ್ಕಾಗಿ ಆ ದಿನವನ್ನು ಸಾಂಕೇತಿಕವಾಗಿ ಶಿವರಾತ್ರಿಯೆಂದು ಆಚರಿಸುತ್ತಾರೆ. ವೈಚಾರಿಕ ತಳಹದಿಯ ಮೇಲೆ ಶಿವರಾತ್ರಿಯನ್ನು ವಿಶ್ಲೇಷಿಸುವುದಾದರೆ, ಅದನ್ನು ಜಾಗೃತಿಯ ರಾತ್ರಿ (The night of awakeness) ಅಥವಾ ಎಚ್ಚರಿಕೆಯ ರಾತ್ರಿ ಎಂದು ತಿಳಿದುಕೊಳ್ಳಬಹುದು. ಕೇವಲ ಸಂಸಾರ ಸುಖದಲ್ಲೇ ತಲ್ಲೀನನಾದ ಮಾನವನು ಇಂದ್ರಿಯ ಸುಖದಿಂದ ಎಚ್ಚೆತ್ತುಕೊಂಡು ಪಾರಮಾರ್ಥಿಕ ಸುಖವನ್ನು ಪಡೆಯಬೇಕು. ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವ ಮಾನವನು ಆತ್ಮ ಜಾಗೃತಿಯನ್ನು ಮಾಡಿಕೊಳ್ಳಬೇಕು ಎನ್ನುವುದೇ ಶಿವರಾತ್ರಿ.

ಇಡೀ ವರ್ಷದಾದ್ಯಂತ ಲೌಕಿಕ ವ್ಯವಹಾರಗಳಲ್ಲಿಯೇ ಮುಳುಗಿರುವ ಮನುಷ್ಯನು ವರ್ಷಕ್ಕೊಮ್ಮೆಯಾದರೂ ಶಿವಭಕ್ತಿಯನ್ನು ಮಾಡಬೇಕು ಎಂದು ತಿಳಿದು ಶಿವರಾತ್ರಿಯನ್ನು ಆಚರಣೆಗೆ ತರಲಾಗಿದೆ. ಅದರ ಮೂಲ ಉದ್ದೇಶವೇ ಬೇರೆ. ಇಂದು ಜನರು ಅದನ್ನು ಆಚರಿಸುವ ರೀತಿಯೇ ಬೇರೆಯಾಗಿದೆ. ಶಿವರಾತ್ರಿಯಂದು ಉಪವಾಸವಿರಬೇಕು ಎಂಬುದು ನಿಯಮ. ಉಪವಾಸವೆಂದರೆ ಪ್ರಸಾದ (ಊಟ) ಮಾಡದೇ ಇರುವುದು ಎಂದಲ್ಲ. ಉಪ-ಎಂದರೆ ಹತ್ತಿರ, ವಾಸ-ಎಂದರೆ ಇರು. ಉಪವಾಸ ಎಂದರೆ ಹತ್ತಿರದಲ್ಲಿ ಇರು. ಯಾರಿಗೆ ? ಶಿವನಿಗೆ. ಆದರೆ ಅನೇಕರು ಶಿವನಿಗೆ ಹತ್ತಿರ ಇರುವುದಿಲ್ಲ ಹಸಿವನ್ನು ಮರೆಯಲಿಕ್ಕೆ ಸಿನಿಮಾಗಳಿಗೆ ಹತ್ತಿರವಾಗುತ್ತಾರೆ. ಆದರೆ ಶರಣರು ಇದನ್ನು ಒಪ್ಪುವುದಿಲ್ಲ. **ಊಟ ಮಾಡದೇ ಹೊಟ್ಟೆಯ ಚಿಂತೆ ಮಾಡುವ ಬದಲಿಗೆ, ಊಟ ಮಾಡಿ ದೇವರ ಚಿಂತೆ ಮಾಡಬೇಕು** ಎನ್ನುತ್ತಾರೆ. ಅಲ್ಲದೆಯೇ ಬಸವ ತತ್ವ ಅನುಯಾಯಿಗಳಿಗೆ, ವರ್ಷಕ್ಕೊಮ್ಮೆ ಬರುವ ಶಿವರಾತ್ರಿಯೇ ಶಿವರಾತ್ರಿಯಲ್ಲ; ಅವರಿಗೆ ನಿಚ್ಚವೂ ಶಿವರಾತ್ರಿಯೆ. ಕಾರಣ ಶರಣರು ದಿನನಿತ್ಯವೂ ಎರಡೂ ಹೊತ್ತು ಲಿಂಗಾರ್ಚನೆ ಮಾಡುತ್ತಾರೆ. ಸದಾಕಾಲ ದೇವನ ಧ್ಯಾನದಲ್ಲಿಯೇ ಇರುತ್ತಾರೆ. ಅದಕ್ಕಾಗಿ ಶರಣರು ಮಲಗಿದರೆ ಅದುವೆ ಜಪ ! ಎದ್ದು ಕುಳಿತರೇ ಅದುವೇ ಶಿವರಾತ್ರಿ!!

ಶರಣ ನಿದ್ರೆಗೈದೊಡೆ ಜಪಕಾಣಿರೋ
ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೋ
ಶರಣ ನಡೆದುದೇ ಪಾವನ ಕಾಣಿರೋ

ಶರಣ ನುಡಿದುದೇ ಶಿವತತ್ವ ಕಾಣಿರೋ
ನಮ್ಮ ಲಿಂಗದೇವನ ಶರಣನ
ಕಾಯಕವೇ ಕೈಲಾಸ ಕಾಣಿರೋ.

ದೇವರ ಹೆಸರಿನಲ್ಲಿ ಪ್ರಸಾದ ಮಾಡದೆ ಉಪವಾಸವಿರುವುದನ್ನು ಶರಣರು ಒಪ್ಪುವುದೇ ಇಲ್ಲ. ಕೆಲವರು ದೇವರ ಹೆಸರಿನಲ್ಲಿ ಉಪ್ಪು ಬಿಡುತ್ತಾರೆ, ಸಿಹಿ ಬಿಡುತ್ತಾರೆ, ಖಾರ ಬಿಡುತ್ತಾರೆ. ''ಲಿಂಗದೇವನ ಒಲಿಸಲು ಬಂದ ಪ್ರಸಾದ ಕಾಯವ ಕೆಡಿಸಲಾಗದು'' ಎಂದು ಹೇಳುವ ಗುರು ಬಸವಣ್ಣನವರು, ದೇಹವನ್ನು ಆರೋಗ್ಯಯುತವಾಗಿ ಕಾಪಾಡಿಕೊಳ್ಳಬೇಕು ಎನ್ನುತ್ತಾರೆ. ಬಿಡಬೇಕಾಗಿರುವುದು ಬೇರೆಯೇ ಇದೆ. ಅದನ್ನು ಸಿದ್ಧಯ್ಯ ಪುರಾಣಿಕರು ತುಂಬಾ ಚೆನ್ನಾಗಿ ಹೇಳುತ್ತಾರೆ.

ದೇವಾ, ನಿನ್ನ ಹೆಸರಿನಲ್ಲಿ ಉಪ್ಪು ಬಿಟ್ಟವರುಂಟು,
ಸೊಪ್ಪು ಬಿಟ್ಟವರುಂಟು, ತುಪ್ಪ ಬಿಟ್ಟವರುಂಟು,
ತಪ್ಪು ಬಿಟ್ಟವರ ತೋರಾ.
ದೇವಾ ನಿನ್ನ ಹೆಸರಿನಲ್ಲಿ ಕೇಶ ತೊರೆದವರುಂಟು,
ವೇಶ ತೊರೆದವರುಂಟು, ದೇಶ ತೊರೆದವರುಂಟು,
ಆಸೆ ತೊರೆದವರ ತೋರಾ.
ಸ್ವತಂತ್ರಧೀರ ಶಿವ ಸಿದ್ದೇಶ್ವರ ಪ್ರಭುವೆ
ಆಸೆ ತೊರೆದವರು ನಿನಗೆ ಪ್ರಿಯರು.

ಇಲ್ಲಿಯವರೆಗೆ ಮಾಡಿರುವ ತಪ್ಪುಗಳನ್ನು ಬಿಡಬೇಕು. ಅತಿ ಆಸೆಯನ್ನು ಬಿಡಬೇಕು. ಇಲ್ಲಿಯವರೆಗೆ ಸಾಗಿ ಬಂದ ಜೀವನದ ಸಿಂಹಾವಲೋಕನ ಮಾಡಿಕೊಳ್ಳಬೇಕು. ಸ್ವವಿಮರ್ಶೆ ಮಾಡಿಕೊಳ್ಳಬೇಕು, ಅಂತರಾವಲೋಕನ ಮಾಡಿಕೊಳ್ಳಬೇಕು. ಹಿಂದೆ ಮಾಡಿರುವಂಥ ತಪ್ಪುಗಳನ್ನು ತಿದ್ದಿಕೊಂಡು ಭಕ್ತಿ ಮಾರ್ಗದಲ್ಲಿ ನಡೆದರೆ ದೇವರೊಲುಮೆಯಾಗುತ್ತದೆ.

ಅರಿಯದೆಸಗಿದ ತಪ್ಪು। ಅರಿತರದು ತನಗೊಳಿತು
ಅರಿತರಿತು ಎಸಗಿದ ತಪ್ಪು। ನಯನವನು
ಇರಿದುಕೊಂಬಂತೆ ಸರ್ವಜ್ಞ ॥

ಮತ್ತೆ ಮತ್ತೆ ಮಾಡುವಂಥ ತಪ್ಪುಗಳನ್ನಾಗಲೀ ಮೂಢಾಚರಣೆಗಳನ್ನಾಗಲೀ ಮಾಡಬಾರದು. ಏಕೆಂದರೆ ''ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ ನಮ್ಮ ಲಿಂಗದೇವರು'' ಎನ್ನುತ್ತಾರೆ ಗುರು ಬಸವಣ್ಣನವರು.

ನಾನು ಈ ಮೊದಲೇ ಹೇಳಿದ ಹಾಗೆ ಶಿವರಾತ್ರಿ ಎಂದರೆ ನಮ್ಮನ್ನು ನಾವು ಎಚ್ಚರಿಸಿಕೊಳ್ಳುವ ರಾತ್ರಿ. ಒಂದು ಮನೆ ಕಟ್ಟಬೇಕಾದರೆ ಅದರ ತಳಪಾಯ ತುಂಬಾ ಗಟ್ಟಿಯಿರಬೇಕು ಮತ್ತು ಮನೆಕಟ್ಟುವ ಜಾಗದಲ್ಲಿ ಹೆಗ್ಗಣಗಳು ಇರಬಾರದು. ಹೆಗ್ಗಣಗಳಿದ್ದರೆ ಎಷ್ಟೇ ದೊಡ್ಡ ಮನೆಕಟ್ಟಿದರೂ ಅವುಗಳು ಕೆದರಿ ಹಾಕುತ್ತವೆ. ಅದೇ ರೀತಿ ನಾವು ಸದ್ಭಕ್ತಿಯ ಮನೆ ಕಟ್ಟಿಕೊಳ್ಳಬೇಕಾದರೆ, ಸುಜ್ಞಾನ ಮತ್ತು ನೈತಿಕತೆ ಎನ್ನುವ ತಳಪಾಯ ಗಟ್ಟಿಯಿರಬೇಕು.

ಹೆಗ್ಗಣವನಿಕ್ಕಿ ನೆಲಗಟ್ಟ ಕಟ್ಟಿದಂತೆ ಆಯಿತ್ತೆನ್ನ ಕಾಯಗುಣ
ಅಹಂಕಾರ ಲೋಭನೆಗಳೇಕಯ್ಯಾ?
ಕಾಮ ಕ್ರೋಧ ಮದ ಮತ್ಸರಗಳನಿಕ್ಕಿ
ಎನ್ನ ಮಾಡಿದಿರಿ, ಎನ್ನ ಬಾಧಿಸಲೆಂದು ಲಿಂಗಯ್ಯ ತಂದೆ.
ಆದಿವ್ಯಾಧಿಗಳೆಲ್ಲವ ಕಳೆದು
ನಿರ್ವಾಣವಪ್ಪ ಪದವ ಕರುಣಿಸಯ್ಯಾ ಕೂಡಲ ಚೆನ್ನಸಂಗಮದೇವಾ.

ಕಾಮ, ಕ್ರೋಧ, ಮದ, ಮತ್ಸರಾದಿಗಳು ಭಕ್ತಿಯೆಂಬ ಮನೆಯಲ್ಲಿ ಬಿಟ್ಟ ಹೆಗ್ಗಣಗಳಂತೆ ಯಾವಾಗ ಈ ಮನೆಯನ್ನು ನಾಶಮಾಡುತ್ತವೆಯೋ ಗೊತ್ತಿಲ್ಲ. ರಾವಣ ಅಪ್ರತಿಮ ಶಿವಭಕ್ತ.

ಶಿವಭಕ್ತಿಯಲ್ಲಿ ಅವನನ್ನು ಮೀರಿಸುವವರು ಯಾರೂ ಇಲ್ಲ. ಹಿಮಾಲಯದಲ್ಲಿ ತಪಸ್ಸನ್ನು ಮಾಡಿ ಶಿವನಿಂದ ಶಿವಲಿಂಗವನ್ನು ಪಡೆದುಕೊಂಡಿದ್ದ. ಅಪ್ರತಿಮ ನಾದಯೋಗಿಯಾಗಿದ್ದ ಆದರೆ ಅವನಲ್ಲಿ ಕಾಮ, ಕ್ರೋಧ, ಮದ, ಮತ್ಸರಾದಿಗಳು ತುಂಬಿ ತುಳುಕುತ್ತಿದ್ದವು. ಅದಕ್ಕಾಗಿಯೇ ಅವನು ಅರೆ ಆಯುಷ್ಯವಾಗಿ ನಾಶ ವಾಗಿರುವುದನ್ನು ಕಾಣುತ್ತೇವೆ. ಭಕ್ತಿಯನ್ನು ಮಾಡುವಂಥ ಭಕ್ತ ತುಂಬಾ ಎಚ್ಚರದಿಂದಿರಬೇಕಾಗುತ್ತದೆ. ಸ್ವಲ್ಪ ಎಚ್ಚರ ತಪ್ಪಿದರೂ ನಾಶ ಖಂಡಿತ. ಹಲವಾರು ದಿನಗಳಿಂದ ಗಳಿಸಿಕೊಂಡ ಭಕ್ತಿ ಕೆಡುತ್ತದೆ.

ಹಲವು ಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯು
ಒಂದು ಮಿಡುಕುರಿಯಲ್ಲಿ ಬೇವಂತೆ
ಸಲೆ ನೆಲೆ ಸನ್ನಿಹಿತನಾಗಿಪ್ಪ ಶರಣನ ಭಕ್ತಿ
ಒಂದನಾಯತದಿಂದ ಕೆಡುವುದು
ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ
ಅಧರ್ಮದಲ್ಲಿ ಕೆಡಿಸುವ ಸುತನಂತೆ
ಶಿವನ ಸೊಮ್ಮು ಶಿವಂಗೆ ಮಾಡದೆ ಅನ್ಯಕ್ಕೆ ಮಾಡಿದಡೆ
ತನ್ನ ಭಕ್ತಿ ತನ್ನನ್ನೇ ಕೆಡಿಸುವುದು ಲಿಂಗದೇವಾ. (ಬ.ವ.ದೀ.-215)

ಕಬ್ಬು ಬೆಳೆಯುವ ಭಾಗದಲ್ಲಿ ಕಬ್ಬಿನ ರಾಶಿ ಮಾಡಲಿಕ್ಕೆ ಗಾಣಕಟ್ಟುತ್ತಾರೆ. ಕಬ್ಬು ಹಿಂಡಿದ ಮೇಲೆ ಉಳಿದಿರುವ ಸಿಪ್ಪೆ (Pulp)ಯನ್ನು ಒಣಗಿಸಿ, ಕಬ್ಬಿನ ಹಾಲು ಕಾಯಿಸಿ ಬೆಲ್ಲ ಮಾಡಲು ಸೌದೆಯಾಗಿ ಉಪಯೋಗಿಸುತ್ತಾರೆ. ಕೊನೆಯಲ್ಲಿ ದಿನವೂ ಸ್ವಲ್ಪ ಸ್ವಲ್ಪ ಸಿಪ್ಪೆಯನ್ನು ಮುಂದಿನ ವರ್ಷದ ಆರಂಭದಲ್ಲಿ ಸೌದೆಗಾಗಿ ಉಪಯೋಗಿಸಲು ಬಣವೆ (ಹಿದಿರೆ)ಯೊಟ್ಟುತ್ತಾರೆ. ಇಂಥ ಬಣವೆಯನ್ನು ಸುಮಾರು ದಿನಗಳ ಕಾಲ ಸಿಪ್ಪೆಯನ್ನು ಸಂಗ್ರಹ ಮಾಡಿ ಒಟ್ಟುತ್ತಾರೆ. ಇಂಥ ಬಣವೆಯನ್ನು ಒಂದು ವರ್ಷದ ಕಾಲದವರೆಗೆ ಅತೀ ಜಾಗ್ರತೆಯಿಂದ ಕಾಯ್ದುಕೊಳ್ಳಬೇಕಾಗುತ್ತದೆ. ಒಂದೇ ಒಂದು ಸಣ್ಣ ಬೆಂಕಿಯ ಕಿಡಿ ಹತ್ತಿದರೂ ಬಣವೆಯು ಉರಿದು ಭಸ್ಮವಾಗುತ್ತದೆ. ಅದೇ ರೀತಿ ಭಕ್ತಿ ಮಾರ್ಗದಲ್ಲಿ ನಡೆವ ಭಕ್ತನು ತನ್ನ ಸದ್ಭಕ್ತಿಯ ಬಣವೆಯನ್ನು ಅತೀ ಜಾಗೃತೆಯಿಂದ ಕಾಯ್ದುಕೊಳ್ಳಬೇಕು. ಮನದಲ್ಲಿ ದೇವರ ಕರುಣೆಯ ಬಗ್ಗೆ ಗುರುವಿನ ಅನುಗ್ರಹದ ಬಗ್ಗೆ ಶಂಕೆ ಅನುಮಾನ ಮೂಡದಂತೆ ನೋಡಿಕೊಳ್ಳಬೇಕು. ಪರದೈವ, ಪರಧನ, ಪರಸತಿ ಇವೂ ಮೂರು ಅತ್ಯಂತ ಅಪಾಯಕಾರಿಯಾದವುಗಳು. ಆದ್ದರಿಂದ ಇವುಗಳಿಂದ ದೂರವಿರಬೇಕು. ಇಷ್ಟಲಿಂಗ ಪೂಜೆಯು ಮಾಡುವ ಭಕ್ತನು ಅನ್ಯದೇವರ ಪೂಜೆ ಮಾಡಲಾಗದು. ಹಾಗೆ ಮಾಡಿದರೆ ಹಿಂದೆ ಮಾಡಿದ ಭಕ್ತಿಗೆ ಹಾನಿಯಾದಂತೆಯೇ ಸರಿ.

ನಮ್ಮ ದೇಶದಲ್ಲಿ ಪ್ರತಿಯೊಂದು ಹಬ್ಬದ ಹಿಂದೆಯೂ ಮೂಢನಂಬಿಕೆಗಳ ಕಂತೆ ತುಂಬಿರುತ್ತದೆ. ಶಿವರಾತ್ರಿಯ ನಂತರ ಬರುವ ಕಾಮದಹನ (ಹೋಳಿ) ಹಬ್ಬದಷ್ಟು ಕೆಟ್ಟದಾದ ಆಚರಣೆ ಮತ್ತೊಂದು ಹಬ್ಬದಲ್ಲಿಲ್ಲ. ಈ ಹಬ್ಬದ ಹಿಂದೆ ಇರುವ ವಾಸ್ತವಿಕತೆಯೇ ಬೇರೆ.

ಶಿವರಾತ್ರಿಯಂದು ಶಿವನು ತಪಸ್ಸಿಗೆ ಕುಳಿತ. ಶಿವನನ್ನು ಮದುವೆಯಾಗಬೇಕು ಎಂದು ಬಯಸಿ ಉಮೆ (ಪಾರ್ವತಿ)ಯು ಶಿವನನ್ನೊಲಿಸಿಕೊಳ್ಳಲು ಅವನ ಮುಂದೆಯೇ ತಪಸ್ಸಿಗೆ ಕುಳಿತಳು. 10-15 ದಿನಗಳಾದ ಮೇಲೆ ಶಿವನು ಒಮ್ಮೆ ಕಣ್ಣು ತೆರೆಯುತ್ತಾನೆ. ಎದುರಿಗೆ ಅತ್ಯಂತ ಸುಂದರಿ, ಲಾವಣ್ಯವತಿ, ಸಾತ್ವಿಕ ಮುಖ ಮುದ್ರೆಯವಳಾದ ಉಮೆಯು ಕುಳಿತಿದ್ದಾಳೆ. ಅವಳನ್ನು ನೋಡಿ ಶಿವನ ಮನಸ್ಸಿನಲ್ಲಿ ಒಂದು ಕ್ಷಣ ಕಾಮವು ಹುಟ್ಟಿಕೊಂಡಿತು. ಶಿವನು ತಕ್ಷಣವೇ ತನ್ನ ಅರಿವನ್ನು ಜಾಗೃತ ಮಾಡಿ, ತನ್ನ ಮನದಲ್ಲಿ ಹುಟ್ಟಿದ ಆಸೆಯೆಂಬ ಕಾಮನನ್ನು ಜ್ಞಾನದ ಉರಿಯಿಂದ ಸುಟ್ಟು ಬಿಟ್ಟನು. ಇದು ಪ್ರತಿಯೊಬ್ಬರು ಮಾಡಬೇಕಾದ ಸಾಧನೆ. ಅಂತರಂಗದಲ್ಲಿ ಹುಟ್ಟುವ ದೌರ್ಬಲ್ಯಗಳನ್ನು ಅರಿವಿನ ಅಗ್ನಿಯಿಂದ (ಜ್ಞಾನನೇತ್ರದಿಂದ) ದಹಿಸಿಕೊಳ್ಳಬೇಕು. ಇದು ನಿಜವಾದ ಕಾಮದಹನ. ಅಲ್ಲಿ ಕಾಮನೆಂಬುವನೊಬ್ಬ ಇದ್ದ, ಅವನು ತಪಸ್ಸಿಗೆ ಕುಳಿತ ಶಿವನ ಮೇಲೆ ಕಾಮಬಾಣವನ್ನು ಬಿಟ್ಟ ಅದಕ್ಕೆ ಶಿವನು ಅವನನ್ನು ದಹಿಸಿದ. ಅದಕ್ಕೆ ಕಾಮನ ಹೆಂಡತಿ ನನ್ನ ಪತಿಯನ್ನು ಜೀವಂತ ಮಾಡು ಎಂದು ಕೇಳಿದಳು. ಅದಕ್ಕೆ ಶಿವನು ಕಾಮನು

ಈಗ ಶರೀರಧಾರಿಯಾಗಿ ಬರುವುದಿಲ್ಲ ಎಲ್ಲರ ಮನಸ್ಸಿನಲ್ಲಿ ಬರುತ್ತಾನೆ ಎಂದು ಹೇಳಿರುವುದೆಲ್ಲವೂ ಸಾಂಕೇತಿಕ. ಇದನ್ನು ಅರ್ಥ ಮಾಡಿಕೊಳ್ಳದೇ ಅನೇಕ ಮೂಢಭಕ್ತರು, ಕೆಟ್ಟ ಕೆಟ್ಟ ಹಾಡುಗಳನ್ನು ಹಾಡುತ್ತ, ಒಂದು ಕಾಮನ ಮೂರ್ತಿ ಮಾಡಿ ಸುಡುವುದು ಶುದ್ಧ ಮೂಢಾಚರಣೆ.

ಬಸವ ಗುರುವಿನ ಮಾರ್ಗದಲ್ಲಿ ನಡೆವವರು ವೈಚಾರಿಕ ಭಕ್ತಿಯನ್ನು ಮಾಡಬೇಕು. ಇಲ್ಲಿ ಯಾವುದೇ ಮೂಢನಂಬಿಕೆಗಳಿಗೆ ಆಸ್ಪದವಿಲ್ಲ. ಲಿಂಗಾಯತರು ಪೌರಾಣಿಕ ಶಿವನನ್ನು ಪೂಜಿಸರು. ಯೋಗಿ ಶಿವನನ್ನು ಗೌರವಿಸುತ್ತಾರೆ. ಪರಶಿವನನ್ನು ಮಾತ್ರ ಪೂಜಿಸುತ್ತಾರೆ. ಹಾಗಾದರೆ, ಪಂಚಭೂತಗಳ ಶಿವ, ಯೋಗಿಶಿವ, ಪರಶಿವ ಎಂದರೆ ಏನು ಎನ್ನುವುದನ್ನು ಸ್ವಲ್ಪ ನೋಡೋಣ.

ಆರಾಧನೆ ಎನ್ನುವುದು ಮಾನವನ ವಿಕಾಸದೊಂದಿಗೆ ಅವನ ಜೀವನದೊಂದಿಗೆ ಹಾಸು ಹೊಕ್ಕಾಗಿ ಬಂದಿರುವ ಪ್ರಕ್ರಿಯೆ. ತನಗಿಂತ ಹೆಚ್ಚು ಸಾಮರ್ಥ್ಯವುಳ್ಳ ಒಂದು ಅಗೋಚರ ಶಕ್ತಿಗೆ ಮೊರೆ ಹೋಗುವುದೇ ಆರಾಧನೆ. ಆರಂಭದಲ್ಲಿ ಮಾನವನು, ಸೃಷ್ಟಿಯ ವೈಚಿತ್ರ್ಯಗಳನ್ನು ನೋಡಿ, ಇವುಗಳಲ್ಲಿ ಏನೋ ಶಕ್ತಿ ಇದೆ ಎಂದು ತಿಳಿದು ಪ್ರತಿಯೊಂದು ಪಂಚಭೂತದ ಹಿಂದೆಯೂ ಒಂದು ದೇವರನ್ನು ಕಲ್ಪಿಸುತ್ತಾ ಬಂದ. ಭೂಮಿಯ ಹಿಂದೆ ಗೌರಿ, ನೀರಿನ ಹಿಂದೆ ಗಂಗೆ, ಬೆಂಕಿಯ ಹಿಂದೆ ಅಗ್ನಿದೇವತೆ, ಮಳೆಯ ಹಿಂದೆ ಇಂದ್ರ, ಗಾಳಿದೇವತೆ ಹೀಗೆ ಹಲವಾರು. ಇವುಗಳೆಲ್ಲವನ್ನೂ ಒಟ್ಟಿಗೇ ಪೂಜಿಸಬೇಕು ಎಂದು ಯೋಚನೆ ಬಂದಾಗ ರಚನೆಯಾದವನೇ ಪಂಚಭೂತಗಳ ಶಿವ. ಒಬ್ಬ ವ್ಯಕ್ತಿಯನ್ನು ಕಲ್ಪಿಸಿಕೊಂಡು ಅವನಲ್ಲಿ ಈ ಎಲ್ಲಾ ಪಂಚಭೂತಗಳನ್ನು ಮಾನವನು ಅಳವಡಿಸಿದನು. ಒಬ್ಬ ವ್ಯಕ್ತಿಯನ್ನು ಕಲ್ಪಿಸಿಕೊಂಡು, ಅವನಲ್ಲಿ ಭೂಮಿಯ ಸಂಕೇತವಾಗಿ, ಗೌರಿಯನ್ನು ಅಳವಡಿಸಲು ಹೋಗಿ ಅರ್ಧನಾರೀಶ್ವರನನ್ನಾಗಿ ಮಾಡಿದ. ನೀರನ್ನು ಪೂಜಿಸುವುದಕ್ಕಾಗಿ ಅವನ ತಲೆಯ ಮೇಲೆ ಗಂಗೆಯನ್ನು ಕೂಡಿಸಿದ. ಗಾಳಿಯನ್ನು ಪೂಜಿಸುವುದಕ್ಕಾಗಿ ಅವನ ಕೊರಳಿನಲ್ಲಿ ಒಂದು ಹಾವನ್ನು ಸುತ್ತಿದ ಏಕೆಂದರೆ, ಹಾವು ಆಹಾರವಿಲ್ಲದೆಯೇ ಹಲವಾರು ತಿಂಗಳು ಗಾಳಿ ಕುಡಿದೇ ಬದುಕುತ್ತದೆಯಂತೆ. ಅಗ್ನಿಯನ್ನು ಪೂಜಿಸುವುದಕ್ಕಾಗಿ ಅವನ ಹಣೆಯಲೊಂದು ಉರಿನೇತ್ರವನ್ನು ಇಟ್ಟ, ಆಕಾಶವನ್ನು ಪೂಜಿಸಲು ಆ ವ್ಯಕ್ತಿಗೆ ನೀಲಿ ಬಣ್ಣವನ್ನು ಬಳಿದ. ಹೀಗೆ ಪಂಚಭೂತಗಳಿಂದ ರಚನೆಯಾದ ಅರ್ಧನಾರಿನಟೇಶ್ವರನೇ ಪಂಚಭೂತಗಳ ಶಿವ.

ಎರಡನೆಯವರು ಯೋಗಿರಾಜ ಶಿವ. ಭಾರತ ದೇಶದಲ್ಲಿ ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆ ಹರಪ್ಪ ಮೊಹೆಂಜೊದಾರೊ ಸಂಸ್ಕೃತಿಗಿಂತ ಮುಂಚೆ ಬದುಕಿ ಬಾಳಿದ ವ್ಯಕ್ತಿಯೇ ಯೋಗಿ ಶಿವ. ಅವರು ಭಾರತ ದೇಶದ ಭಕ್ತಿ ಪರಂಪರೆಯ ಮೂಲಿಗರು. ನಾದಯೋಗಿ ನಾಟ್ಯಚಾರ್ಯ ವೈದ್ಯರಾಜ. ಈ ದೇಶದಲ್ಲಿ ಉನ್ನತವಾದ ಭಕ್ತಿ ಪರಂಪರೆಯನ್ನು ಬೆಳೆಸಿದ ವ್ಯಕ್ತಿ. ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಒಂದಾದ ಕೈಲಾಸ ಪರ್ವತದಲ್ಲಿ ಅವರು ವಾಸಿಸುತ್ತಿದ್ದರು. ಉಮೆ ಅಥವಾ ಪಾರ್ವತಿ ಅವನ ಹೆಂಡತಿ. ಶಿವ ಎಲ್ಲರಂತೆ ಸಾಮಾನ್ಯವಾಗಿ ತಂದೆ ತಾಯಿಯ ಒಡಲಿನಿಂದ ಹುಟ್ಟಿದ ವ್ಯಕ್ತಿ. ಅಸಾಮಾನ್ಯ ಸ್ಥಿತಿಗೇರಿ ಆತ್ಯಂತಿಕ ಸಿದ್ಧಿಗಳನ್ನು ಪಡೆದವರು. ಹುಟ್ಟಿ ಸಾಯುವಂಥವರು ದೇವರಲ್ಲ. ದೇವರು ಇವುಗಳಿಗೆ ಅತೀತನಾಗಿರುವುದರಿಂದ ಅವನಿಗೆ ಹುಟ್ಟು ಸಾವುಗಳಿಲ್ಲ. ಯೋಗಿ ರಾಜ ಶಿವ ಎಲ್ಲರಂತೆ ಹುಟ್ಟಿ, ಉನ್ನತ ಸಾಧನೆಯನ್ನು ಮಾಡಿ ಪರಮಾತ್ಮನನ್ನು ಕಂಡು ಒಂದು ದಿನ ಲಿಂಗೈಕ್ಯರಾದರು. ಆದ್ದರಿಂದ ಯೋಗಿಶಿವ ದೇವರಲ್ಲ! ಶಿವಪುರಾಣದಲ್ಲಿ ಒಂದು ಪ್ರಸಂಗವಿದೆ. ಒಮ್ಮೆ ಶಿವನು ಕಣ್ಣು ಮುಚ್ಚಿ ಧ್ಯಾನಕ್ಕೆ ಕುಳಿತಿದ್ದಾನೆ. ಆಗ ಪಾರ್ವತಿದೇವಿ ಬಂದು "ಶಿವನೇ ಈ ಜಗತ್ತಿಗೆಲ್ಲ ನೀವೆ ಸರ್ವಸ್ವರೋ ಅಥವಾ ನಿನಗಿಂತಲೂ ಹಿರಿದಾದ ಶಕ್ತಿಯಿದೆಯೋ? ಯಾವುದನ್ನು ಕುರಿತು ನೀವು ಧ್ಯಾನ ಮಾಡುತ್ತೀರಾ?" ಎಂದು ಕೇಳಿದರು. ಆಗ ಶಿವನು "ದೇವಿ ನಾನೂ ಕೂಡ ಎಲ್ಲರಂತೆ ಹುಟ್ಟಿದ್ದೇನೆ ಒಂದು ದಿನ ಎಲ್ಲರಂತೆ ಸಾಯಲೇ ಬೇಕು. ನಾನೇ ಈ ಸೃಷ್ಟಿಯಲ್ಲಿ ಸರ್ವಸ್ವವಲ್ಲ ನನಗಿಂತ, ಹಿರಿದಾದ, ಸರ್ವವ್ಯಾಪಿಯಾದ, ಸರ್ವಶಕ್ತ ಮತ್ತು ಸರ್ವಜ್ಞನಾದ

ಶಕ್ತಿಯೊಂದಿದೆ ಅದುವೇ ಪರಶಿವ. ಆ ಪರಶಿವನನ್ನು ಕುರಿತೆ ನಾನು ಸದಾಕಾಲ ಧ್ಯಾನಿಸುತ್ತೇನೆ'' ಎಂದನು.

ಇನ್ನು ಮೂರನೆಯ ಶಿವನೇ 'ಪರಶಿವ' ಸಚ್ಚಿದಾನಂದ ನಿತ್ಯಪರಿಪೂರ್ಣನಾಗಿರು-ವಂಥವನು. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನು. ಎಡೆಯಿಲ್ಲದ, ಕಡೆಯಿಲ್ಲದ ಕುಲಸೀಮೆಯಿಲ್ಲದ ನಿಸ್ಸೀಮ ಚಲುವ. ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವ. ಇಂಥ ಪರಶಿವನನ್ನೇ ವೇದಾಂತಿಗಳು ಪರಬ್ರಹ್ಮ ಎಂದರು. ಅಲ್ಲಹ, ಯಹೋವಾ ಎಂದೂ ಕೂಡ ಬೇರೆ ಬೇರೆ ಧರ್ಮೀಯರು ಕರೆದರು. ಅಂಥ ಪರಾತ್ಪರ ವಸ್ತುವನ್ನೇ ಗುರು ಬಸವಣ್ಣನವರು ತಮ್ಮ ವಚನಗಳಲ್ಲಿ 'ಲಿಂಗದೇವಾ' ಎಂದು ಕರೆದು, ಅವನನ್ನು ಪೂಜಿಸಲು ಇಷ್ಟಲಿಂಗ ರೂಪದಲ್ಲಿ ಚುಳುಕಾಗಿಸಿ ಕರಸ್ಥಲಕ್ಕೆ ಕೊಟ್ಟರು.

> ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
> ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
> ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ!
> ಅಪ್ರಮಾಣ, ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ,
> ಲಿಂಗದೇವಯ್ಯ ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ (ಬ.ವ.ದೀ.-740)

ಜಗದಗಲ ಮುಗಿಲಗಲನಾಗಿ, ಅಣುರೇಣು ತೃಣಕಾಷ್ಠದಲ್ಲಿ ಸರ್ವಭರಿತನಾಗಿ ಇರುವ ಪರಮಾತ್ಮನೇ ಚುಳುಕಾಗಿ, ಇಷ್ಟಲಿಂಗ ರೂಪದಲ್ಲಿ ಕರಸ್ಥಲಕ್ಕೆ ಬಂದಿದ್ದಾನೆ. ಅದಕ್ಕಾಗಿ ಇಷ್ಟಲಿಂಗಧಾರಿಯಾದವರು ನಿಷ್ಠೆಯಿಂದ ಇಷ್ಟಲಿಂಗವನ್ನು ಮಾತ್ರ ಪೂಜಿಸಬೇಕು.

ಅನೇಕರು ಇಷ್ಟಲಿಂಗವನ್ನು ಮೈ ಮೇಲೆ ಧರಿಸಿಕೊಳ್ಳುವುದಿಲ್ಲ, ಮೈಲಿಗೆಯಾಗುತ್ತೆ ಎಂದು ಕೆಲವರು, ಜಾತಿಯ ಕುರುಹು ಎಂದು ಕೆಲವರು ವಾದ ಮಾಡುತ್ತಾರೆ. ಇದು ಅಜ್ಞಾನದ ಮಾತು. ಇಷ್ಟಲಿಂಗವು ಮೈಲಿಗೆಯಾಗುವುದಿಲ್ಲ ಮನದ ಭ್ರಾಂತಿಯೆಂಬ ಮೈಲಿಗೆಯನ್ನು ಕಳೆಯುತ್ತದೆ. ಅದು ಜಾತಿಯ ಕುರುಹಲ್ಲ, ಅಂತರಂಗದಲ್ಲಿರುವ ಆತ್ಮಜ್ಯೋತಿಯ ಕುರುಹು. ಅನೇಕರು ಇಂಥ ಇಷ್ಟಲಿಂಗವನ್ನು ವರ್ಷಕ್ಕೊಮ್ಮೆ ಶಿವರಾತ್ರಿಯಂದು ಮಾತ್ರ ಹೊರ ತೆಗೆಯುತ್ತಾರೆ, ಈ ರೀತಿ ಮಾಡಬಾರದು. ನಮಗೆ ನಿಚ್ಚನಿಚ್ಚವೂ ಶಿವರಾತ್ರಿಯೇ ಅದನ್ನು ಅಕ್ಕರೆಯಿಂದ ಮಾಡುವ ಭಕ್ತನನ್ನು ದೇವರು ಮೆಚ್ಚಿಕೊಳ್ಳುತ್ತಾನೆ. ಅದಕ್ಕಾಗಿ ಇಂದು ಶಿವರಾತ್ರಿಯನ್ನು ಸಾಂಕೇತಿಕವಾಗಿ ಆಚರಿಸಿದರೂ ಶರಣ ಬಂಧುಗಳು ದಿನನಿತ್ಯವೂ ಎರಡೂ ಹೊತ್ತು ಲಿಂಗಪೂಜೆಯನ್ನು ಮಾಡುತ್ತ ಬಸವಾದಿ ಶರಣರ ಮಾರ್ಗದಲ್ಲಿ ನಡೆಯಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಶಿವರಾತ್ರಿಯಂದು ಎರಡನೆಯ ಕಾರ್ಯಕ್ರಮವೇನೆಂದರೆ ಸರ್ವಶರಣರ ದಿನಾಚರಣೆ. 12ನೇ ಶತಮಾನದಲ್ಲಿ ಕಲ್ಯಾಣದಲ್ಲಿ ಶರಣರು ಆಸೆ ಆಮಿಷಗಳನಳಿದವರಾಗಿದ್ದರು. ಮನದಲ್ಲಿ ಮಹವನ್ನರಿತ ಮಹಾನುಭಾವರಾಗಿದ್ದರು. ಒಳ ಹೊರಗು ಶುದ್ಧತೆಯನ್ನಳವಡಿಸಿಕೊಂಡವ - ರಾಗಿದ್ದರು. ಶರಣರು ಒಬ್ಬರನ್ನೊಬ್ಬರು ಕಂಡಾಗ ತಮ್ಮ ಶ್ರೀಪಾದಕ್ಕೆ ಶರಣು ಶರಣಾರ್ಥಿ ಎನ್ನುತ್ತಿದ್ದರು. ಕೇವಲ ಸ್ವಾರ್ಥಕ್ಕಾಗಿ ಬದುಕದೆ ಸಮಾಜ ಧರ್ಮ ಹಾಗು ಸತ್ಯಕ್ಕಾಗಿ ಬದುಕಿದರು. ತಮ್ಮ ಪ್ರಾಣವನ್ನು ಬಲಿದಾನ ಮಾಡಿ, ಈ ಧರ್ಮವನ್ನು ನಮಗೆ ಉಳಿಸಿಕೊಟ್ಟರು. 770 ಅಮರಗಣಂಗಳು ಎಂದು ಕರೆಯಲ್ಪಡುವ ಶರಣರು ಮುಕ್ತಾತ್ಮರಾದರು ಅವರೆಲ್ಲರೂ ವಚನಗಳ ರೂಪದಲ್ಲಿ ಇಂದು ನಮ್ಮ ಮುಂದೆ ಇದ್ದಾರೆ. ಅವರ ದಿನಾಚರಣೆಯನ್ನು ಆಚರಿಸಲು ವರ್ಷದ 365 ದಿನಗಳು ಸಾಲವು. ಅದಕ್ಕಾಗಿ ಗುರು ಬಸವಣ್ಣನವರ ಅನುಯಾಯಿಯಾಗಿ ಅವರ ಸಮಕಾಲೀನವರಾಗಿದ್ದ ಶರಣರಿಗೂ ಮತ್ತು ಈ ಧರ್ಮದ ಪರಂಪರೆಯಲ್ಲಿ ಸಾಗಿ ಬಂದು, ಇದನ್ನು ಉಳಿಸಿ ಬೆಳೆಸಿದ ಸರ್ವಶರಣರಿಗೂ ಅನಂತ ನಮನಗಳನ್ನು, ಶರಣು ಶರಣಾರ್ಥಿಗಳನ್ನು ಸಲ್ಲಿಸುತ್ತಾ, ಅವರಂತೆ ನಮಗೆ ಭಕ್ತಿ ಜ್ಞಾನಗಳನ್ನು ಕರುಣಿಸಿ ಬಸವಮಾರ್ಗದಲ್ಲಿ ನಮ್ಮನ್ನು ನಡೆಸಲಿ ಎಂದು ಕೇಳಿಕೊಳ್ಳುತ್ತೇನೆ.

★

ಬಸವ ಕಲ್ಯಾಣದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆಗೆ ಆಗ್ರಹ

ಶರಣ ಬಂಧುಗಳಿಗೆ ಶುಭಹಾರೈಕೆಗಳು.

ಕೇಂದ್ರ ಸರ್ಕಾರವು ಮಾನವ ಸಂಪನ್ಮೂಲ ಇಲಾಖೆಯಿಂದ ಕೇಂದ್ರೀಯ ವಿಶ್ವವಿದ್ಯಾಲಯವನ್ನು ಕರ್ನಾಟಕಕ್ಕೆ ಕೊಡ ಮಾಡಿದ್ದು ಅದನ್ನು ಗುಲಬರ್ಗಾ ಜಿಲ್ಲೆಯಲ್ಲಿ ಸ್ಥಾಪಿಸಲು ಕರ್ನಾಟಕ ಸರ್ಕಾರವು ಆಲೋಚಿಸಿದೆ. ಗುಲಬರ್ಗಾದಲ್ಲಿ ಈಗಾಗಲೇ ಒಂದು ವಿಶ್ವವಿದ್ಯಾಲಯವಿದೆ. ಮಾತ್ರವಲ್ಲ ಕಲ್ಯಾಣ ಕರ್ನಾಟಕದ ಪ್ರದೇಶದಲ್ಲಿ ಸ್ವಲ್ಪ ಮಟ್ಟಿಗೆ ಮುಂದುವರಿದ ಜಿಲ್ಲೆಯೆಂದರೆ ಗುಲಬರ್ಗಾ. ಈ ಜಿಲ್ಲೆಯ ಆಳಂದ ತಾಲ್ಲೋಕಿನ ಕಡಗಂಚಿ -ಸುಂಟನೂರು ಬಳಿ ವಿಶ್ವವಿದ್ಯಾಲಯ ಸ್ಥಾಪನೆಗೆ ಜಮೀನನ್ನು ಗುಲಬರ್ಗಾ ಜಿಲ್ಲಾಧಿಕಾರಿಗಳು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಜಂಟಿ ಕಾರ್ಯದರ್ಶಿಗಳಿಗೆ ತೋರಿಸಿದ್ದಾರೆ. ಎಲ್ಲ ದೃಷ್ಟಿಯಿಂದಲೂ ಕೇಂದ್ರೀಯ ವಿಶ್ವ ವಿದ್ಯಾಲಯವು ಐತಿಹಾಸಿಕ ಬಸವ ಕಲ್ಯಾಣದಲ್ಲಿ ಆಗುವುದು ಒಳ್ಳೆಯದು. ಈ ಬಗ್ಗೆ 22 ನೆಯ ಶರಣ ಮೇಳದ ರಾಷ್ಟ್ರೀಯ ಬಸವ ದಳದ ಅಧಿವೇಶನದಲ್ಲಿ ನಿರ್ಣಯವನ್ನು ಸಹ ತೆಗೆದುಕೊಳ್ಳಲಾಗಿದೆ. ಕರ್ನಾಟಕ ಸರ್ಕಾರವು 500 ಎಕರೆ ಜಮೀನನ್ನು ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಒದಗಿಸಿಕೊಟ್ಟರೆ ಮುಂದಿನ ಕಾರ್ಯವು ಕೇಂದ್ರ ಸರ್ಕಾರಕ್ಕೆ ಬಿಟ್ಟದ್ದು. ಅದಕ್ಕಾಗಿ ತಾವು ಕೆಳಕಂಡಂತೆ ಕಾರ್ಯೋನ್ಮುಖವಾಗಬೇಕು.

1. ಸನ್ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯಾಲಯಕ್ಕೆ ಪತ್ರವನ್ನು ಬರೆಯುವ ಪತ್ರ ಲೇಖನ ಚಳುವಳಿ ಮಾಡಬೇಕು.
2. ಮುಖ್ಯ ಮಂತ್ರಿಗಳಿಗೆ ಮನವಿಯನ್ನು ಜಿಲ್ಲಾಧಿಕಾರಿ / ಸಹಾಯಕ ಆಯುಕ್ತರು/ ತಹಸೀಲ್ದಾರ್ ಅವರ ಮೂಲಕ ಸಲ್ಲಿಸಿರಿ. ಬಸವ ತತ್ವಾಭಿಮಾನಿಗಳೆಲ್ಲರೂ ಒಕ್ಕೊರಲಿನಿಂದ ಈ ಉದ್ದೇಶ ಸಾಧನೆಗೆ ಶ್ರಮಿಸಬೇಕು. ಪಥ ಸಂಚಲನ, ಮೆರವಣಿಗೆಯಲ್ಲಿ ಸಾಗಿ ಮನವಿಯನ್ನು ಅರ್ಪಿಸಿರಿ.
3. ಮುಖ್ಯ ಮಂತ್ರಿಗಳು, ಇತರ ಸಚಿವರು ನಿಮ್ಮ ಸಮೀಪದ ಊರಿಗೆ ಬಂದಾಗ ಮನವಿ ಕೊಡಬೇಕು.
4. ನಿಮ್ಮ ಕ್ಷೇತ್ರದ ಶಾಸಕರಿಗೆ ಮನವಿ ಕೊಡುವುದು.
5. ಒಂದು ವೇಳೆ ಸರ್ಕಾರವು ಗಮನ ಹರಿಸದಿದ್ದರೆ ನಿಮ್ಮ ಊರುಗಳಲ್ಲಿ ಸಾಂಕೇತಿಕ ಧರಣಿ ಸತ್ಯಾಗ್ರಹ ಮಾಡಿರಿ.

<u>ವಿಶೇಷ ಸೂಚನೆ :</u> ಮನವಿಯ ಮಾದರಿಯನ್ನು ಹಿಂದಿನ ಪುಟದಲ್ಲಿ ಕೊಡಲಾಗಿದೆ. ಅದನ್ನು ನಿಮ್ಮ / ನಿಮ್ಮೂರಿನ ರಾಷ್ಟ್ರೀಯ ಬಸವ ದಳ / ನಿಮ್ಮೂರಿನ ವಿವಿಧ ಸಂಘ -ಸಂಸ್ಥೆಗಳ ಲೆಟರ್ ಹೆಡ್‌ನಲ್ಲಿ ಟೈಪ್ ಮಾಡಿಸಿರಿ.

ಎಲ್ಲಾ ಜಿಲ್ಲೆಗಳ ಅಭಿವೃದ್ಧಿಯಲ್ಲೂ ನಮಗೆ ಆಸಕ್ತಿ ಇದೆ. ಆದರೆ ಗುರು

ಬಸವಣ್ಣನವರಿಗೆ ಮತ್ತು ಅವರ ಸಮಕಾಲೀನ ಶರಣರಿಗೆ ಕೃತಜ್ಞತೆ ಅರ್ಪಿಸಲು ಮತ್ತು ಬಸವ ಕಲ್ಯಾಣದ ಅಭಿವೃದ್ಧಿಯ ದೃಷ್ಟಿಯಿಂದ ಬಸವ ಕಲ್ಯಾಣದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯವು ಆಗುವುದು ಅವಶ್ಯ ಎಂಬುದನ್ನು ಮನಗಾಣಿರಿ.

ಶುಭಹಾರೈಕೆಗಳೊಡನೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ
ಕೂಡಲ ಸಂಗಮ

(ವಿ.ಸೂ: ನೀವು ಬರೆಯಬೇಕಾದ ಮನವಿ ಪತ್ರದ ಮಾದರಿಯನ್ನು ಕೆಳಗೆ ಕೊಡಲಾಗಿದೆ)

ಮಾದರಿ ಪತ್ರ

ಗೆ,
ಶ್ರೀಯುತ ಬಿ.ಎಸ್.ಯಡಿಯೂರಪ್ಪನವರು
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ, ವಿಧಾನ ಸೌಧ
ಬೆಂಗಳೂರು

ಮೂಲಕ : ಜಿಲ್ಲಾಧಿಕಾರಿ/ಸಹಾಯಕ ಆಯುಕ್ತರು/ ತಹಸೀಲ್ದಾರ್

....

ಮಾನ್ಯರೇ,

ವಿಷಯ :ಕೇಂದ್ರೀಯ ವಿಶ್ವವಿದ್ಯಾಲಯವನ್ನು
ಬಸವ ಕಲ್ಯಾಣದಲ್ಲಿ ಸ್ಥಾಪಿಸುವ ಬಗ್ಗೆ

ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ಕೇಂದ್ರೀಯ ವಿಶ್ವವಿದ್ಯಾಲಯವನ್ನು ಕರ್ನಾಟಕಕ್ಕೆ ಕೊಡಮಾಡಿರುವುದು ಸಂತೋಷದ ಸಂಗತಿ. ಇದರ ಸ್ಥಾಪನೆಗಾಗಿ ಕರ್ನಾಟಕ ಸರ್ಕಾರವು ಗುಲಬರ್ಗಾ ಜಿಲ್ಲೆಯನ್ನು ಆಯ್ದುಕೊಂಡಿರುವುದೇ ಅಲ್ಲದೆ ಕೇಂದ್ರ ಸರ್ಕಾರದ ಸಂಬಂಧಿಸಿದ ಇಲಾಖೆಯಿಂದ ಸ್ಥಳ ಪರಿಶೀಲನೆಗೆ ಜಂಟಿ ಕಾರ್ಯದರ್ಶಿ ಸುನೀಲ್ ಕುಮಾರ್ ಅವರಿಗೆ ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೋಕಿನ ಕಡಗಂಚಿ ಮತ್ತು ಸುಂಟನೂರು ಗ್ರಾಮಗಳ ಬಳಿಯ ಸ್ಥಳವನ್ನು ತೋರಿಸಲಾಯಿತೆಂದು ಪತ್ರಿಕೆಗಳ ಮೂಲಕ ತಿಳಿದಿದೆ. ಈ ಬಗ್ಗೆ ತಮ್ಮಲ್ಲಿ ವಿನಂತಿಸುವುದು ಏನೆಂದರೆ-

1. ಗುಲಬರ್ಗಾ ಜಿಲ್ಲೆಯ ಗುಲಬರ್ಗಾ ನಗರದಲ್ಲಿ ಈಗಾಗಲೇ ವಿಶ್ವವಿದ್ಯಾಲಯವು ಆಗಿದೆ. ಅಲ್ಲದೆ ಎಂಜಿನಿಯರಿಂಗ್, ಮೆಡಿಕಲ್ ಕಾಲೇಜ್, ಸರ್ಕಾರಿ ಮತ್ತು ಖಾಸಗಿ ಬೃಹತ್ ಆಸ್ಪತ್ರೆಗಳು ಮುಂತಾಗಿ ಆಗಿ ಬಹಳ ಅಭಿವೃದ್ಧಿ ಸಾಧ್ಯವಾಗಿದೆ. ಈ ದೃಷ್ಟಿಯಿಂದ ಬೀದರ ಜಿಲ್ಲೆ ಇನ್ನೂ ಅಭಿವೃದ್ಧಿ ಸಾಧಿಸಬೇಕಾಗಿದೆ.

2. ಬೀದರ ಜಿಲ್ಲೆಯ ಬಸವ ಕಲ್ಯಾಣವು ಒಂದು ತಾಲ್ಲೋಕು ಕೇಂದ್ರ. ಮುಂಬಯಿ -ಹೈದರಾಬಾದ್ ನಗರಗಳನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 9 ಕ್ಕೆ ಹೊಂದಿಕೊಂಡಿದೆ.

ಉಷ್ಣತೆಯ ದೃಷ್ಟಿಯಿಂದ ಗುಲಬರ್ಗಾ ಜಿಲ್ಲೆಗಿಂತಲೂ ಕಡಿಮೆ ಉಷ್ಣಾಂಶ ಹೊಂದಿದೆ. ಬಸವ ಕಲ್ಯಾಣದ ಭೂಮಿಯು ವಿಶೇಷವಾಗಿ ಲಾಟರೈಟ್ ಶಿಲಾಪದರವನ್ನು ಹೊಂದಿರುವುದರಿಂದ ಕಟ್ಟಡದ ಪಾಯಗಳು ಆಳಕ್ಕೆ ಹೋಗುವ ಆವಶ್ಯಕತೆ ಬೀಳುವುದಿಲ್ಲ. ಈ ಶಿಲಾಪದರದಿಂದಾಗಿ ಭೂಮಿಯಲ್ಲಿ ನೀರು ಸುಲಭವಾಗಿ ಸಿಗುವುದಲ್ಲದೆ ಅತ್ಯಂತ ಸಿಹಿರುಚಿ ಹೊಂದಿರುವುದು.

3. ಬಸವ ಕಲ್ಯಾಣವು ಐತಿಹಾಸಿಕ ಮಹತ್ವ ಪಡೆದ ಸ್ಥಳ. ಚಾಲುಕ್ಯರ ರಾಜಧಾನಿಯಾಗಿದ್ದುದು ಒಂದು ಸಂಗತಿಯಾದರೆ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿ ಅದು ಜಗತ್ತಿನ ಪ್ರಥಮ ಪಾರ್ಲಿಮೆಂಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಬಹುದಾದ ಅನುಭವ ಮಂಟಪವನ್ನು ಹೊಂದಿದ್ದು ಇಡೀ ಭರತ ಖಂಡದ ಮೂಲೆಮೂಲೆಗಳಿಂದೆಲ್ಲ ಸತ್ಯದ ಸಾಧಕರು, ಶೋಧಕರನ್ನು ಆಕರ್ಷಿಸಿತು. ವಚನ ಸಾಹಿತ್ಯವೆಂಬ ವಿಶ್ವ ಸಾಹಿತ್ಯಕ್ಕೆ ಜನ್ಮನೀಡಿತು. ಇಂಥಾ ಬಸವ ಕಲ್ಯಾಣದ ಮಹತ್ವವನ್ನು ಅರಿತು ಕರ್ನಾಟಕ ಸರ್ಕಾರವು ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಯನ್ನು ರಚಿಸಿದ್ದಲ್ಲದೆ, ಇದರ ಅಭಿವೃದ್ಧಿಗಾಗಿ ಬಹುಮುಖಿ ಯೋಜನೆ ರೂಪಿಸಿ ಕೋಟ್ಯಂತರ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಿದ್ದೀರಿ.

ಇದಕ್ಕೆ ಪೂರಕವಾಗಿ ಕೇಂದ್ರೀಯ ವಿಶ್ವವಿದ್ಯಾಲಯವಾದರೆ ಬಸವ ಕಲ್ಯಾಣದ ಅಭಿವೃದ್ಧಿ ತ್ವರಿತಗತಿಯಲ್ಲಿ ಆಗುವುದಲ್ಲದೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ವಿದ್ವಾಂಸರ ಗಮನವನ್ನು ಸೆಳೆಯಲು ಸಾಧ್ಯವಾಗುತ್ತದೆ. ವಿಶ್ವ ಮಟ್ಟಕ್ಕೆ ಹೋಗಬೇಕಾಗಿದ್ದ ವಚನ ಸಾಹಿತ್ಯವು ಕನ್ನಡದಲ್ಲಿ ರಚನೆಯಾದ್ದರಿಂದ ಕನ್ನಡೇತರರ ಗಮನವನ್ನು ಸೆಳೆಯಲು ಅದಕ್ಕೆ ಸಾಧ್ಯವಾಗಿಲ್ಲ, ಕೇಂದ್ರೀಯ ವಿಶ್ವವಿದ್ಯಾಲಯದ ಸ್ಥಾಪನೆಯಿಂದ ವಿಶ್ವಗುರು ಬಸವಣ್ಣನವರ ಜೀವನ, ಸಾಧನೆ, ಸಂದೇಶಗಳನ್ನು ವ್ಯಾಪಕವಾಗಿ ತಿಳಿಸಲು, ಪ್ರಸಾರ ಮಾಡಲು ಸಾಧ್ಯವಾಗುವುದಲ್ಲದೆ ವಚನ ಸಾಹಿತ್ಯವನ್ನು ವಿವಿಧ ಮುಖಗಳಿಂದ ಅಧ್ಯಯನ ಮಾಡಲು ಅವಕಾಶ ದೊರೆಯುವುದು.

ಕೇಂದ್ರ ಸರ್ಕಾರದ ಕೆಲವು ಸಚಿವರಿಗೆ ಈ ಬಗ್ಗೆ ಮನವಿ ಕೊಟ್ಟಾಗ ಅವರು ಕರ್ನಾಟಕ ರಾಜ್ಯ ಸರ್ಕಾರವು ಸ್ಥಳವನ್ನು ಗುರುತಿಸಿ ಅಗತ್ಯವಿರುವ ಜಮೀನನ್ನು ಒದಗಿಸಿ ಕೊಟ್ಟರೆ ಕೇಂದ್ರ ಸರ್ಕಾರವು ಆ ಸ್ಥಳದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯವನ್ನು ಮಾಡಲು ಸಾಧ್ಯವಿದೆ ಎಂದು ಹೇಳಿದರು. ಬಸವ ಕಲ್ಯಾಣದಲ್ಲಿ ಸಾಕಷ್ಟು ಸರ್ಕಾರಿ ಜಮೀನು, ಅರಣ್ಯ ಜಮೀನು ಮಾತ್ರವಲ್ಲ ಖಾಸಗಿ ಜಮೀನುಗಳು, ವಿಸ್ತಾರವಾದ ಬಯಲು ಪ್ರದೇಶವಿದೆ.

ಆದ್ದರಿಂದ ಈ ದಿಶೆಯಲ್ಲಿ ತಾವು ವಿಶೇಷ ಆಸಕ್ತಿ ವಹಿಸಿ ಬಸವ ಕಲ್ಯಾಣದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯವು ಸ್ಥಾಪನೆಯಾಗುವಂತೆ ಮಾಡಿದರೆ ಅದು ತಮ್ಮ ಸರ್ಕಾರದ ಮಹಾನ್ ಸಾಧನೆಯಾಗುವುದು ಎಂಬುದರಲ್ಲಿ ಸಂದೇಹವಿಲ್ಲ. ಈ ಹಿನ್ನೆಲೆಯಲ್ಲಿ ತಾವು ವಿಶೇಷ ಆಸಕ್ತಿ ವಹಿಸಿ, ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆಗೆ ಅಗತ್ಯವಿರುವ ಜಮೀನನ್ನು ಬಸವ ಕಲ್ಯಾಣದಲ್ಲಿ ಒದಗಿಸಿ ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ ಸಂದೇಶಗಳು ಪ್ರಸಾರಗೊಳ್ಳಲು ನೆರವಾಗುವಿರಾಗಿ ನಂಬುತ್ತೇವೆ.

ಶುಭಹಾರೈಕೆಗಳೊಡನೆ

ತಮ್ಮವರಾದ,

(ರಾ.ಬ.ದಳದ ಅಧ್ಯಕ್ಷರ/ಪ್ರಮುಖರ ಹೆಸರು ಮತ್ತು ಸಹಿ)

ಸಂದೇಶ

ಗಣ ಮೇಳಾಪವು ವ್ಯಕ್ತಿಯು ತನ್ನನ್ನು ತಾನು ತಿದ್ದಿಕೊಳ್ಳಲು, ಧಾರ್ಮಿಕ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಸಮಾಜ/ದೇಶ/ವ್ಯಕ್ತಿಗಳಗೆ ಎರಗುವ ಆಪತ್ತು, ವಿಘ್ನಗಳು ಇವುಗಳ ಬಗ್ಗೆ ಚಿಂತಿಸಲು ಸಹಕಾರಿಯಾಗುವುದು.


- ಪೂಜ್ಯ ಅಪ್ಪಾಜಿ

ಸ್ಫುರಣ ಕಿರಣಗಳು

-ಸಚ್ಚಿದಾನಂದ ಚಟನಳ್ಳಿ

1. ಗುರುವು ಒಂದು ಟ್ರಾನ್ಸ್‌ಫಾರ್ಮರ್

ಪುಸ್ತಕಗಳ ಮುದ್ರಣಕ್ಕಾಗಿ ಪದ್ಮಶ್ರೀ ಪ್ರಿಂಟಿಗ್ ಪ್ರೆಸ್‌ಗೆ ಹಲವಾರು ಬಾರಿ ಹೋಗಿ ಬರುವ ಅವಕಾಶ ದೊರೆತಿತ್ತು. ಆ ಪ್ರಿಂಟಿಂಗ್ ಪ್ರೆಸ್‌ನ ಪಕ್ಕದಲ್ಲಿಯೇ ಒಂದು ದೊಡ್ಡ ಟ್ರಾನ್ಸಫಾರ್ಮರ್ ಇದೆ. ಅದನ್ನು ಸುಮಾರು ವರ್ಷಗಳಿಂದ ನೋಡುತ್ತಲೇ ಇದ್ದರೂ ಏನೂ ಅನಿಸಿರಲಿಲ್ಲ. ಆದರೆ ಈ ಸಲ ಮಾತ್ರ ಅದನ್ನು ನೋಡಿದಾಗ ಒಂದು ವಿಚಾರ ಸ್ಫುರಿಸಿತು. ಅದೆಂದರೆ ಮಾತಾಜಿಯವರು ಕೂಡಾ ಈ ಟ್ರಾನ್ಸಫಾರ್ಮರ್ ನಂತೆಯೇ ಇದ್ದಾರೆ ಎನಿಸಿತು.



ಟ್ರಾನ್ಸಫಾರ್ಮರ್

ಟ್ರಾನ್ಸಫಾರ್ಮರ್ ಮ್ಯೂಚ್ವಲ ಇಂಡಕ್ಷನ್(Mutual Induction) ತತ್ವದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತದೆ. ಟ್ರಾನ್ಸಫಾರ್ಮರ್‌ನಲ್ಲಿ ಮೂರು ಅತಿ ಮುಖ್ಯ ಭಾಗಗಳಿರುತ್ತವೆ. 1) ಕೋರ್(Core) 2)ಪ್ರೈಮರಿ ವೈಂಡಿಂಗ್(Primray winding) ಮತ್ತು 3) ಸೆಕಂಡರಿ ವೈಂಡಿಂಗ್ (Secondary winding). ಇವುಗಳ ವ್ಯವಸ್ಥೆ ಚಿತ್ರದಲ್ಲಿ ತೋರಿಸಿದಂತೆ ಇರುತ್ತದೆ.) ಪ್ರೈಮರಿ ವೈಂಡಿಂಗನ್ನು ನೇರವಾಗಿ ಒಳಬರುವ ಮುಖ್ಯ ವಿದ್ಯುತ್ ಪ್ರವಾಹಕ್ಕೆ ಜೋಡಿಸಲಾಗಿರುತ್ತದೆ. ಆಗ ಸೆಕಂಡರಿ ವೈಂಡಿಂಗ್ ನಲ್ಲಿ ಮ್ಯೂಚ್ವಲ ಇಂಡಕ್ಷನ್ ಪರಿಣಾಮದಿಂದ ವಿದ್ಯುತ್ ಉತ್ಪತ್ತಿಯಾಗುತ್ತದೆ. ಪ್ರೈಮರಿ ವೈಂಡಿಂಗ್ ಮತ್ತು ಸೆಕಂಡರಿ ವೈಂಡಿಂಗ್‌ಗೆ ಯಾವುದೇ ನೇರವಾದ ಸಂಪರ್ಕ(Connection) ಇರುವುದಿಲ್ಲ. ಸೆಕಂಡರಿ ವೈಂಡಿಂಗ್‌ನಲ್ಲಿ ಉತ್ಪತ್ತಿಯಾಗುವ ವಿದ್ಯುತ್ ಅದರಲ್ಲಿರುವ ಸುರುಳಿಗಳ ಮೇಲೆ ಅವಲಂಬಿಸಿರುತ್ತದೆ. ಪ್ರೈಮರಿ ವೈಂಡಿಂಗ್‌ಗಿಂತ ಹೆಚ್ಚು ಸುರುಳಿಗಳು ಸೆಕಂಡರಿ ವೈಂಡಿಂಗ್‌ನಲ್ಲಿದ್ದರೆ ಪ್ರೈಮರಿ ವೈಂಡಿಂಗ್‌ಗಿಂತ ಹೆಚ್ಚು ವಿದ್ಯುತ್ ಉತ್ಪತ್ತಿಯಾಗುತ್ತದೆ. ಇಂಥ ಟ್ರಾನ್ಸಫಾರ್ಮರನ್ನು ಸ್ಟೆಪ್ ಅಪ್ (Step Up) ಟ್ರಾನ್ಸಫಾರ್ಮರ್ ಎಂದು ಕರೆಯುತ್ತಾರೆ. ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಈ ರೀತಿಯಲ್ಲಿಯೇ ಮಾತಾಜಿಯವರಲ್ಲಿ ಅಧಿಕವಾದ ಜ್ಞಾನ ವಿದ್ಯುತ್ ಉತ್ಪತ್ತಿಯಾಗುವಂತೆ ಮಾಡಿದ್ದಾರೆ. ಪ್ರೈಮರಿ ವೈಂಡಿಂಗ್‌ಗಿಂತ ಕಡಿಮೆ ಸುರುಳಿಗಳು ಸೆಕಂಡರಿ ವೈಂಡಿಂಗ್‌ನಲ್ಲಿದ್ದರೆ ಪ್ರೈಮರಿ ವೈಂಡಿಂಗ್‌ಗಿಂತ ಕಡಿಮೆ ವಿದ್ಯುತ್ ಉತ್ಪತ್ತಿಯಾಗುತ್ತದೆ. ಇಂಥ ಟ್ರಾನ್ಸ ಫಾರ್ಮರನ್ನು ಸ್ಟೆಪ್ ಡೌನ್ (Step Down) ಟ್ರಾನ್ಸಫಾರ್ಮರ್ ಎಂದು ಕರೆಯುತ್ತಾರೆ.

ಮಾತಾಜಿಯವರು ತಾವು ಪ್ರೈಮರಿ ವೈಂಡಿಂಗ್‌ನಂತೆ ಗುರು ಬಸವಣ್ಣನವರೆನ್ನುವ ಕೋರ್ ಮೇಲೇ ತಮ್ಮನ್ನ ತಾವು ಸುತ್ತಿಕೊಂಡಿದ್ದಾರೆ. ಅವರು ಲಿಂಗದೇವನ ಕರುಣೆ ಎನ್ನುವ ಮುಖ್ಯ ವಿದ್ಯುತ್ ಪ್ರವಾಹಕ್ಕೆ ಸಂಪರ್ಕ ಹೊಂದಿದ್ದಾರೆ. ಗುರು ಬಸವಣ್ಣನವರೆನ್ನುವ ಕೋರ್ ಮೇಲೆ ತಮ್ಮನ್ನು ತಾವು ಸೆಕಂಡರಿ ವೈಂಡಿಂಗ್ ನಂತೆ ಸುತ್ತಿಕೊಂಡ ಅನೇಕ ಭಕ್ತರಿಗೂ ಲಿಂಗದೇವನ ಕರುಣೆ ಹರಿದು ಬರುತ್ತದೆ. ಮಾತಾಜಿಯವರು ಅತ್ಯಂತ ಪಾಂಡಿತ್ಯ ಮತ್ತು ಅನುಭಾವ ಪೂರ್ಣವಾದ ಪ್ರವಚನ ಮಾಡುತ್ತಾರೆ. ತಮ್ಮ ಶಿಷ್ಯಂದಿರಿಗೂ ಪ್ರವಚನ ಮಾಡುವ ಶಕ್ತಿ ಕರುಣಿಸಿದ್ದಾರೆ. ತಾವು ವಿಶಿಷ್ಟವಾದ ಸಾಹಿತ್ಯ ರಚನೆ ಮಾಡುತ್ತಾರೆ ತಮ್ಮ ಶಿಷ್ಯರಿಗೂ ಸಾಹಿತ್ಯ ರಚಿಸುವ ಶಕ್ತಿ ಕೊಟ್ಟಿದ್ದಾರೆ. ಹೀಗೆ ಇನ್ನೂ ಅನೇಕ ರೀತಿಯಲ್ಲಿ ತಮ್ಮಲ್ಲಿರುವ ಶಕ್ತಿ ಪ್ರತಿಭೆಗಳನ್ನು ತಮ್ಮ ಶಿಷ್ಯಂದಿರಿಗೂ ಧಾರೆ ಎರೆಯುವ ಮಾತಾಜಿಯವರು, ಲಿಂಗದೇವನ ಕರುಣೆಯನ್ನು ತಮ್ಮ ಶಿಷ್ಯ ವೃಂದಕ್ಕೆ ಟ್ರಾನ್ಸಫರ್ ಮಾಡುವ **ಡಿವೈನ್ ಟ್ರಾನ್ಸಫಾರ್ಮರ್** (Divine Transformer). ಮಾತಾಜಿಯವರ ಹತ್ತಿರ ಹೋದರೂ ಸಾಕು ಅವರಲ್ಲಿರುವ ದೈವೀ ತರಂಗಗಳು ನಮ್ಮ ಮನಸ್ಸನ್ನು ಸೋಂಕುತ್ತವೆ. ಅವರ ಪಾದ ಮುಟ್ಟಿದ್ದರೆ ಸಾಕು ತನುವಿಗೆ ದಿವ್ಯ ವಿದ್ಯತ್ ಸ್ಪರ್ಶವಾದಂತಾಗುತ್ತದೆ. "ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು ಶ್ರೀಗಂಧದ ಸನ್ನಿಧಿಯೊಲು ಪರಿಮಳವಾಗವೆ?" ಎನ್ನುವ ಗುರು ಬಸವಣ್ಣನವರ ವಾಣಿಯಂತೆ ಮಾತಾಜಿಯವರೆನ್ನುವ ಶ್ರೀಗಂಧದ ಸನ್ನಿಧಿಯಲ್ಲಿರುವವರೆಲ್ಲರೂ ಅವರಲ್ಲಿರುವ ಜ್ಞಾನದ ಪರಿಮಳವನ್ನು ಪಡೆದಿದ್ದಾರೆ. ಆದರಿಷ್ಟೆ ಅವರಲ್ಲಿರುವ ಜ್ಞಾನವು ನಮ್ಮಲ್ಲಿ ಬರುವಾಗ ನಮ್ಮಲ್ಲಿ ಎಷ್ಟು ಹಂಬಲ ಇದೆ ಎನ್ನುವುದರ ಮೇಲೆ ಅವಲಂಬಿಸಿರುತ್ತದೆ.

2. ಗುರುಬಸವಣ್ಣನವರು ಜೀವಂತವಾಗಿದ್ದಾರೆ !


ಅಂದು ಬಸವ ಜಯಂತಿ ಕಾರ್ಯಕ್ರಮ ನಡೆಯುತಿತ್ತು. ಪ್ರತಿ ವರ್ಷವೂ ಬಸವ ಜಯಂತಿಯಂದು, ಗುರು ಬಸವಣ್ಣನವರ ಭಾವಚಿತ್ರ ಹಾಗೂ ಅವರ ವಚನಗಳ ಗ್ರಂಥವನ್ನು ತೊಟ್ಟಿಲಿನಲ್ಲಿ ಇಟ್ಟು ತೂಗುವುದು ಪರಂಪರಾಗತವಾಗಿ ಬಂದಿದೆ. ಪ್ರತಿವರ್ಷ ವಚನಗಳ ಗ್ರಂಥಗಳನ್ನು ಇಟ್ಟು ತೂಗುವುದನ್ನು ನೋಡಿದರೂ ಅದು ಸಹಜ ಅನಿಸುತಿತ್ತು. ಆದರೆ ಕಳೆದ ಬಾರಿ ಬೆಂಗಳೂರು ಬಸವ ಮಂಟಪದಲ್ಲಿ ಬಸವ ಜಯಂತಿ ಆಚರಿಸುವಾಗ ವಚನಗಳ ಗ್ರಂಥಗಳನ್ನು ತೊಟ್ಟಿಲಿನಲ್ಲಿ ನಾನೇ ಜೋಡಿಸಿದೆ. ಹಾಗೆ ಇಡುವಾಗ ಬಾಲ್ಯದಲ್ಲಿ ಚಂದಮಾಮ ಪತ್ರಿಕೆಯಲ್ಲಿ ಓದಿದ ಕಥೆಯೊಂದು ನೆನಪಾಯಿತು. ಆ ಕಥೆ ಹೀಗಿದೆ:

ಒಂದಾನೊಂದು ಕಾಲದಲ್ಲಿ ಒಬ್ಬ ಮಂತ್ರ ತಂತ್ರಗಳನ್ನು ಸಾಧಿಸಿಕೊಂಡ ಒಬ್ಬ ರಾಜನಿದ್ದ. ಸಪ್ತ ಸಮುದ್ರಗಳಾಚೆಯ ಸಮುದ್ರದ ಮಧ್ಯದಲ್ಲಿ ಒಂದು ದ್ವೀಪವಿದೆ. ಆ ದ್ವೀಪದಲ್ಲಿ ಒಂದು ಸರ್ಪಗಾವಲಿನ ಗವಿಯಿದೆ, ಆ ಗವಿಯ ಮಧ್ಯದಲ್ಲೊಂದು ವಜ್ರದ ಪಂಜರವಿದೆ. ಆ ವಜ್ರದ ಪಂಜರದಲ್ಲೊಂದು ಬಂಗಾರದ ಗಿಳಿಯಿದೆ. ತನ್ನ ಯೋಗ ಶಕ್ತಿಯ ಮೂಲಕ ಆ ಗಿಳಿಯಲ್ಲಿ ಈ ರಾಜನು ತನ್ನ ಪ್ರಾಣವನ್ನು ಇಟ್ಟಿದ್ದನು. ಆ ಗಿಳಿಯ ಕಾಲು ಮುರಿದರೆ ರಾಜನ ಕಾಲು ಮುರಿಯುತ್ತದೆ. ಅದರ ಕಣ್ಣು ತೆಗೆದರೆ ರಾಜನ ಕಣ್ಣು ಹೋಗುತ್ತದೆ. ಅದರ ಕತ್ತು ಕತ್ತರಿಸಿದರೆ ಮಾತ್ರ ರಾಜನು ಸಾಯುತ್ತಾನೆ ಎನ್ನುವಂಥ ನಿಯಮವಿತ್ತು. ಹೀಗಾಗಿ ರಾಜನಿಗೆ ತಾನು ಸಾಯುವ ಭಯವಿರದೆ, ಅಮರತ್ವವನ್ನು ಪಡೆದುಕೊಂಡು ಅನಂತ ಕಾಲ ಬದುಕಿದ್ದನು ಎಂಬುವುದು ಆ ಕಥೆಯ ಅರ್ಥ.



||ಓಂ ಶ್ರೀ ಗುರು ಬಸವ ಲಿಂಗಾಯ ನಮಃ||

866666



ತಮಿಳುನಾಡಿನ ರಾಜಧಾನಿ ಚೆನ್ನೈನಲ್ಲಿ
ಟಿ.ನಗರದ ಹಿಂದಿ ಪ್ರಚಾರಸಭಾದ
ಮಹಾತ್ಮ ಗಾಂಧಿ ಕಾನ್ವೊಕೇಷನ್ ಹಾಲ್‌ದಲ್ಲಿ
2009ರ ಮೇ 02,03 ಮತ್ತು 04ರಂದು ನಡೆಯಲಿರುವ
ಒಂಬತ್ತನೆಯ ಲಿಂಗಾಯತ ಧರ್ಮ ಸಮ್ಮೇಳನ
ಪ್ರತಿನಿಧಿಯಾಗಿ ಭಾಗವಹಿಸಲು ಅರ್ಜಿ ಪತ್ರ

ಪೂಜ್ಯ ಸಂಘಟಕರೆ,

ತಮಿಳು ನಾಡಿನ ರಾಜಧಾನಿ ಚೆನ್ನೈನಲ್ಲಿ 2009ರ ಮೇ 2, 3 ಮತ್ತು 4 ರಂದು ನಡೆಯಲಿರುವ ಒಂಬತ್ತನೆಯ ಲಿಂಗಾಯತ ಧರ್ಮ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಲು ಉತ್ಸುಕನಾಗಿ/ಳಾಗಿದ್ದೇನೆ. ವಿವರಗಳು ಕೆಳಕಂಡಂತಿವೆ.

ಹೆಸರು - ಅಡ್ಡ ಹೆಸರು :

ವಿಳಾಸ :

ದೂರವಾಣಿ ಸಂಖ್ಯೆ :

ನಮ್ಮ ಕುಟುಂಬ / ಸಮೂಹದಿಂದ ಬರುವ ಜನರ ಸಂಖ್ಯೆ :

ಪ್ರತಿ ನಿಧಿ ಶುಲ್ಕ / ಕಾಣಿಕೆ : ಬ್ಯಾಂಕ್ ಡ್ರಾಫ್ಟ್ ನಂಬರ್ ಒಟ್ಟು ಮೊತ್ತ :

ಸಾಮೂಹಿಕ ವಸತಿ ಸಾಕೋ? ಸಾಕು ☐
ವಿಶೇಷ ಕೋಣೆ ವ್ಯವಸ್ಥೆ ಬೇಕೋ? ಬೇಕು ☐
ಅದಕ್ಕಾಗಿ ಪ್ರತ್ಯೇಕ ಹಣ ಕೊಡುವಿರಾ? ಅಹುದು ☐

ರೇಲ್ವೆ ರಿಸರ್ವೇಷನ್ (ಬೆಂಗಳೂರು) ನಾವೇ ಮಾಡಬೇಕೋ? ಅಹುದು ☐ ಇಲ್ಲ ☐
ಅದರ ಹಣ ಕಳಿಸಿರುವಿರಾ? ಬ್ಯಾಂಕ್ ಡ್ರಾಫ್ಟ್ ನಂಬರ್ : ....

1. ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಹಚ್ಚಿರಿ
2. ಒಂದು ಕುಟುಂಬದಿಂದ ಅಥವಾ ಶರಣ ಬಳಗದಿಂದ ಹೆಚ್ಚಿನ ಜನರು ಬರುತ್ತಿದ್ದರೆ

ಅವರ ಭಾವಚಿತ್ರಗಳನ್ನು ಹೆಸರುಗಳನ್ನು ಹಿಂಬದಿಯಲ್ಲಿ ಬರೆದು ಪಟ್ಟಿಮಾಡಿ ಒಂದೇ ಕವರಿನಲ್ಲಿ ಕಳಿಸಬಹುದು.

ಫೋಟೋ

ಊರು : .... ದಿನಾಂಕ : .... ಸಹಿ : ....

ವಿಶೇಷ ಸೂಚನೆ : ಈ ಅರ್ಜಿ ಫಾರ್ಮಿನ ಜೆರಾಕ್ಸ್ ಪ್ರತಿ ತೆಗೆದು ತುಂಬಿ ಕಳಿಸಿರಿ. ವಿವರಗಳಿಗಾಗಿ ಕರಪತ್ರ ನಿಮ್ಮೊಡನೆ ಇಟ್ಟುಕೊಳ್ಳಿರಿ. ಒಂದು ಕುಟುಂಬದಿಂದ ಅಥವಾ ಸಮೂಹದಿಂದ ಹೆಚ್ಚಿನ ಜನರು ಬರುತ್ತಿದ್ದರೆ ಅರ್ಜಿ ಪತ್ರದ ಜೆರಾಕ್ಸ್ ಪ್ರತಿ ತೆಗೆದು ಎಲ್ಲರಿಗೂ ಒಂದೊಂದು ಅರ್ಜಿ ಪತ್ರ ಬರೆಯಬಹುದು. ಎಲ್ಲರ ಪ್ರತಿನಿಧಿ ಶುಲ್ಕ / ಕಾಣಿಕೆ ಸೇರಿಸಿ ಒಂದೇ ಬ್ಯಾಂಕ್ ಡ್ರಾಫ್ಟ್ ತೆಗೆಯಬಹುದು. ಅಥವಾ ಒಂದೇ ಅರ್ಜಿ ಬರೆದು, ಅದರಲ್ಲಿ ಭಾಗವಹಿಸುವ ಎಲ್ಲರ ಹೆಸರುಗಳನ್ನು ಬರೆದು, ಫೋಟೋಗಳನ್ನು ಒಂದೇ ಕವರಿನಲ್ಲಿಟ್ಟು, ಒಟ್ಟು ಹಣಕ್ಕೆ ಬ್ಯಾಂಕ್ ಡ್ರಾಫ್ಟ್ ಕಳಿಸಬಹುದು. ಬೆಂಗಳೂರು ವಿಳಾಸಕ್ಕೆ ಪತ್ರ ಕಳಿಸಬೇಕು. ಒಂದು ವೇಳೆಗೆ ಚೆನ್ನೈಗೆ ಬಂದು ಪ್ರತಿನಿಧಿ ಶುಲ್ಕ ಕಟ್ಟುವುದಾದರೆ ಅದಕ್ಕೆ ಅನುಮತಿಯುಂಟು. Basava Mahamane Charitable Trust ಹೆಸರಿಗೆ ಡಿ.ಡಿ.ತೆಗೆಸಬೇಕು.

ವಿಶೇಶ ಸೂಚನೆ : ಪ್ರತಿನಿಧಿ ಶುಲ್ಕ ಕಟ್ಟದವರಿಗೆ ಊಟ-ವಸತಿಯ ವ್ಯವಸ್ಥೆ ಮಾಡುವ ಜವಾಬ್ದಾರಿ ಸಮಿತಿಯ ಮೇಲೆ ಇರುವುದಿಲ್ಲ.

ಸಂಪರ್ಕಿಸುವ ವಿಳಾಸಗಳು

Basava Mahamane Charitable Trust (R)
C/o.Basava Kirana
No.6, 2nd Floor, "G "Block
Bhaid Mehatha Complex, 183,
Little Mount, (Mount Road)
Saidapet, Chennai -600015
Ph: 9632485434, 9241220022

Basava Mahamane Charitable Trust(R)
BASAVA MANTAPA
2035, 20th Main, Chord Road
2nd Block, Rajajinagar
BANGALORE-560 010
Karnataka State, India
Ph : 080-22923736, 23131476

ವಚನ ದುಂದುಭಿ – 21

-ಸಚ್ಚಿದಾನಂದ ಚಟನಳ್ಳಿ

1. "ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ" ಎನ್ನುವ ಗುರು ಬಸವಣ್ಣನವರ ವಚನ ಯಾವ ಸ್ಥಲದಲ್ಲಿದೆ?
2. ಗುರು ಬಸವಣ್ಣನವರು "ಮನಸ್ಸೇ ಒಂದು ಸರ್ಪ, ತನುವೇ ಒಂದು ಹುತ್ತ" ಎಂದು ಹೇಳುವಲ್ಲಿ ಯಾವುದನ್ನು ಗಾರುಡ ವಿದ್ಯೆ ಎಂದಿದ್ದಾರೆ?
3. ಕಾಯದ ಸೂತಕಗಳು ಯಾವುವು?
4. ಕ್ರಾಂತಿಗಂಗೋತ್ರಿ ಎಂದು ಅಕ್ಕನಾಗಮ್ಮನವರನ್ನು ಏಕೆ ಕರೆಯುತ್ತಾರೆ?
5. ಪ್ರಸಾದ ನೀಡುವಾಗ ಪಂಕ್ತಿ ಭೇದ ಮಾಡಬಾರದು ಎಂದು ಗುರು ಬಸವಣ್ಣನವರು ಹೇಳಿದ ವಚನ ಯಾವುದು?
6. ಲಿಂಗದೇವನ ಶರಣರ ಕಂಡು ಉದಾಸೀನವ ಮಾಡಿದರೆ ಏನಾಗುತ್ತದೆ?
7. "ಅಂಗವೆಂದಡೆ ಲಿಂಗದೊಳಡಗಿತ್ತು, ಲಿಂಗವೆಂದಡೆ ಅಂಗದೊಳಡಗಿತ್ತು" ಲಿಂಗಮ್ಮನವರ ಈ ವಚನ ಪೂರ್ತಿ ಮಾಡಿ.
8. ಪ್ರಸಾದ ದಷ್ಟ ಎಂದರೇನು?
9. ಗುರು ಕಾರುಣ್ಯ ಸ್ಥಲವು ಯಾವ ಸ್ಥಲದ ನಂತರ ಬರುತ್ತದೆ?
10. ಉಪಾಧಿಕ ಪ್ರಸಾದ ಎಂದರೇನು?
11. "ತಾನೆಂದೆನಲೊಲ್ಲದೆ ಗುರುವೆಂದು ಹಿಡಿದವನ, ಗುರುವೆಂದಲ್ಲಿಯೆ ನೀನೆಂದು ನಡೆದವನ" ಎನ್ನುವ ವಚನದಲ್ಲಿ ಅಲ್ಲಮ ಪ್ರಭುದೇವರು ಯಾರನ್ನು ಸ್ತುತಿಸಿದ್ದಾರೆ?
12. "ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ ಎಣ್ಣೆಗೆ ಪರಿಮಳ ವೇಧಿಸದು, ದೇಹದಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ ಪ್ರಾಣಲಿಂಗ ಸಂಬಂಧ ಅಳವಡದು" ಎಂದು ಯಾರು ಯಾರಿಗೆ ಹೇಳಿದರು?
13. "ಕಾಯವುಳ್ಳನ್ನಕ್ಕ ಶರಣರ ಸಂಗದಿಂದ ಅರಿಯಬೇಕು, ಜೀವವುಳ್ಳನ್ನಕ್ಕ ಶರಣರ ಸಂಗದಿಂದ ಅರಿಯಬೇಕು" ಎಂದು ಯಾರು ಯಾರಿಗೆ ಯಾವ ಸಂದರ್ಭದಲ್ಲಿ ಹೇಳಿದ್ದಾರೆ?
14. ಜೋದರ ಮಾಯಣ್ಣನವರ ವಚನಾಂಕಿತವೇನು?
15. 'ಆತುರವೈರಿ ಮಾರೇಶ್ವರಾ' ಇದು ಯಾರ ವಚನಾಂಕಿತ?

ವಚನ ದುಂದುಭಿ-20ರ ಸರಿ ಉತ್ತರಗಳು

1. ಕಾಮನನ್ನುಸಂಹರಿಸಿದವನು(ಶಿವ) 2. ಕೈಗಳಿಂದ ಮಾಡುವ ಕಾರ್ಯ ನನ್ನದಲ್ಲ, ದೇವರು ಈ ಕೈಗಳಿಂದ ಮಾಡಿಸುತ್ತಾನೆ ಎಂದು ಹಸ್ತವನ್ನೇ ದೇವರಿಗೆ ಅರ್ಪಿಸುವಿಕೆ. 3. ಗುರು ಬಸವಣ್ಣನವರು. 4. ಅಕ್ಕಮಹಾದೇವಿ 5. ಲಿಂಗಸ್ವರೂಪಿಯಾದವರು 6. ಈಡಾ, ಪಿಂಗಳಾ, ಸುಷುಮ್ನ 7. ಮಡಿವಾಳ ಮಾಚಿದೇವರು 8. ನೀಲಗಂಗಮ್ಮ 9.ಜಲ, ಪತ್ರೆ, ಪುಷ್ಪಗಳಿಲ್ಲದೆ ಮಾಡುವ ಮಾನಸಿಕ ಪೂಜೆ. 10. ಕುಲ, ಛಲ, ಧನ, ರೂಪ, ಯೌವನ, ವಿದ್ಯೆ, ರಾಜ್ಯ, ತಪ, 11. ಅನುಭವ ಮಂಟಪದಿಂದ ಕೂಡಲ ಸಂಗಮಕ್ಕೆ ಬೀಳ್ಕೊಳ್ಳುವಾಗ 12. ಅಂಗ ಲಿಂಗ ಸಾಮರಸ್ಯಕ್ಕೆ 13. ಮಾಚಿದೇವರು ಗುರು ಬಸವಣ್ಣನವರಿಗೆ 14. ಡೋಹರ ಕಕ್ಕಯ್ಯ 15. ನಾಸ್ತಿನಾಥ

ವಚನ ದುಂದುಭಿ-20ರ ಸರಿ ಉತ್ತರ ಕೊಟ್ಟವರು

1. ಹೆಚ್. ಶಾಂತಮ್ಮ, ಭದ್ರಾವತಿ
2. ರಂಜನಾ ಕೊಟ್ರೇಶ,ಭದ್ರಾವತಿ
3. ನಿರ್ಮಲಾ ಜಯದೇವ್,ಬೆಂ.
4. ಲೀಲಾವತಿ ಕರಡಿ, ಬೆಂಗಳೂರು
5. ಅನಿತಾ ಶಂಕರ, ಭದ್ರಾವತಿ
6. ರತ್ನಮ್ಮ ಜಯಣ್ಣ, ಮೈಸೂರು

ಪರಿಪೂರ್ಣ ಯಶಸ್ಸಿನ 22ನೆಯ ಶರಣ ಮೇಳ

ಕನ್ನಡ ನಾಡಿನ ಪುಣ್ಯದ ಫಲವೋ, ಕಲ್ಯಾಣದ ಶರಣರ ಆಶೀರ್ವಾದದ ಬಲವೋ ಎಂಬಂತೆ, ಜನವರಿ 11 ರಿಂದ 15ರ ವರೆಗೆ ಗುರು ಬಸವಣ್ಣನವರ ತಪೋಭೂಮಿ ಹಾಗು ಲಿಂಗೈಕ್ಯ ಕ್ಷೇತ್ರವಾದ ಕೂಡಲ ಸಂಗಮದಲ್ಲಿ ನಡೆದ ಶರಣ ಮೇಳವು ಅದ್ಭುತವಾದ ಯಶಸ್ಸನ್ನು ಕಂಡಿತು. "ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ ಜನ ನೆರೆವರಯ್ಯಾ" ಎನ್ನುವ ಮಾಚಿದೇವರ ಕಾಲಜ್ಞಾನದಂತೆ ಕೃಷ್ಣಾ ನದಿಯ ದಕ್ಷಿಣ (ದಂಡೆಯಲ್ಲಿ) ಭಾಗದಲ್ಲಿ ನಡೆಯುವ ಶರಣ ಮೇಳಕ್ಕೆ ಒಬ್ಬರನ್ನೊಬ್ಬರು ಕರೆದು ನೆರೆದಿರುವ ಶರಣ ಸಮೂಹ ಬಸವ ಸಾಗರದಂತೆ ಶೋಭಿಸುತ್ತಿತ್ತು. 11-01-2009ರಂದು ಬೆಳಗ್ಗೆ ವೇದಿಕೆ ದೈವೀಕರಣದೊಂದಿಗೆ ನಡೆದ ಕಾರ್ಯಕ್ರಮವು ಅಂದು ಬೆಳಗ್ಗೆ 11-00 ಗಂಟೆಗೆ ಮೊದಲನೆಯ ಚಿಂತನ ಗೋಷ್ಠಿಯೊಂದಿಗೆ ಆರಂಭವಾಯಿತು. ಧಾರ್ಮಿಕ ಚಿಂತನ ಗೋಷ್ಠಿಯಲ್ಲಿ ಅನೇಕ ವಿಷಯಗಳನ್ನು ಚಿಂತನೆಗೆ ಇಡಲಾಗಿತ್ತು ಹಲವಾರು ಜನ ಶರಣರು ತಮ್ಮ ತಮ್ಮ ವಿಚಾರ ಗಳನ್ನು ಮಂಡಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯ ಶ್ರೀ ಮಾತಾಜಿಯವರು "ಶರಣ ಮೇಳ ಒಂದು ಜಾತ್ರೆಯಲ್ಲ. ಇದು ಅನುಭಾವಿಗಳ ಕೂಟ. ಇದು ಅಧ್ಯಾತ್ಮ ಮತ್ತು ಅನುಭಾವಗಳ ಮಿಶ್ರ ಮಾರುಕಟ್ಟೆ ಇದ್ದ ಹಾಗೆ. ಯಾರು ಬೇಕಾದರೂ ಜ್ಞಾನವೆಂಬ ವಸ್ತುವನ್ನು ಕೊಡಬಹುದು ಯಾರು ಬೇಕಾದರೂ ಕೊಳ್ಳಬಹುದು" ಎಂದರು. "ಮಡಿವಾಳ ಮಾಚಿದೇವರು 12ನೇ ಶತಮಾನದ ಅನುಭವ ಮಂಟಪದಲ್ಲಿ ಹೇಗೆ ಅನುಭಾವ ಗೋಷ್ಠಿಗಳು ನಡೆಯುತ್ತಿದ್ದವು ಎಂದು ತಿಳಿಸಿದ್ದಾರೆ ಅತ್ತ ಬಲ್ಲರೆ ನೀವು ಹೇಳಿರೆ ಇತ್ತ ಬಲ್ಲರೆ ನೀವು ಕೇಳಿರೆ ಎಂದು ಹೇಳಿ, ನಿಮಗೆ ಗೊತ್ತಿರುವುದನ್ನು ಹೇಳಿ ಗೊತ್ತಿರಲಾರದ್ದನ್ನು ಕೇಳಿ ಎಂದು ತಮ್ಮ ವಚನದಲ್ಲಿ ತಿಳಿಸಿರುವಂತೆ ಇದು ಹೇಳುವವರ ಹಾಗು ಕೇಳುವವರ ಮೇಳ ಅದೇ ಶರಣ ಮೇಳ" ಎಂದು ನುಡಿದರು. ಶರಣ ಮೇಳವು ಒಂದು ಕಾರ್ಯಗಾರ (Work Shop) ಇಲ್ಲಿ ಐದೂ ದಿನಗಳ ಕಾಲ ನಿಮ್ಮೆಲ್ಲರ ಮನ-ಬುದ್ಧಿ-ಭಾವಗಳಿಗೆ ತರಬೇತಿಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

11 ರಂದು ಮಧ್ಯಾಹ್ನ 3-30 ರಿಂದ 6-30 ರ ವರೆಗೆ ಬೀದರ ರಾ. ಬಸವದಳದ ಶರಣರು ಆಶು ಭಾಷಣ ಸ್ಪರ್ಧೆಯನ್ನು ನಡೆಸಿಕೊಟ್ಟರು. ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ವಚನಸಾಹಿತ್ಯಾಧಾರದ ಮೇಲೆ ಮಾತನಾಡಲು ಶರಣಮೇಳಕ್ಕೆ ಬಂದ ಸ್ಪರ್ಧಾರ್ಥಿಗಳಿಗೆ ಅವಕಾಶ ಮಾಡಿಕೊಟ್ಟರು. ಸುಮಾರು ಮೂವತ್ತಕ್ಕಿಂತಲೂ ಹೆಚ್ಚಿನ ಸ್ಪರ್ಧಾರ್ಥಿಗಳಿಗೆ ತಮ್ಮ ಪ್ರತಿಭೆಯನ್ನು ಹೊರ ಹಾಕುವ ಅವಕಾಶ ಈ ಕಾರ್ಯಕ್ರಮ ಒದಗಿಸಿಕೊಟ್ಟಿತ್ತಲ್ಲದೇ ಕಾರ್ಯಕ್ರಮದ ವೀಕ್ಷಕರಿಗೂ ಹೆಚ್ಚಿನ ಜ್ಞಾನವನ್ನು ತಂದು ಕೊಟ್ಟಿತು.

ಸಾಯಂಕಾಲದ ಕಾರ್ಯಕ್ರಮವು ಚಿಂತನ ಗೋಷ್ಠಿ ಹಾಗು ಉಪನ್ಯಾಸಗಳ ಸಮ್ಮಿಶ್ರಣವಾಗಿತ್ತು. ಪ್ರಾಸ್ತಾವಿಕವಾಗಿ ಮಾತನಾಡಿದ ಪೂಜ್ಯ ಶ್ರೀ ಚೆನ್ನಬಸವಾನಂದ ಸ್ವಾಮೀಜಿಯವರು "800 ವರ್ಷಗಳ ಕಾಲ ವಚನ ಸಾಹಿತ್ಯವು ಇತಿಹಾಸದ ಗರ್ಭದಲ್ಲಿ ಮರೆಯಾಗಿತ್ತು. ಅದನ್ನು ಫ.ಗು. ಹಳಕಟ್ಟಿಯವರು ಗ್ರಂಥಗಳ ರೂಪದಲ್ಲಿ ಹೊರತಂದರು. ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿ ಮತು ಪೂಜ್ಯ ಮಾತಾಜಿಯವರು ವಚನ ಸಾಹಿತ್ಯವನ್ನು ಹಾಗು ಗುರು ಬಸವಣ್ಣನವರ ಸಂದೇಶಗಳನ್ನು ಪ್ರವಚನಗಳ ಮುಖಾಂತರ ಜನ ಮನಗಳಲ್ಲಿ ಬಿತ್ತಿ ಬಸವ ತತ್ವ ಜೀವಂತವಾಗಿ ಉಳಿಯುವಂತೆ ಮಾಡಿದ್ದಾರೆ" ಎಂದು ತಿಳಿಸಿದರು. ಅನುಭಾವಗೋಷ್ಠಿ, ಅನುಭವ ಮಂಟಪ ಎನ್ನುವ ಪದಗಳಿದ್ದರೆ ಅಲ್ಲಿ ಲಿಂಗಾಯುತರಿದ್ದಾರೆ ಎಂದು ತಿಳಿದುಕೊಳ್ಳಬೇಕು. ಎಲ್ಲಿ ಶಿವಾನುಭಾವ ಗೋಷ್ಠಿ, ಶಿವಾನುಭಾವ ಮಂಟಪ ಎಂದಿರುತ್ತದೆಯೋ ಅಲ್ಲಿ ವೀರಶೈವರಿದ್ದಾರೆ ಎಂದು ನಿರ್ಣಯಿಸಬಹುದು. ವೀರಶೈವರು ಈ ರೀತಿ ಮಾಡುವ ಮೂಲಕ ಲಿಂಗಾಯತ ಧರ್ಮದ ಪಾವಿತ್ರ್ಯಕ್ಕೆ ಚ್ಯುತಿ ತಂದಿದ್ದಾರೆ. ವೀರಶೈವ ಎಂದು ಹೇಳಿಕೊಳ್ಳುವವರು ಸಂಪ್ರದಾಯ

ಬದ್ಧರು. ಪೂಜ್ಯ ಲಿಂಗಾನಂದ ಸ್ವಾಮೀಜಿ ಹಾಗು ಪೂಜ್ಯ ಮಾತಾಜಿಯವರು ಶರಣ ಸಂಪ್ರದಾಯಬದ್ಧವಾದ ಸಮಾಜವನ್ನು ನಿರ್ಮಿಸಿ, ಮೂಢ ಸಂಪ್ರದಾಯಗಳಿಂದ ನಮ್ಮೆಲ್ಲರನ್ನು ಬಿಡುಗಡೆ ಮಾಡಿದ್ದಾರೆ. ಇಂದು ಶರಣ ಮೇಳವು ಇಷ್ಟೊಂದು ಅರ್ಥಪೂರ್ಣವಾಗಿ ನಡೆಯುಬೇಕಾದರೆ ಇದರ ಹಿಂದೆ ಅಪ್ಪಾಜಿಯವರ ಶ್ರಮ ಅಪಾರವಾಗಿದೆ. ಬಸವಣ್ಣನವರೆಂದರೆ ನಾಲ್ಕು ಕಾಲಿನ ಎತ್ತು ಅಲ್ಲ ಎಂದರೆ ಜನ ಕಲ್ಲಿನಿಂದ ಹೊಡೆಯುತ್ತಿದ್ದರು. ಆದರೆ ಇಂದು ಬಸವಣ್ಣನವರನ್ನು ಎತ್ತು ಎಂದರೆ ಜನ ಕಲ್ಲಿನಿಂದ ಹೊಡೆಯುತ್ತಾರೆ. ಇಂಥ ಯುಗ ಪರಿವರ್ತಕರು ಅಪ್ಪಾಜಿಯವರು. ಯಾರು ಅಂಗದ ಮೇಲೆ ಲಿಂಗವನ್ನು ಧರಿಸಿಲ್ಲವೋ ಅವರು ಲಿಂಗಾಯತದ ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ ಎಂದು ತಿಳಿದುಕೊಳ್ಳಬೇಕು. ಮತ್ತು ಇಂಥವರು ಆದಷ್ಟು ಬೇಗ ವ್ಯಾಪ್ತಿ ಪ್ರದೇಶದ ಒಳಗೆ ಬರಬೇಕು ಎಂದು ಕರೆ ನೀಡಿದರು.

ಶರಣೆ ಗಂಗಾಂಬಿಕೆ ಭದ್ರಾವತಿಯವರು ಮಾತನಾಡುತ್ತ "ಪರಮಾತ್ಮನು ನಮಗೆ ಒಂದೇ ಬಾಯಿಯನ್ನು ಕೊಟ್ಟಿದ್ದಾನೆ. ಆದರೆ ಎರಡು ಕೈಗಳನ್ನು ಕೊಟ್ಟಿದ್ದಾನೆ. ಇದರ ಅರ್ಥ ಮಾತಿಗಿಂತ ಹೆಚ್ಚಾಗಿ ಸೇವೆಯನ್ನು ಮಾಡಬೇಕು. ಮಾತನಾಡುವ ಬಾಯಿಗಿಂತ ಸೇವೆ ಮಾಡುವ ಕೈಗಳೇ ಶ್ರೇಷ್ಠ" ಎಂದು ನುಡಿದರು. ಮಾತಾಜಿಯವರಲ್ಲಿ ಅಗಾಧವಾದ ಸಂಕಲ್ಪ ಶಕ್ತಿ ಇದೆ. ಅದರ ಬಲದಿಂದಲೇ ಇಂಥ ಅಧ್ಭುತವಾದ ಶರಣಮೇಳವನ್ನು ಮಾತಾಜಿಯವರು ನಡೆಸುತ್ತಿದ್ದಾರೆ ಅವರೊಂದು ವ್ಯಕ್ತಿಯಲ್ಲ ಶಕ್ತಿ ಎಂದರು. ಮಾತಾಜಿಯವರ ಶಿಷ್ಯರು ಇಂದು ಬೇರೆ ಮಠಗಳ ಜಂಗಮರಿಗೆ ಉಪದೇಶ ಮಾಡುವಷ್ಟು ಜ್ಞಾನಿಗಳಾಗಿದ್ದಾರೆ. "ಶಿಷ್ಯ ತಾನು ಗುರುವಿನೆಂಜಲು" ಎನ್ನುವ ಶರಣರ ವಾಣಿಯಂತೆ ಗುರುವಿನಲ್ಲಿರುವ ಅನೇಕ ಗುಣಗಳೂ ಶಿಷ್ಯರಿಗೂ ಬಂದಿವೆ ಎಂದು ತಿಳಿಸಿದರು. ಇಲ್ಲಿ ಲಕ್ಷಾಂತರ ಜನ ಶರಣರು ಶರಣಮೇಳಕ್ಕೆ ಬಂದಿದ್ದಾರೆ. ಕಾರಾಣಾಂತರಗಳಿಂದ ಬರದೇ ಇರುವವರು ಎಲ್ಲೇ ಇದ್ದರೂ ಅವರ ಮನಸ್ಸು ಶರಣ ಮೇಳ ಚೆನ್ನಾಗಿ ನಡೆಯಲಿ ಎಂದೇ ಸಂಕಲ್ಪ ಮಾಡುತ್ತಿದೆ. ನಾವು ಕೂಡ ಕಾರಣಾಂತರಗಳಿಂದ ಶರಣ ಮೇಳಕ್ಕೆ ಬರದಿದ್ದರೆ ನಮ್ಮ ಮನಸ್ಸು ತುಂಬಾ ಚಟಪಟಿಸುತ್ತಿರುತ್ತದೆ." ಎಂದರು.

ಶರಣೆ ಶಾರದಾ ಬಸವರಾಜ ರವರು ಮಾತನಾಡುತ್ತ "ಗುರು ಬಸವಣ್ಣನವರ ಧರ್ಮ ಮೊಟ್ಟ ಮೊದಲ ಬಾರಿಗೆ ಜಗತ್ತಿಗೆ ಇಷ್ಟಲಿಂಗ ಕೊಟ್ಟ ಧರ್ಮವಾಗಿದೆ. ವಚನ ಸಾಹಿತ್ಯ ಭಂಡಾರವನ್ನು ನೀಡಿ, ಅನೇಕ ಮೂಢಾಚರಣೆಗಳನ್ನು ಬಿಡಿಸಿ, ಸತ್ಯ ಸದಾಚಾರಗಳನ್ನು ಕಲಿಸಿದ ಧರ್ಮವಾಗಿದೆ. ಜಾತಿ, ವರ್ಗ ಭೇದಗಳನ್ನು ಕಳೆದು ಸಮಾನತೆಯ ತತ್ವವನ್ನು ಸಾರಿ ಕಲ್ಯಾಣ ರಾಜ್ಯ ನಿರ್ಮಾಣ ಮಾಡಿದ ಪರಮೋನ್ನತ ಧರ್ಮವಿದಾಗಿದೆ." ಎಂದು ತಿಳಿಸಿದರು. ಲಿಂ. ಪೂಜ್ಯ ಲಿಂಗಾನಂದ ಸ್ವಾಮೀಜಿ ಮತ್ತು ಮಾತಾಜಿಯವರು ಇಂದು ಶರಣ ಮೇಳದ ಮೂಲಕ ಲಿಂಗಾಯತ ಧರ್ಮದ ಪುನರುತ್ಥಾನ ಮಾಡುತ್ತಿದ್ದಾರೆ. ಎಂದು ನುಡಿದರು.

ದಿ.12 ರ ಬೆಳಗ್ಗೆ 11-00 ಗಂಟೆಗೆ ರಾಷ್ಟ್ರೀಯ ಬಸವ ದಳಗಳ 22ನೇ ಅಧಿವೇಶನ ಕಾರ್ಯಕ್ರಮ ಆರಂಭವಾಯಿತು. ಈ ಕಾರ್ಯಕ್ರಮವನ್ನು ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಜಯಬಸವ ಮೃತ್ಯುಂಜಯ ಸ್ವಾಮಿಗಳು ಉದ್ಘಾಟಿಸಿದರು. ಅವರು ಉದ್ಘಾಟನೆ ಭಾಷಣ ಮಾಡುತ್ತ ದಯಾ ಮೂಲದ ಧರ್ಮವನ್ನು ಕೊಟ್ಟಿರುವ ಗುರು ಬಸವಣ್ಣನವರ ಧರ್ಮ ಅನುಯಾಯಿಗಳಾಗಿರುವ ನಾವೆಲ್ಲ ನಮ್ಮ ಧರ್ಮದಲ್ಲಿದ್ದುಕೊಂಡು ಪರಧರ್ಮವನ್ನು ಪ್ರೀತಿಸೋಣ. ಬಸವ ತತ್ವ ನಿಷ್ಠ ಸಂಘಟನೆಗಳು ಧೃವೀಕರಣ ಗೊಳ್ಳುವುದು ಅಗತ್ಯವಾಗಿದೆ ಎಂದು ನುಡಿದರು. ಗುಲ್ಬರ್ಗಾ ಜಿಲ್ಲೆಯ ಉಸ್ತುವಾರಿ ಸಚಿವರಾದ ಶರಣ ರೇವು ನಾಯಕರವರು ಭಾಗವಹಿಸಿ ಮಾತನಾಡುತ್ತ ಮನದ ಮಾಲಿನ್ಯ ತೊಳೆದು ಸುಜ್ಞಾನ ಮೂಡಿಸುವಲ್ಲಿ ಶರಣ ಮೇಳವು ಮಹತ್ವದ ಪಾತ್ರ ವಹಿಸುತ್ತಿದೆ ಎಂದು

ಹೇಳಿ ಮಾತಾಜಿಯವರ ಕಾರ್ಯವನ್ನು ಕೊಂಡಾಡಿದರು. ನಿಮ್ಮೆಲ್ಲರ ಆಶಿರ್ವಾದದಿಂದ ನಾನು ಈ ಸ್ಥಾನಕ್ಕೆ ಬರಲು ಸಾಧ್ಯವಾಗಿದೆ ಎಂದರು. ಅತ್ಯಂತ ಸರಳ ಸ್ವಭಾವದವರೂ ಸಜ್ಜನರೂ ಆದ ಅವರು ಶರಣರು ಆಜ್ಞೆ ಮಾಡುವ ಯಾವುದೇ ಕಾರ್ಯ ಮಾಡಲು ನಾನು ಸಿದ್ಧನಿದ್ದೇನೆ ಎಂದು ತಿಳಿಸಿದರು.

ಪೂಜ್ಯಶ್ರೀ ಚೆನ್ನಬಸವಾನಂದ ಸ್ವಾಮೀಜಿಯವರು ರಾ.ಬಸವದಳದ ಅಧಿವೇಶನ ವನ್ನು ಉದ್ದೇಶಿಸಿ ಮಾತನಾಡುತ್ತ ಸಾಮಾಜಿಕ, ಧಾರ್ಮಿಕ ಹಾಗು ಆಧ್ಯಾತ್ಮಿಕ ಸಂಘಟನೆ ಮಾಡಿ ಲಿಂಗಾಯತ ಧರ್ಮವನ್ನು ಭಾರತದಾದ್ಯಂತ ಬೆಳೆಸುವುದೇ ರಾ.ಬಸವ ದಳದ ಉದ್ದೇಶ ಎಂದರು.

ದಿವ್ಯ ಸಾನಿಧ್ಯ ವಹಿಸಿದ್ದ ಮಾತಾಜಿಯವರು ಆಶೀರ್ವಚನ ನೀಡಿ, ಕೂಡಲ ಸಂಗಮದಲ್ಲಿ ಪಂಚಮಸಾಲಿ ಜಗದ್ಗುರು ಪೀಠವನ್ನು ಸ್ಥಾಪಿಸುವ ಮೂಲಕ ಆ ಸಮಾಜದ ಮುಖಂಡರು ಶ್ರೇಷ್ಠ ಕಾರ್ಯ ಮಾಡಿದ್ದಾರೆ. ಪಂಚಾಚಾರ್ಯರ ಅನುಯಾಯಿಯಾಗಲು ಹೊರಟಿದ್ದ ಒಂದು ಸಮಾಜವನ್ನು ಮರಳಿ ಬಸವ ಪಥದತ್ತ ತರುವಲ್ಲಿ ಈ ಪೀಠ ಮಹತ್ವದ ಹೆಜ್ಜೆಯಾಗಿದೆ ಎಂದು ಹೇಳಿದರು. ಹುಬ್ಬಳ್ಳಿ ಹೊಸಮಠದ ಪೂಜ್ಯ ಶ್ರೀ ಚಂದ್ರಶೇಖರ ಸ್ವಾಮೀಜಿಯವರು ಈ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ದಿ.12ರಂದು ಮಧ್ಯಾಹ್ನ 3-30ರಿಂದ 6-30ರ ವರೆಗೆ ವಚನ ದುಂದುಭಿ ಎನ್ನುವ ಧಾರ್ಮಿಕ ಪ್ರಶ್ನೋತ್ತರ ಸ್ಪರ್ಧೆ ಕಾರ್ಯಕ್ರಮವನ್ನು ನಡೆಸಿಕೊಡಲಾಯಿತು. ಸುಮಾರು ಇಪ್ಪತ್ತು ತಂಡಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ವಿಶೇಷ ಶೋಭೆಯನ್ನು ತಂದುಕೊಟ್ಟವು. ಈ ಬಾರಿಯ ವಚನ ದುಂದುಭಿ ಸಂಚಾರಿ ಕಪ್ಪನ್ನು ಬೈಲಹೊಂಗಲ ರಾ.ಬಸವ ದಳವು ಪ್ರಥಮ ಬಹುಮಾನ ಪಡೆಯುವ ಮೂಲಕ ತನ್ನ ಮಡಿಲಿಗೆ ಹಾಕಿಕೊಂಡಿತು. ಕಗ್ಗೋಡು ರಾ.ಬಸವ ದಳ ದ್ವಿತೀಯ ಬಹುಮಾನ ಪಡೆದರೆ ಬೆಂಗಳೂರು ರಾ.ಬಸವ ದಳ ತೃತೀಯ ಬಹುಮಾನಕ್ಕೆ ತೃಪ್ತಿಗೊಂಡಿತು.

ದಿ.13-01-09ರಂದು ಬೆಳಗ್ಗೆ 11-00 ಗಂಟೆಗೆ ಶರಣ ಆರ್.ಬಿ.ಹೆಬ್ಬಳ್ಳಿಯವರು 22ನೇ ಶರಣ ಮೇಳವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ನಂತರ ಮಾತನಾಡುತ್ತ, ಪ್ರತಿಯೊಬ್ಬ ವ್ಯಕ್ತಿ ಗುರು ಬಸವಣ್ಣನವರ ಕಾಯಕವೇ ಕೈಲಾಸ ಎಂಬ ತತ್ವ ಪಾಲಿಸಿ ಶಾಂತಿಯುತ ಜೀವನ ನಡೆಸಬೇಕು ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು 'ಬಸವ ವಚನಾಮೃತ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಹುನಗುಂದ ಶಾಸಕರಾದ ದೊಡ್ಡನಗೌಡ ಪಾಟೀಲರು ಮಾತನಾಡಿ ದಾರಿ ತಪ್ಪಿರುವ ಹಾಗು ತಪ್ಪುತ್ತಿರುವ ಇಂದಿನ ಸಮಾಜವನ್ನು ಸರಿದಾರಿಗೆ ತರುವ ಕಾರ್ಯವನ್ನು ಮಾತಾಜಿಯವರು ಶರಣ ಮೇಳದ ಮೂಲಕ ಮಾಡುತ್ತಿದ್ದಾರೆ. ಅವರಿಗೆ ನಾವೆಲ್ಲರೂ ಸಹಕಾರ ನೀಡಬೇಕೆಂದು ಕರೆ ನೀಡಿದರು. 'ಪರಿಪೂರ್ಣಮಾನವ ಬಸವಣ್ಣ' ವಚನ ಕೃತಿ ಬಿಡುಗಡೆ ಮಾಡಿದ ಶರಣೆ ರತ್ನ ಕುಸನೂರು ಅವರನ್ನು ಸತ್ಕರಿಸಲಾಯಿತು. ವಚನ ವೈಭವದ ನಿರ್ಮಾಪಕರೂ ಹಾಗು ನಿರ್ದೇಶಕರೂ ಆದ ಶರಣ ಪ್ರಕಾಶ ಹಲಗೇರಿಯವರು 'ಶರಣರ ನೆನೆ ಮನವೆ' ಎನ್ನುವ ಗ್ರಂಥವನ್ನು ಬಿಡುಗಡೆ ಮಾಡಿದರು.

ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಮಾತಾಜಿಯವರು ಜಾತಿ, ಮತ, ಪಂಥಗಳ ಭೇದ ಭಾವದಿಂದಾಗಿ ಸಂಘರ್ಷಗಳು ಹುಟ್ಟಿ ಕಲುಷಿತಗೊಂಡು ನರಳುತ್ತಿರುವ ಇಂದಿನ ಸಮಾಜಕ್ಕೆ ಶಾಂತಿ, ಸಮಾಧಾನದ ಅಗತ್ಯವಿದ್ದು ಅದು ಗುರು ಬಸವಣ್ಣನವರ ತತ್ವಗಳ ಪಾಲನೆಯಿಂದ ಸಾಧ್ಯ ಎಂದರು. ಸಮಾಜದಲ್ಲಿ ನೆಲೆಸಿರುವ ಅಶಾಂತಿಯನ್ನು ತೊಡೆದುಹಾಕಿ ಎಲ್ಲರೂ ಒಂದೇ ಎಂಬ ಭಾವನೆ ಮೂಡಿಸಿ ಪರಸ್ಪರ ಅರಿತು ಬಾಳುವಂತೆ ಸಂದೇಶ ನೀಡುವುದೇ ಶರಣಮೇಳದ ಉದ್ದೇಶ ಎಂದರು.

ಸಾಯಂಕಾಲ ನಡೆದ 18ನೇ ಬಸವ ಧರ್ಮ ಪೀಠಾರೋಹಣೋತ್ಸವು ಅತ್ಯಂತ ಭಕ್ತಿ ಹಾಗು ಭಾವ ಪುಳಕಿತಗಳೊಂದಿಗೆ ನೆರವೇರಿತು. ಪೂಜ್ಯ ಶ್ರೀ ಗಂಗಾದೇವಿ

ಮಾತಾಜಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತ "ತಾ ಮಾಡುವ ಕೃಷಿ ಮಾಡುನ್ನಬರ ಮಾಡಿ" ಎನ್ನುವ ಅಕ್ಕಮ್ಮನವರ ವಚನವನ್ನು ವಿಶ್ಲೇಷಿಸಿದರು. ಮೊದಲಿಗೆ ಗುರು ಬಸವಣ್ಣನವರ ಮೂರ್ತಿಯನ್ನು ಬಸವ ಧರ್ಮ ಪೀಠದ ಮೇಲಿಟ್ಟು ಪೂಜೆ ಹಾಗು ಪುಷ್ಪವೃಷ್ಟಿ ಮಾಡಲಾಯಿತು. ನಂತರ ಬಸವ ಧರ್ಮ ಪೀಠ ಸಂಸ್ಥಾಪಕರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂ. ಲಿಂಗಾನಂದ ಮಹಾಸ್ವಾಮೀಜಿಯವರ ಮೂರ್ತಿಯನ್ನು ಬಸವ ಧರ್ಮ ಪೀಠದ ಮೇಲಿಟ್ಟು ಪುಷ್ಪ ವೃಷ್ಟಿ ಮಾಡಲಾಯಿತು. ಇದಾದ ಮೇಲೆ ಸಾವಿರಾರು ಶರಣರ ಜಯಘೋಷಗಳ ಮಧ್ಯೆ ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮ ಪೀಠಾರೋಹಣಗೈದರು. ಪೂಜ್ಯ ಗಂಗಾ ಮಾತಾಜಿಯವರು ಮಾತಾಜಿಯವರಿಗೆ ರುದ್ರಾಕ್ಷಿ ಮುಕುಟವನ್ನು ಇಟ್ಟರು. "ಜೈ ಮಾತೆ ಜಗದ್ಗುರುವೆ ಮಾತೆ ಮಹಾದೇವಿ ಜೈ ಜೈ." ಎನ್ನುವ ಗೀತೆಯೊಡನೆ ಮಾತಾಜಿಯವರಿಗೆ ಶರಣ ಸಮೂಹವು ಪುಷ್ಪ ವೃಷ್ಟಿ ಮಾಡಿತು. ನಂತರ ಸಾಲಾಗಿ ನಿಂತ ಶರಣ ಶರಣೆಯರು 22ನೆಯ ಶರಣ ಮೇಳದ ಸಂಕೇತವಾಗಿ 22 ದೀಪಗಳಿಂದ ಆರತಿಯನ್ನು ಬೆಳಗಿದರು.

ಪೀಠಾರೋಹಣದ ಸಂದೇಶವನ್ನು ನೀಡುತ್ತ ಮಾತಾಜಿಯವರು. ಇಂದು ದೇಶವು ಭಯೋತ್ಪಾದನೆಯ ನೆರಳಿನಲ್ಲಿ ಬದುಕುತ್ತಿದೆ. ಧರ್ಮದ ಹೆಸರಿನಲ್ಲಿ ಸಂಘರ್ಷಗಳು ನಡೆಯುತ್ತಿವೆ. ಇವೆಲ್ಲ ಅನಿಷ್ಠಗಳಿಂದ ದೇಶವನ್ನು ಮುಕ್ತವಾಗಿಸಲು ಗುರು ಬಸವಣ್ಣನವರ ತತ್ವಗಳ ಪಾಲನೆ ಅಗತ್ಯ. ರಾಷ್ಟ್ರ ಪ್ರೇಮ, ಧರ್ಮ ಶ್ರದ್ಧೆ ಬೆಳೆಸಿ ಪ್ರತಿಯೊಬ್ಬರಲ್ಲಿಯೂ ನೈತಿಕ ಮೌಲ್ಯಗಳನ್ನು ಬೆಳೆಸಿ ವಿಶ್ವ ಭ್ರಾತೃತ್ವದ ಸಂದೇಶ ಸಾರುವುದೇ ಶರಣ ಮೇಳದ ಗುರಿಯಾಗಿದೆ ಎಂದು ಹೇಳಿದರು. ಗುರು ಬಸವಣ್ಣನವರು ಎಲ್ಲರೂ ಶರಣರಾಗಬೇಕು ಎಂಬ ಸಂದೇಶ ಕೊಟ್ಟಿದ್ದು ಅವರ ಈ ಸಂದೇಶದ ಅನುಷ್ಠಾನಕ್ಕಾಗಿಯೇ ಶರಣ ಮೇಳ ನಡೆಸಲಾಗುತ್ತಿದೆ. ಮನುಷ್ಯನ ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಎಲ್ಲಾ ಮೌಲ್ಯಗಳನ್ನು ಒದಗಿಸುವ ವೇದಿಕೆ ಈ ಶರಣ ಮೇಳವಾಗಿದೆ ಎಂದು ತಿಳಿಸಿದರು.

ದಿನಾಂಕ 14-01-09 ರಂದು ಸಮುದಾಯ ಪ್ರಾರ್ಥನೆಯಲ್ಲಿ ಸಾವಿರಾರು ಶರಣರು ಪಾಲ್ಗೊಂಡಿದ್ದರು. ಮುಂಬಯಿ ದುರಂತದಲ್ಲಿ ಉಗ್ರರೊಡನೆ ಹೋರಾಡಿ ಹುತಾತ್ಮರಾದವರ ಮತ್ತು ಉಗ್ರರ ಗುಂಡಿಗೆ ಬಲಿಯಾದವರ ಆತ್ಮಕ್ಕೆ ಶಾಂತಿ ಸಿಗಲಿ ಎನ್ನುವ ಸಂಕಲ್ಪದೊಡನೆ ಸಮುದಾಯ ಪ್ರಾರ್ಥನೆ ಆರಂಭವಾಯಿತು. ಸಮುದಾಯ ಪ್ರಾರ್ಥನೆಯು ಶರಣ ಮೇಳದ ಅತ್ಯಂತ ಪ್ರಮುಖವಾದ ಧಾರ್ಮಿಕ ವಿಧಿ. ಮನೆಯವರೆಲ್ಲರೂ ಕುಳಿತು ಮಾಡುವ ಪ್ರಾರ್ಥನೆ – ಕೌಟುಂಬಿಕ ಪ್ರಾರ್ಥನೆ. ಊರಿನವರೆಲ್ಲರೂ ಸೇರಿ ಮಾಡುವ ಪ್ರಾರ್ಥನೆ - ಸಾಮೂಹಿಕ ಪ್ರಾರ್ಥನೆ ಅದೇ ರೀತಿ ವಿಶ್ವದ ಎಲ್ಲಾ ಬಸವಾಭಿಮಾನಿಗಳು ಒಂದು ಕಡೆ ಸೇರಿ ವರ್ಷಕ್ಕೊಮ್ಮೆ ಮಾಡುವ ಪ್ರಾರ್ಥನೆಯೇ ಸಮುದಾಯ ಪ್ರಾರ್ಥನೆ(Mass Prayer) ಪೂಜ್ಯ ಮಾತಾಜಿಯವರು ಸಮುದಾಯ ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಬಿಳಿ ಬಟ್ಟೆ, ಕಾವಿ ಬಣ್ಣದ ಮೇಲುವಸ್ತ್ರವನ್ನು ಧರಿಸಿ ಸಾಲಾಗಿ ಒಕ್ಕೊರಲಿನಿಂದ ಪ್ರಾರ್ಥನೆ ಮಾಡುತ್ತಿದ್ದ ಶರಣ ಸಮೂಹವನ್ನು ನೋಡಿದರೆ ಮನಸ್ಸು ಹರಿಹರನು ವರ್ಣಿಸಿದ ಗುರು ಬಸವಣ್ಣನವರು ಕಲ್ಯಾಣದಲ್ಲಿ ನಡೆಸುತ್ತಿದ್ದ ಗಣ ಪರ್ವದ ಕಲ್ಪನೆಯಲ್ಲಿ ತೊಡಗಿತ್ತು. ಸಮುದಾಯ ಪ್ರಾರ್ಥನೆಯ ನಂತರದ ಮತ್ತೊಂದು ಧಾರ್ಮಿಕ ವಿಧಿಯಾದ ವಚನ ಪಠಣ ಕಾರ್ಯಕ್ರಮವನ್ನು ಮಾತಾಜಿಯವರನ್ನೊಳಗೊಂಡು ಬಸವ ಧರ್ಮ ಪೀಠದ ಇತರ ಜಂಗಮ ಮೂರ್ತಿಗಳು ನಡೆಸಿಕೊಟ್ಟರು. ವಚನ ಪಠಣದ ನಂತರ ಧಾರ್ಮಿಕ ಸಹೋದರತೆಯನ್ನು ಸಾರುವ ಕುಸುರೆಳ್ಳನ್ನು ಶರಣ ಸಮೂಹಕ್ಕೆ ವಿತರಿಸಲಾಯಿತು.

ಈ ಶರಣ ಮೇಳದ ವಿಶೇಷವೆಂದರೆ ಸುಮಾರು 75 ರಾಷ್ಟ್ರಗಳು ಶರಣ ಮೇಳವನ್ನು ನೋಡಿವೆ. ಶರಣ ಮಂಜುನಾಥ ಬಂಡಿಯವರ ಪ್ರಯತ್ನದಿಂದಾಗಿ ಸುವರ್ಣಾ ನ್ಯೂಸ್ ಚಾನಲ್‌ನವರು ಮಾತಾಜಿಯವರ ಪೀಠಾರೋಹಣ ಹಾಗು ಸಮುದಾಯ ಪ್ರಾರ್ಥನೆ ಮತ್ತು ಇನ್ನುಳಿದ ಕಾರ್ಯಕ್ರಮಗಳನ್ನು ತಮ್ಮ ದೂರ ದರ್ಶನ ವಾಹಿನಿಯಲ್ಲಿ ನೇರ ಪ್ರಸಾರ ಮಾಡಿದ್ದಾರೆ.

ಸಂಜೆ 6-00 ಗಂಟೆಗೆ ಗುರು ಬಸವಣ್ಣನವರ ಲಿಂಗೈಕ್ಯ ಮಂಟಪದಲ್ಲಿ ಪೂಜೆಯೊಡನೆ ಆರಂಭವಾದ ಪಥ ಸಂಚಲನ ಕಾರ್ಯಕ್ರಮದಲ್ಲಿ ಲಕ್ಷಾಂತರ ಜನ ಶರಣ ಶರಣೆಯರು ಭಾಗವಹಿಸಿದ್ದರು. "ವಿಶ್ವಗುರು ಬಸವಣ್ಣನವರಿಗೆ ಜಯವಾಗಲಿ" "22ನೇ ಶರಣ ಮೇಳಕ್ಕೆ ಜಯವಾಗಲಿ" "ನಮ್ಮ ಗುರು ನಿಮ್ಮ ಗುರು –ವಿಶ್ವಗುರು ಬಸವಣ್ಣ" ಎನ್ನುವ ಘೋಷಣೆಗಳು ಮುಗಿಲನ್ನು ಮುಟ್ಟಿದವು. ಮೆರವಣಿಗೆಯು ಒಂದುವರೆ ಕಿಲೋಮೀಟರಿಗೂ ಮೇಲ್ಪಟ್ಟು ಉದ್ದವಿತ್ತು. ವಯಸ್ಸು ಹಾಗು ಲಿಂಗ ಭೇದಗಳನ್ನು ಮರೆತು ಶರಣ ಶರಣೆಯರು ಮೆರವಣಿಗೆಯುದ್ದಕ್ಕೂ ಕುಣಿತ ಹಾಗು ಜಯ ಘೋಷಗಳೊಂದಿಗೆ ಸಾಗಿರುವ ದೃಶ್ಯ ನಯನ ಮನೋಹರವಾಗಿತ್ತು. ಮೆರವಣಿಗೆಯ ನಂತರ ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಮಾಡಲಾಯಿತು. ಶರಣ ಮೇಳದ ವೇದಿಕೆಯಲ್ಲಿ ಪೂಜ್ಯ ಚೆನ್ನಬಸವಾನಂದ ಸ್ವಾಮೀಜಿ ಹಾಗು ಇತರ ಜಂಗಮ ಮೂರ್ತಿಗಳು ಸಾಮೂಹಿಕ ಲಿಂಗಾರ್ಚನೆಯಲ್ಲಿ ತೊಡಗಿದ್ದರು.

15 ರಂದು ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಹಾಗು ಹೊಸದಾಗಿ ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳ ಸಾಲಿಗೆ ಸೇರಿದ ಬೆಳಗಾವಿಯ ಪೂಜ್ಯ ಶ್ರೀ ಪ್ರಭುಲಿಂಗ ಸ್ವಾಮೀಜಿಯವರೂ ಪ್ರವಚನಗಳನ್ನು ಮಾಡಿದರು. ನಂತರ ಮಹಾ ಮಂಗಳದೊಂದಿಗೆ ಕಾರ್ಯಕ್ರಮವು ಸಮಾರೋಪ ಗೊಂಡಿತು. ಎಲ್ಲಾ ಶರಣರಿಗೂ ಐದು ದಿನಗಳ ಕಾಲ ಹೋಗಿರುವುದೇ ಗೊತ್ತಾಗಲಿಲ್ಲ. ಕೂಡಲ ಸಂಗಮ ಬಿಟ್ಟು ಹಿಂದಕ್ಕೆ ಹೋಗಲಿಕ್ಕೆ ಮನಸ್ಸಿಲ್ಲದಿದ್ದರೂ ಕರ್ತವ್ಯ ಪ್ರಜ್ಞೆಯನ್ನು ಜಾಗೃತ ಮಾಡಿಕೊಂಡು ಒಲ್ಲದ ಮನಸ್ಸಿನಿಂದ ಎಲ್ಲಾ ಶರಣ ದುಂಬಿಗಳು ಶರಣ ಮೇಳದಲ್ಲಿ ಅನುಭಾವದ ಜೇನನ್ನು ಸವಿದು ತಮ್ಮ ತಮ್ಮ ಗೂಡುಗಳಿಗೆ ಹಿಂದಿರುಗಿದರು. ವರದಿ: ಸಚ್ಚಿದಾನಂದ ಚಟನಳ್ಳಿ

ವಾಳ್ವಾದಲ್ಲಿ ಬಸವ ಮೂರ್ತಿ ಪ್ರತಿಷ್ಠಾಪನೆ


ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ವಾಳ್ವಾದಲ್ಲಿ ಫೆಬ್ರವರಿ 2 ಮತ್ತು 3ರಂದು ಶರಣ ಸಮ್ಮೇಳನವು ಜರುಗಿತು. ದಿ.2ರಂದು ಗುರು ಬಸವಣ್ಣನವರ ಅಮೃತ ಶಿಲಾ ಮೂರ್ತಿಯ ಮತ್ತು ಪೂಜ್ಯ ಮಾತಾಜಿಯವರ ಭವ್ಯ ಮೆರವಣಿಗೆ ಜರುಗಿತು. ದಿ. 3ರಂದು ಬೆಳಿಗ್ಗೆ 8ರಿಂದ ಅಮೃತಶಿಲಾ ಪುತ್ಥಳಿಯ ಪ್ರತಿಷ್ಠಾಪನೆಯು ನೂತನವಾಗಿ ನಿರ್ಮಿಸಲಾದ ಬಸವ ಮಂಟಪದಲ್ಲಿ ಪೂಜ್ಯ ಮಾತಾಜಿಯವರ ಹಸ್ತದಿಂದ ನೆರವೇರಿತು. ನಂತರ ಲಿಂಗಾಯತ ಧರ್ಮ ಸಮ್ಮೇಳನವು ಜರುಗಿತು.

ಕನ್ನಡ ಸಾಹಿತ್ಯ ಸಮ್ಮೇಳನ ಮೆರವಣಿಗೆಯಲ್ಲಿ ಶರಣ ದರ್ಶನ

ಚಿತ್ರದುರ್ಗ ರಾಷ್ಟ್ರೀಯ ಬಸವ ದಳ ದ ಶರಣ.ಜಿ.ಸಿ.ಮನೋಹರ್, ಶರಣೆ. ಶಾರದಮ್ಮ ಚನ್ನಪ್ಪ ಟ್ರಾಕ್ಟರ್ ಮೇಲೆ ವಿಶೇಷ ಮಂಟಪ ಮಾಡಿಸಿದ್ದರು. ಚಿತ್ರನಾಯಕನ ಹಳ್ಳಿ ರಾಷ್ಟ್ರೀಯ ಬಸವ ದಳದ ಶರಣ. ವೆಂಕಟೇಶ್ ರೆಡ್ಡಿ, ಶರಣೆ.ಸುನಂದಾರವರು ಶರಣರ ಪಾತ್ರಧಾರಿಗಳನ್ನು ತಯಾರು ಮಾಡಿದರು. ಮೆರವಣಿಗೆಯಲ್ಲಿ ಸಾಗಿದ ಶರಣ ದರ್ಶನ ಸ್ತಬ್ಧ ಚಿತ್ರವು ಎಲ್ಲರ ವಿಶೇಷ ಮೆಚ್ಚುಗೆಗೆ ಪ್ರಾಪ್ತವಾಯಿತು.

ಚೆನ್ನೈ ಸಮ್ಮೇಳನದ ನಂತರ ದಕ್ಷಿಣ ಭಾರತದ ಪ್ರವಾಸ

5-5-2009ರಂದು ಚೆನ್ನೈನಿಂದ ಹೊರಟು ಪಾಂಡಿಚೇರಿ, ತಂಜಾವೂರು, ರಾಮೇಶ್ವರ,
ಮಧುರೈ, ಕನ್ಯಾಕುಮಾರಿ ಮತ್ತು ಸುತ್ತಮುತ್ತಲ ಪ್ರವಾಸಿ ಸ್ಥಳಗಳನ್ನು ನೋಡಿ ದಿನಾಂಕ 11-05-
09ರಂದು ಬೆಳಗ್ಗೆ ಬೆಂಗಳೂರು ಸೇರುವ ಹಾಗೆ ಶರಣ ಇಂದುಶೇಖರ ರವರು ವೈಯಕ್ತಿಕವಾಗಿ ವ್ಯವಸ್ಥೆ
ಮಾಡಿದ್ದಾರೆ. ಪ್ರವಾಸದ ದರ ಒಬ್ಬರಿಗೆ 7500/-ರೂ. ಇದರಲ್ಲಿ ಪ್ರಯಾಣ, ಊಟ, ವಸತಿ, ಪ್ರವೇಶ
ಶುಲ್ಕ ಮತ್ತು ಚೆನ್ನೈನಿಂದ ಬೆಂಗಳೂರಿಗೆ ಬರುವ ಶುಲ್ಕ ಸೇರಿವೆ. ಸಮ್ಮೇಳನಕ್ಕೆ ಹೋಗುವ ಖರ್ಚು
ಮತ್ತು ಸಮ್ಮೇಳನದ ಪ್ರತಿನಿಧಿ ಶುಲ್ಕ ತಾವೇ ಭರಿಸಿಕೊಳ್ಳಬೇಕು. ವಿವರಗಳಿಗಾಗಿ ಇಂದುಶೇಖರರವರನ್ನು
ಈ ದೂರವಾಣಿಗೆ ಸಂಪರ್ಕಿಸಿ: 9945684230



ದಿ.11-1-2009 ರಂದು 22ನೇ ಶರಣಮೇಳದ ಧಾರ್ಮಿಕ ಸಮಾನತೆ ಗೋಷ್ಠಿಯನ್ನು ಉದ್ಘಾಟಿಸುತ್ತಿರುವ ಸಂಸದರಾದ ಶ್ರೀ ಗದ್ದೀಗೌಡರು,ಪೂಜ್ಯ ಮಾತಾಜಿ, ಗಂಗಾಮಾತಾಜಿ, ಜಿ.ಜಿ.ಪಾಟೀಲ್ ಮತ್ತಿತರರು.



ದಿ.12-1-2009 ರಂದು 22ನೇ ಶರಣಮೇಳದ ಧರ್ಮ ಚಿಂತನ ಗೋಷ್ಠಿಯನ್ನು ಉದ್ಘಾಟಿಸುತ್ತಿರುವ ಪೂಜ್ಯ ಶ್ರೀ ಜಗದ್ಗುರು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಪೂಜ್ಯ ಶ್ರೀ ಜಗದ್ಗುರು ಚಂದ್ರಶೇಖರ ಶಿವಯೋಗಿ ರಾಜೇಂದ್ರ ಸ್ವಾಮೀಜಿ




ದಿ.14-1-2009 ಲಿಂಗಾಯತ ಧರ್ಮ ಸಂಸ್ಥಾಪನಾ ದಿನದಂದು ಧ್ಯಾನ ಮಂದಿರದಲ್ಲಿ ಗುರು ಬಸವಣ್ಣವರಿಗೆ ಪೂಜೆ ಸಲ್ಲಿಸುತ್ತಿರುವ ಜಂಗಮ ಮೂರ್ತಿಗಳು.



ದಿ.14-1-2009 ಲಿಂಗಾಯತ ಧರ್ಮ ಸಂಸ್ಥಾಪನಾ ದಿನದಂದು ಪಥಸಂಚಲನದಲ್ಲಿ ಗುರುಬಸವಣ್ಣನವರನ್ನು ಆಡಿ,ಹಾಡಿ ಕೊಂಡಾಡುತ್ತಿರುವ ಶರಣ ಸಮೂಹ



ಕೇಂದ್ರ ವಿಶ್ವವಿದ್ಯಾಲಯವನ್ನು ಬಸವಕಲ್ಯಾಣದಲ್ಲಿ ಸ್ಥಾಪಿಸಬೇಕೆಂದು ಹುಬ್ಬಳ್ಳಿ-ಧಾರವಾಡ ರಾಷ್ಟ್ರೀಯ ಬಸವ ದಳವತಿಯಿಂದ ಜಿಲ್ಲಾಧಿಕಾರಿಯರಿಗೆ ಮನವಿ ಸಲ್ಲಿಸಲಾಯಿತು



ಕೇಂದ್ರ ವಿಶ್ವವಿದ್ಯಾಲಯವನ್ನು ಬಸವಕಲ್ಯಾಣದಲ್ಲಿ ಸ್ಥಾಪಿಸಬೇಕೆಂದು ಭದ್ರಾವತಿ ರಾಷ್ಟ್ರೀಯ ಬಸವ ದಳವತಿಯಿಂದ ತಹಸಿಲ್ದಾರಿಗೆ ಮನವಿ ಸಲ್ಲಿಸಲಾಯಿತು



ಚಿತ್ರದುರ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ರಾಷ್ಟ್ರೀಯ ಬಸವದಳದವರಿಂದ ಆಕರ್ಷಕ ಪಥಸಂಚಲನ





ಚಿತ್ರದುರ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ರಾಷ್ಟ್ರೀಯ ಬಸವದಳದವರಿಂದ ಶರಣ ದರ್ಶನ





ಶರಣ ಮೇಳ ವೇದಿಕೆಯನ್ನು ಅಲಂಕರಿಸಿದ ಪೂಜ್ಯ ಮಾತಾಜಿ, ಜಂಗಮ ಮೂರ್ತಿಗಳು ಮತ್ತು ಮಾನ್ಯ ಸಚಿವ ರೇವುನಾಯಕ್ ಬೆಳಮಗಿ





ಶರಣ ಮೇಳದಲ್ಲಿ ಭಾಗಿಯಾಗಿ ಜೀವನವನ್ನು ಪಾವನ ಮಾಡಿಕೊಂಡಿರುವ ಶರಣ ಸಮೂಹ

ದಿ.12ರಂದು ಶರಣ ಮೇಳದ ಧಾರ್ಮಿಕ ಸಮಾನತೆ ಗೋಷ್ಠಿಯನ್ನು ಉದ್ಘಾಟಿಸುತ್ತಿರುವ ಮಾನ್ಯ ಸಚಿವ ಶಿವರಾಜ ತಂಗಡಗಿ

